ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 30 ಮಂಗಳವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 75 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿದ್ಯುತ್ ಖಾಸಗೀಕರಣ ಮಾಡಲ್ಲ

ಆದರೆ, ನೀವು 2028ಕ್ಕೆ ನಮ್ಮ ಕೈಬಿಡಬಾರದು...!!

■ ಸಿಎಂ ಡಿ.ಕೆ.ಶಿವಕುಮಾರ್ ಅಭಯ ■ ವಿದ್ಯುತ್ ಪ್ರಸರಣ ನಿಗಮದ ನೌಕರರ ಬೇಡಿಕೆಗೆ ಅಸ್ತು

ಬೆಂಗಳೂರು, ಜೂನ್ 29(ಕೆಎಂಶಿ)– ವಿದ್ಯುತ್ ಸರಬರಾಜು ವ್ಯವಸ್ಥೆ ಖಾಸಗೀಕರಣ ಇಲ್ಲ ಎಂದು ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಘೋಷಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಮತ್ತು ಅಸೋಸಿಯೇಷನ್‌ಗಳ ಒಕ್ಕೂಟ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನೌಕರರ ಮಾತಿಗೆ ಒಪ್ಪಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಈ ಕುರಿತು ನನ್ನೊಬ್ಬನ ತೀರ್ಮಾನ ಸಾಧ್ಯವಿಲ್ಲ, ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಸಹೋದ್ಯೋಗಿಗಳ ಜೊತೆ ಚರ್ಚಿಸಿ, ನಿಮ್ಮಗಳ ಮನವಿಗೆ ಸ್ಪಂದಿಸುತ್ತೇನೆ. ನಿಮ್ಮ ನಂಬಿಕೆಗೆ ದ್ರೋಹ ಬಗೆಯುವುದಿಲ್ಲ, ನೀವೂ 2028ರ ಚುನಾವಣೆಯಲ್ಲಿ ನಮ್ಮನ್ನು ಮತ್ತೆ ಅಧಿಕಾರಕ್ಕೆ ತರುವ ಭರವಸೆ ನೀಡಿ ಎನ್ನುವ ಮೂಲಕ ನೌಕರರ ವಾಗ್ದಾನ ಪಡೆದರು.

ಕಾರ್ಯಕ್ರಮದ ಮಧ್ಯೆಯೇ ನನ್ನ ಸಹೋದ್ಯೋಗಿ ಕೆ.ಜೆ.ಜಾರ್ಜ್ ಹಾಗೂ ಎಲ್ಲಾ ಎಸ್ಕಾಂ ಅಧ್ಯಕ್ಷರುಗಳು ವಿದ್ಯುತ್ ಸರಬರಾಜು ವ್ಯವಸ್ಥೆ ಖಾಸಗೀಕರಣ ಬೇಡ ಎಂದು ಮನವಿ ಮಾಡಿದರು. ಹಿಂದಿನ ಬಿಜೆಪಿ ಸರ್ಕಾರ ಖಾಸಗೀಕರಣ ಮಾಡಲು ಮುಂದಾದಾಗ ನೀವು ಯಾರೂ ವಿರೋಧಿಸಲಿಲ್ಲ. ನಾನು ಅಧಿಕಾರಕ್ಕೆ ಬರುತ್ತಿದ್ದಂತೆ ವಿರೋಧ ವ್ಯಕ್ತಪಡಿಸುತ್ತಿದ್ದೀರಿ.

ಅಂದು ಇಲ್ಲದ್ದು, ಇಂದೇಕೆ ಎಂಬುದಾಗಿ ಪ್ರಶ್ನಿಸಿದ ಶಿವಕುಮಾರ್, ನಿಮ್ಮ ಧ್ವನಿಗೆ ನನ್ನ ಧ್ವನಿ ಕೂಡಿಸಲು ನಾನು ಬದ್ಧ, ಆದರೆ, ಮುಂದೆ ನೀವೆಲ್ಲಾ ನನ್ನ ಕೈಹಿಡಿಯಬೇಕು. ನೀವು ವಿದ್ಯುತ್ ಮಾರ್ಗ ಎಳೆದಿದ್ದೀರಿ. ಇದೀಗ ಖಾಸಗಿಯವರು ಅದರ ಮೇಲೆ ದರ್ಬಾರ್ ಮಾಡಲು ಬರುತ್ತಿದ್ದಾರೆ. ಅದಕ್ಕೆ ನಾನು ಅವಕಾಶ ನೀಡುವುದಿಲ್ಲ. ಹಿಂದೆ ಬಿಜೆಪಿ ಅಧಿಕಾರದಲ್ಲಿ ಇದ್ದಾಗ, ಹಣಕ್ಕಾಗಿ ಜನವಿರೋಧಿ ನೀತಿಗಳನ್ನು ಕೈಗೊಂಡಿದ್ದಾರೆ. ಅವರು ಅಧಿಕಾರ ದಲ್ಲಿ ಇದ್ದಾಗ, ಇಂಧನ ಇಲಾಖೆಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಾಗಲಿಲ್ಲ.



ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಮತ್ತು ಅಸೋಸಿಯೇಷನ್‌ಗಳ ಒಕ್ಕೂಟ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಈ ವೇಳೆ ಇಂಧನ ಸಚಿವ ಕೆ.ಜೆ. ಜಾರ್ಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇಂಧನ ಇಲಾಖೆ ಸಚಿವನಾಗಿ ನಾನು ಕಾರ್ಯನಿರ್ವಹಿಸುವ ವೇಳೆ, ನೂರಾರು ಲೈನ್‌ಮ್ಯಾನ್ ಹಾಗೂ 4ರಿಂದ 5 ಸಾವಿರ ಇಂಜಿನಿಯರ್‌ಗಳ ನೇರ ನೇಮಕಾತಿ ಮಾಡಿದೆ, ಅದಾದರೂ ನಿಮ್ಮ ಗಮನದಲ್ಲಿದೆಯೇ ಎಂದು ಪ್ರಶ್ನಿಸಿದರು. ನನ್ನ ಮೇಲೆ ನಂಬಿಕೆ, ವಿಶ್ವಾಸ ಇಟ್ಟಿದ್ದೀರಿ. ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ, ಮುಂದಿನ ಸಂಪುಟ ಸಭೆಯಲ್ಲಿ ಚರ್ಚಿಸಿ, ಟಾಟಾ ಸಂಸ್ಥೆಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಜವಾಬ್ದಾರಿ ನೀಡುವ ಕುರಿತು ಅಂತಿಮ ತೀರ್ಮಾನ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಖಾಸಗೀಕರಣದ ಪ್ರಶ್ನೆಯೇ ಇಲ್ಲ : ಇದೇ ಸಂದರ್ಭದಲ್ಲಿ ಮಾತನಾಡಿದ ಇಂಧನ ಸಚಿವ ಕೆ.ಜೆ.ಜಾರ್ಜ್, ರಾಜ್ಯದ ಜನರಿಗೆ ವಿದ್ಯುತ್ ಪೂರೈಸಲು ಇಂಧನ ಇಲಾಖೆ ಬಲಿಷ್ಠವಾಗಿದ್ದು, ಖಾಸಗೀಕರಣಗೊಳಿಸುವ ■6ನೇ ಪುಟಕ್ಕೆ

ಕುತ್ತಿಗೆ ಬಿಗಿದು ಪತಿಯ ಕೊಂದು ಹೃದಯಾಘಾತದ ಕತೆ ಕಟ್ಟಿದ ಶಿಕ್ಷಕಿ!

● ಮೈಸೂರಲ್ಲಿ ಆಘಾತಕಾರಿ ಘಟನೆ ● ಆರೋಪಿ ಪತ್ನಿಯ ಬಂಧಿಸಿದ ಪೊಲೀಸರು



ಕೊಲೆಯಾದ ನಿತ್ಯಾನಂದ



ಕೊಲೆಯಾದ ಮನೆಯಲ್ಲಿ ಪೊಲೀಸರು ಮಹಜರು ನಡೆಸುತ್ತಿರುವುದು.



ಕೊಲೆ ಆರೋಪಿ ಸುಶೀಲಾ.

ಮೈಸೂರು, ಜೂ.29(ಎಂಟಿವೈ)– ಖಾಸಗಿ ಶಾಲೆ ಶಿಕ್ಷಕಿ, ತನ್ನ ಪತಿಯನ್ನ ಹತ್ಯೆಗೈದು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆಂದು ಕತೆ ಕಟ್ಟಿದ ಘಟನೆ ಮೈಸೂರಿನ ಕುವೆಂಪುನಗರದಲ್ಲಿ ಇಂದು ನಡೆದಿದ್ದು, ಕೆಲವೇ ಗಂಟೆಗಳಲ್ಲಿ ಸತ್ಯ ಸಂಗತಿ ಹೊರಬಿದ್ದು, ಆಕೆ ಕಂಬಿ ಎಣಿಸುವಂತಾಗಿದೆ. ಮೃತರ ಸಹೋದರ ನೀಡಿದ ದೂರಿನ ಮೇರೆಗೆ ಆರೋಪಿ ಮಹಿಳೆಯನ್ನು ಪೊಲೀಸರು ಈಗ ಬಂಧಿಸಿದ್ದಾರೆ.

ಮೈಸೂರಿನ ಕುವೆಂಪುನಗರದ ಹುಡ್ಕೋ ಬಡಾವಣೆ ನಿವಾಸಿ, ವಾಹನ ಶೋ ರೂಮ್‌ವೊಂದರ ಮ್ಯಾನೇಜರ್ ಆಗಿದ್ದ ನಿತ್ಯಾನಂದ(50), ಪತ್ನಿಯಿಂದಲೇ ಹತ್ಯೆಯಾದ ದುರ್ದೈವಿ. ಆರೋಪಿ ಸುಶೀಲಾ (44)ಳನ್ನು ಕುವೆಂಪುನಗರ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಬಳಿಕ ಆಕೆಯನ್ನು ಬಂಧಿಸಿದ್ದಾರೆ.

ಕೌಟುಂಬಿಕ ಕಲಹ?: ನಿತ್ಯಾನಂದ ಹಾಗೂ ಸುಶೀಲಾ ವಿವಾಹವಾಗಿ 20 ವರ್ಷಗಳಾಗಿದ್ದು, ದಂಪತಿಗೆ ಮಕ್ಕಳಾಗಿರಲಿಲ್ಲ. ಕಳೆದ ಕೆಲ ವರ್ಷಗಳಿಂದ ಇವರ ನಡುವೆ ಸಣ್ಣ–ಪುಟ್ಟ ವಿಚಾರಕ್ಕೂ ಗಲಾಟೆಯಾಗುತ್ತಿತ್ತು ಎನ್ನಲಾಗಿದೆ. ಕೌಟುಂಬಿಕ ಕಲಹ ನಿರಂತರವಾಗಿ ನಡೆಯುತ್ತಿದ್ದರೂ ದೊಡ್ಡಮಟ್ಟದ ರಂಪಾಟವೇನೂ ನಡೆದಿರಲಿಲ್ಲ. ಆದರೂ ಶಿಕ್ಷಕಿ ಸುಶೀಲಾ ತಮ್ಮ ಪತಿಯನ್ನು ಯಾವ ■6ನೇ ಪುಟಕ್ಕೆ

ನಿತ್ಯಾನಂದ ಹತ್ಯೆ ಪೂರ್ವ ನಿಯೋಜಿತವೆ...!?

ಇಬ್ಬರು ಮನೆಯೊಳಗೆ ಹೋಗುವ ದೃಶ್ಯ ಸಿಸಿಟಿವಿ ಫುಟೇಜ್‌ನಲ್ಲಿ ಸೆರೆ!!

ಮೈಸೂರು: ನಿತ್ಯಾನಂದ ಅವರನ್ನು ಪೂರ್ವಯೋಜಿತವಾಗಿ ಹತ್ಯೆ ಮಾಡಲಾಗಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ. ಕೋಲಾರ ಮೂಲದ ವ್ಯಕ್ತಿ ಹಾಗೂ ಮತ್ತೋರ್ವನೊಂದಿಗೆ ಸೇರಿ ಶಿಕ್ಷಕಿ ಸುಶೀಲ ತನ್ನ ಪತಿಯನ್ನು ಹತ್ಯೆ ಮಾಡಿರಬಹುದೆಂದು ಹೇಳಲಾಗುತ್ತಿದೆ. ನಿನ್ನೆ ರಾತ್ರಿ ಇಬ್ಬರು ನಿತ್ಯಾನಂದ ಅವರ ಮನೆಯೊಳಗೆ ಹೋಗಿದ್ದು ಸಮೀಪದ ಸಿಸಿ ಟಿವಿ ಫುಟೇಜ್‌ನಲ್ಲಿ ಸೆರೆಯಾಗಿದೆ. ಮನೆ ಬಳಿಯ ಹೋಟೆಲ್ ವೊಂದರ ಸಿಸಿಟಿವಿ ಫುಟೇಜ್, ಡಿವಿಆರ್ ಅನ್ನು ■6ನೇ ಪುಟಕ್ಕೆ

ಗೃಹಜ್ಯೋತಿ ರಾಜ್ಯದವರ ಮನೆ ಬೆಳಗಬೇಕು...

ಬೆಂಗಳೂರು, ಜೂ.29– ರಾಜ್ಯದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹ ಜ್ಯೋತಿ ಯೋಜನೆಯಲ್ಲಿ ನಡೆಯುತ್ತಿರುವ ಅಕ್ರಮಗಳ ಪತ್ತೆಗೆ ರಾಜ್ಯ ಸರ್ಕಾರ ಮುಂದಾಗಿದೆ. ಈ ಯೋಜನೆ ಕೇವಲ ಕರ್ನಾಟಕದ ನಿವಾಸಿಗಳಿಗೆ ಮಾತ್ರ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಗೃಹ ಜ್ಯೋತಿ

ರಾಜ್ಯದಲ್ಲಿ ಸುಮಾರು ಒಂದು ಕೋಟಿ 64 ಲಕ್ಷ ಗ್ರಾಹಕರು ಗೃಹಜ್ಯೋತಿ ಸೌಲಭ್ಯ ಪಡೆಯುತ್ತಿದ್ದಾರೆ. ಆದರೆ, ಇದರಲ್ಲಿ ವ್ಯಾಪಕ ಪ್ರಮಾಣದ ಅಕ್ರಮ ನಡೆಯುತ್ತಿದೆ ಎಂದು ಸರ್ಕಾರಕ್ಕೆ ಇಂಧನ ಇಲಾಖೆ ವರದಿ ಸಲ್ಲಿಸಿದೆ. ಅದರ ಆಧಾರದಲ್ಲಿ ಅಕ್ರಮ ಪತ್ತೆ ಹಚ್ಚಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಹೇಳಿದರು.

ಈ ಯೋಜನೆಯ ಲಾಭ ಕರ್ನಾಟಕದಲ್ಲಿ ಮೂಲದಿಂದಲೇ ನೆಲೆಸಿರುವವರಿಗೆ ಮಾತ್ರ ಸಿಗಬೇಕು. ಇಲ್ಲಿ ಕೇವಲ ಬದುಕಲು ಬಂದಿರುವ ಹೊರ ರಾಜ್ಯದವರಿಗೆ ಹಾಗೂ ಇಲ್ಲಿನ ಮತದಾರರಲ್ಲದವರಿಗೆ ಯೋಜನೆಯ ಲಾಭ ಸಿಗಬಾರದು ಈ ನಿಟ್ಟಿನಲ್ಲಿ ಸರ್ಕಾರ ನಿಯಮಗಳನ್ನು ರೂಪಿಸುತ್ತಿದೆ ಎಂದು ಹೇಳಿದರು.

ಮೀಟರ್ ರೀಡಿಂಗ್‌ಗೆ ಬರುವ ಅಧಿಕಾರಿಗಳು ಫಲಾನುಭವಿಗಳಿಗೆ ಅರ್ಜಿ ಒಂದನ್ನು ನೀಡುತ್ತಾರೆ ಇಲಾಖೆಯ ವತಿಯಿಂದಲೇ ಈ ಅರ್ಜಿಯನ್ನು ನೀಡಲಾಗುವುದು ಇದರಲ್ಲಿ ■6ನೇ ಪುಟಕ್ಕೆ

ಕೊಳ್ಳೇಗಾಲ ಬಳಿ ಕೆಎಸ್‌ಆರ್‌ಟಿಸಿ ಬಸ್ ಉರುಳಿ ಇಬ್ಬರು ಸಾವು


45 ಮಂದಿಗೆ ಗಾಯ

ಮಹದೇಶ್ವರ ಬೆಟ್ಟದಲ್ಲಿ ಕಾರ ಹುಣ್ಣಿಮೆ ಪೂಜೆ ಮುಗಿಸಿಕೊಂಡು ಬರುತ್ತಿದ್ದಾಗ ದುರಂತ





ಪುಟ್ಟನಂಜಮ್ಮ



ಮಹೇಶ

ಕೊಳ್ಳೇಗಾಲ, ಜೂ.29– ಮಲೆಮಹದೇಶ್ವರ ಬೆಟ್ಟದಿಂದ ಹಿಂತಿರುಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸೊಂದು ರಸ್ತೆ ಬದಿಯ ಫಲಕಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದ ಪರಿಣಾಮ ಇಬ್ಬರು ಪ್ರಯಾಣಿಕರು ಸಾವನ್ನಪ್ಪಿ, 45ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡಿರುವ ಧಾರುಣ ಘಟನೆ ತಾಲೂಕಿನ ಮಧುವನಹಳ್ಳಿ ಬಳಿಯ ಕೆಶಿಫ್ ರಸ್ತೆಯಲ್ಲಿ ಸಂಭವಿಸಿದೆ.

ಕೊಳ್ಳೇಗಾಲದ ಭೀಮನಗರದ ನಿವಾಸಿ ಅಂಗನವಾಡಿ ಶಿಕ್ಷಕಿ ಪುಟ್ಟನಂಜಮ್ಮ (60) ಮತ್ತು ಕುದೇರು ಗ್ರಾಮದ ಕೂಲಿ ಕಾರ್ಮಿಕ ಮಹೇಶ (50) ದುರಂತದಲ್ಲಿ ಸಾವನ್ನಪ್ಪಿದ್ದು, ತೀವ್ರವಾಗಿ ಗಾಯಗೊಂಡಿರುವ ಗಾಯಾಳುಗಳನ್ನು ಕೊಳ್ಳೇಗಾಲ, ಚಾಮರಾಜನಗರ ಮತ್ತು ಮೈಸೂರಿನ ವಿವಿಧ ಆಸ್ಪತ್ರೆಗಳಿಗೆ ದಾಖಲು ಮಾಡಲಾಗಿದೆ.

ಸೋಮವಾರವಾದ ಇಂದು ಕಾರ ಹುಣ್ಣಿಮೆ ಕಾರಣ ಮಹದೇಶ್ವರ ಬೆಟ್ಟದಲ್ಲಿ ಭಕ್ತ ಸಾಗರವೇ ನೆರೆದು ಮಾದಪ್ಪನ ದರ್ಶನ ಪಡೆಯುವುದು ವಿಶೇಷ. ಅಂತೆಯೇ ಮಹದೇಶ್ವರ ಬೆಟ್ಟಕ್ಕೆ ಬರುವ ಮತ್ತು ಹೋಗುವ ಎಲ್ಲಾ ಕೆಎಸ್‌ಆರ್‌ಟಿಸಿ, ಖಾಸಗಿ ಬಸ್ಸು ಮತ್ತು ವಾಹನಗಳಲ್ಲಿ ಭಕ್ತರು ಕಿಕ್ಕಿರಿದು ತುಂಬಿದ್ದಾರೆ. ಇಂದು ಸಂಜೆ ಮಹದೇಶ್ವರ ಬೆಟ್ಟದಿಂದ ಕೊಳ್ಳೇಗಾಲಕ್ಕೆ ಹಿಂತಿರುಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ(ಕೆಎ 52 ಎಫ್ 3964) ಪ್ರಯಾಣಿಕರು ಕಿಕ್ಕಿರಿದು ತುಂಬಿದ್ದರು. ಮಧುವನಹಳ್ಳಿ ಸಮೀಪ ಚಾಲಕನ ನಿಯಂತ್ರಣ ತಪ್ಪಿದ ■6ನೇ ಪುಟಕ್ಕೆ

ವಾಹನಗಳ ಎಮಿಷನ್ ಟೆಸ್ಟ್ ಪ್ರಮಾಣ ಪತ್ರದಲ್ಲಿ ಬಾರ್ ಕೋಡ್ ಸಿಸ್ಟಮ್ ಜಾರಿ

● ಈ ಹಿಂದೆ ಇದ್ದ ಹಾಲೋಗ್ರಾಮ್ ಸ್ಟಿಕ್ಕರ್‌ಗೆ ತಿಲಾಂಜಲಿ ● ವಾಹನಗಳ ಹೊಗೆ ತಪಾಸಣೆಗೆ ಹೊಸ ವಿಧಾನ ಬಳಕೆ

ಮೈಸೂರು,ಜೂ.29(ಎಂಟಿವೈ)–ಪರಿಸರಕ್ಕೆ ಹಾನಿಕಾರಕ ಹೊಗೆ ಸೂಸುವ ವಾಹನಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಾರಿಗೆ ಇಲಾಖೆ, ಎಮಿಷನ್ ಟೆಸ್ಟ್(ಹೊಗೆ ಪರೀಕ್ಷೆ) ಪದ್ಧತಿಗೆ ಕಟ್ಟುನಿಟ್ಟಿನ ನಿಯಮ ಅನುಸರಿಸುತ್ತಿದ್ದು, ಪ್ರಮಾಣ ಪತ್ರದಲ್ಲಿ ಈ ಹಿಂದೆ ಅಂಟಿಸಲಾಗುತ್ತಿದ್ದ 'ಹಾಲೋಗ್ರಾಮ್ ಸ್ಟಿಕ್ಕರ್'ಗೆ ತಿಲಾಂಜಲಿ ನೀಡಿ ಬಾರ್‌ಕೋಡ್ ವ್ಯವಸ್ಥೆ ಜಾರಿಗೊಳಿಸಿದೆ.


ರಾಜ್ಯದಾದ್ಯಂತ ಆನ್‌ಲೈನ್ ವ್ಯವಸ್ಥೆಯಲ್ಲಿ ಸಾಫ್ಟ್‌ವೇರ್ ಮೂಲಕ ವಾಹನಗಳ ಎಮಿಷನ್ ಟೆಸ್ಟ್ (ಹೊಗೆ ಪರೀಕ್ಷೆ) ನಡೆಸಿ ಈ ಹಿಂದೆ ನೀಡಲಾಗುತ್ತಿದ್ದ ಪ್ರಮಾಣ ಪತ್ರದಲ್ಲಿ ಹಾಲೋಗ್ರಾಂ ಸ್ಟಿಕ್ಕರ್ ಅಂಟಿಸಿ ಸಹಿ ಮಾಡಿಕೊಡಲಾಗುತ್ತಿತ್ತು. ಆದರೆ, ಇದೀಗ ರಾಜ್ಯಾದ್ಯಂತ ಹಾಲೋಗ್ರಾಮ್ ಸ್ಟಿಕ್ಕರ್ ಪದ್ಧತಿಯನ್ನು ಸ್ಥಗಿತಗೊಳಿಸಲಾಗಿದ್ದು, ಸಾರಿಗೆ ಕಚೇರಿ ದಾಖಲೆಗಳಲ್ಲಿ ಗೋಚರವಾಗುವಂತೆ ಸಾಫ್ಟ್‌ವೇರ್ ಮೂಲಕ ಬಾರ್‌ಕೋಡ್ ವ್ಯವಸ್ಥೆಯಿರುವ ಪ್ರಮಾಣ ಪತ್ರವನ್ನು ನೀಡುವ ಹೊಸ ಪದ್ಧತಿಯನ್ನು ಕಳೆದ ಒಂದು ತಿಂಗಳಿಂದ ಜಾರಿಗೊಳಿಸಲಾಗಿದೆ.

ಹೊಸ ಪದ್ಧತಿಯಿಂದಾಗಿ ಹೊಗೆ ಪರೀಕ್ಷೆಯ ಪ್ರಮಾಣದ ಪತ್ರದ ಕಾಗದ ಹಾಗೂ ಶೈಲಿ ಬದಲಾಗಿದ್ದು, ಅದರಲ್ಲಿ ವಾಹನದ ಸಂಖ್ಯೆ, ತಯಾರಾದ ವರ್ಷ, ಹೊಗೆ ಪ್ರಮಾಣ, ಹೊಗೆಯಲ್ಲಿ ಪರಿಸರಕ್ಕೆ ಅಪಾಯ ಆಗುವ ಅಂಶ ಇರುವಿಕೆ ಸೇರಿದಂತೆ ಇನ್ನಿತರ ಮಾಹಿತಿ ಒಳಗೊಂಡಿರುತ್ತದೆ. ಎಲ್ಲವೂ ಆನ್‌ಲೈನ್‌ನಲ್ಲಿಯೇ ಆಗುವುದರಿಂದ ಯಾವುದೇ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ.


ಪರೀಕ್ಷೆ ಸ್ಥಗಿತ ವದಂತಿ: ಕೆಲ ಸಾಮಾಜಿಕ ಜಾಲತಾಣಗಳಲ್ಲಿ ಹಾಲೋಗ್ರಾಂ ಸ್ಟಿಕ್ಕರ್ ಅಭಾವದಿಂದ ಹೊಗೆ ಪರೀಕ್ಷಾ ಪ್ರಮಾಣ ಪತ್ರ ನೀಡಲಾಗದ ಕಾರಣ, ವಾಹನಗಳ ಎಮಿಷನ್ ಟೆಸ್ಟ್ ಸ್ಥಗಿತಗೊಂಡಿದೆ ಎಂಬ ವದಂತಿ ಹರಡಿತ್ತು. ಆದರೆ, ಮೈಸೂರು ಸೇರಿದಂತೆ ರಾಜ್ಯದಾದ್ಯಂತ ಹೊಗೆ ಪರೀಕ್ಷಾ ಕೇಂದ್ರದಲ್ಲಿ ಯಾವುದೇ ಅಡೆತಡೆಯಿಲ್ಲದೆ ವಾಹನಗಳ ಎಮಿಷನ್ ಟೆಸ್ಟ್ ನಡೆಯುತ್ತಿದೆ. ಮೈಸೂರಿನ ಎರಡೂ ಆರ್‌ಟಿಓ ಕಚೇರಿ ಸಮೀಪವಿರುವ ಹಲವು ಹೊಗೆ ಪರೀಕ್ಷಾ ಕೇಂದ್ರದಲ್ಲಿ ನಿರಂತರವಾಗಿ ವಾಹನಗಳ ಹೊಗೆ ಪರೀಕ್ಷೆ ನಡೆಯುತ್ತಿದ್ದು, ಹೊಸ ಮಾದರಿಯ ಪ್ರಮಾಣ ಪತ್ರ ನೀಡಲಾಗುತ್ತಿದೆ.




ಮೈಸೂರಿನ ಆರ್‌ಟಿಓ ಕಚೇರಿ ಸಮೀಪದ ಹೊಗೆ ತಪಾಸಣಾ ಕೇಂದ್ರದಲ್ಲಿ ವಾಹನಗಳ ಹೊಗೆ ಪರೀಕ್ಷೆ ನಡೆಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.



ಹಳೆ ಪ್ರಮಾಣ ಪತ್ರದಲ್ಲಿ ಹಾಲೋಗ್ರಾಮ್ ಸ್ಟಿಕ್ಕರ್ ಇರುವುದನ್ನು ಚಿತ್ರದಲ್ಲಿ ಕಾಣಬಹುದು.



ಹೊಸ ಪ್ರಮಾಣ ಪತ್ರದಲ್ಲಿ ಬಾರ್‌ಕೋಡ್ ವ್ಯವಸ್ಥೆ.

ಮದ್ಯಸೇವಿಸಿ ಬಿಲ್ ಪಾವತಿಸುವ ವಿಚಾರಕ್ಕೆ ಗಲಾಟೆ

ಯುವಕರ ಗುಂಪಿನಿಂದ ಹೋಟೆಲ್ ಮ್ಯಾನೇಜರ್, ಸಿಬ್ಬಂದಿ ಮೇಲೆ ಹಲ್ಲೆ



ಯುವಕರ ಗುಂಪು ವ್ಯವಸ್ಥಾಪಕನ ಮೇಲೆ ಹಲ್ಲೆಯ ನಡೆಸುವ ಸಿಸಿಟಿವಿ ದೃಶ್ಯ ವೈರಲ್

ಮೈಸೂರು, ಜೂ.29(ಎಸ್‌ಪಿಎನ್)–ಮದ್ಯ ಸೇವನೆ ಮಾಡಿ ಬಿಲ್ ಪಾವತಿಸುವ ವಿಚಾರದಲ್ಲಿ ಹೋಟೆಲ್ ವ್ಯವಸ್ಥಾಪಕ ಹಾಗೂ ಸಿಬ್ಬಂದಿ ಮೇಲೆ ಯುವಕರ ಗುಂಪೊಂದು ಹಲ್ಲೆ ನಡೆಸಿರುವ ಘಟನೆ ಶುಕ್ರವಾರ ರಾತ್ರಿ ಎಂಜಿ ರಸ್ತೆಯಲ್ಲಿ ನಡೆದಿದ್ದು, ಈ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ (ಸಿಸಿಟಿವಿ ದೃಶ್ಯಾವಳಿ) ವೈರಲ್ ಆಗಿದೆ.

ಶುಕ್ರವಾರ ಸಂಜೆ ಯುವಕರ ಗುಂಪೊಂದು ಮದ್ಯ ಸೇವನೆಗೆಂದು ಹೋಟೆಲ್ ಸಿಫಾಯಿ ಗ್ರಾಂಡೆಗೆ ಬಂದಿದ್ದಾರೆ. ಈ ಯುವಕರ ಗುಂಪು ಕಂಠಪೂರ್ತಿ ಕುಡಿದು, ಬಗೆಬಗೆಯ ಆಹಾರ ಸೇವನೆ ಮಾಡಿದ್ದಾರೆ. ಈ ಸಂಬಂಧ 17 ಸಾವಿರ ರೂ. ಬಿಲ್ ಪಾವತಿ ಮಾಡುವಂತೆ ಹೋಟೆಲ್ ಸಿಬ್ಬಂದಿ, ಯುವಕರಿಗೆ ಬಿಲ್ ನೀಡಿದಾಗ ನಾವು ಅಷ್ಟೊಂದು ಪ್ರಮಾಣ ಮದ್ಯ ಸೇವನೆ ಮಾಡಿಲ್ಲ ಎಂದು ಸಣ್ಣದಾಗಿ ಗಲಾಟೆ ಆರಂಭಿಸಿ, ವ್ಯವಸ್ಥಾಪಕನ ಬಳಿ ಕ್ಯಾತೆ ತೆಗೆದಿದ್ದಾರೆ.

ಈ ವಿಚಾರದಲ್ಲಿ ಹೋಟೆಲ್ ಸಿಬ್ಬಂದಿ ಮತ್ತು ಯುವಕರ ನಡುವೆ ಪರಸ್ಪರ ಮಾತಿನ ಚಕಮಕಿ ಜೋರಾಗಿ, ಯುವಕರ ಗುಂಪು ಹೋಟೆಲ್‌ನಿಂದ ಆಚೆ ಎದ್ದು ಬಂದಿದ್ದಾರೆ. ಬಿಲ್ ಪಾವತಿ ವಿಚಾರವಾಗಿ ಅವರವರಲ್ಲಿ ಗಲಾಟೆ ಆರಂಭವಾಗಿದೆ.

ಇದರಿಂದ ಕಂಗಾಲಾದ ಹೋಟೆಲ್ ವ್ಯವಸ್ಥಾಪಕ, ಆಚೆ ಬಂದು ಗಲಾಟೆ ನಿಲ್ಲಿಸಿ ಬಿಲ್ ಪಾವತಿಸಿ, ಹೊರಡುವಂತೆ ಯುವಕರಲ್ಲಿ ವಿನಂತಿಸುವ ಸಂದರ್ಭದಲ್ಲಿ ಯುವಕರ ಗುಂಪು ಹಲ್ಲೆ ನಡೆಸಿದೆ. ಬಿಡಿಸಲು ಬಂದ ಇತರೆ ಸಿಬ್ಬಂದಿ ಮೇಲೂ ಹಲ್ಲೆ ನಡೆಸಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಅಲ್ಲದೆ ಮದ್ಯ ಸೇವನೆ, ಆಹಾರ ಆರ್ಡರ್ ಮಾಡಿರುವ ದೃಶ್ಯಾವಳಿ ಸಮೇತ ಯುವಕರ ವಿರುದ್ಧ ಹೋಟೆಲ್ ವ್ಯವಸ್ಥಾಪಕ ವಿನಯ್ ಕೆ.ಆರ್. ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಯುವಕರಿಂದಲೂ ಹೋಟೆಲ್ ವ್ಯವಸ್ಥಾಪಕನ ವಿರುದ್ಧ ಪ್ರತಿದೂರು ದಾಖಲಾಗಿದೆ ಎಂದು ಕೆ.ಆರ್.ಠಾಣೆ ಪೊಲೀಸರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಿಶೇಷ ಪೂಜಾ ಕೈಂಕರ್ಯ...



ತಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಗಾಣಿಗನಕೊಪ್ಪಲಿನ ಆದಿಶಕ್ತಿ ಕಾಳಮ್ಮನ ದೇವಸ್ಥಾನದ ನೂತನ ಗುಡ್ಡಪ್ಪ ನೇಮಕಗೊಂಡ ಹಿನ್ನೆಲೆಯಲ್ಲಿ 48 ದಿನಗಳು ವಿಶೇಷ ಪೂಜಾ ಕೈಂಕರ್ಯ, ಅನ್ನಸಂತರ್ಪಣೆ ನಡೆಯಿತು. ಈ ವೇಳೆ ಯಜಮಾನರಾದ ನಾಗೇಗೌಡ, ಕೇಶವಮೂರ್ತಿ, ಉಮೇಶ್, ವೆಂಕಟೇಶ್‌ಗೌಡ, ಗುಡ್ಡಪ್ಪರಾದ ಮಣಿಕಂಠ, ನರಸಿಂಹಯ್ಯ ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭ....



ಮೈಸೂರು ತಾಲೂಕು ಜಯಪುರ ಹೋಬಳಿ ಬರಡನಪುರ ಗುರುಮಹಾಂತೇಶ್ವರ ಮಠದಲ್ಲಿ ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್, ನಯರಾ ಎನರ್ಜಿ ಲಿ. ಆಯೋಜಿಸಿದ್ದ ದೃಷ್ಟಿ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಚಲನವಲನ ಹಾಗೂ ದೈನಂದಿನ ಕಾರ್ಯ ಚಟುವಟಿಕೆಗಳ ಕೌಶಲ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಠದ ಕಿರಿಯ ಶ್ರೀಗಳಾದ ಚನ್ನಬಸವ ಸ್ವಾಮೀಜಿ ಮಾತನಾಡಿದರು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಉದ್ಯಮಿ, ಹೆಚ್‌ಎಂಐ ಫ್ರೂಟ್ಸ್ ಮಾಲೀಕ ಮೋಹಿಯುದ್ದೀನ್, ಸಂಸ್ಥೆಯ ಹಿರಿಯ ವ್ಯವಸ್ಥಾಪಕ ಎಂ.ಪಿ.ರಮೇಶ್, ಹೈರಿಗೆ ಗ್ರಾಪಂನ ಹರೀಶ್, ಮೈಸೂರು ತಾಲೂಕು ಪುನರ್ವಸತಿ ಸಂಪನ್ಮೂಲ ಸಂಯೋಜಕಿ ವಿ.ರಾಜೇಶ್ವರಿ, ಯೋಜನೆ ಸಂಯೋಜಕಿ ಹೆಚ್.ರುಕ್ಮಿಣಿ ಇನ್ನಿತರರಿದ್ದರು.

ಇಂದು ಪದಗ್ರಹಣ ಸಮಾರಂಭ

ಮೈಸೂರು, ಜೂ.29–2026–27ನೇ ಸಾಲಿಗೆ ಮೈಸೂರು ಅಂಬಾಸಿಡರಸ್ ಲಯನ್ಸ್ ಸಂಸ್ಥೆಯ ಅಧ್ಯಕ್ಷರಾಗಿ ಲಯನ್ ಹೆಚ್.ಕೆ.ಪ್ರಸನ್ನ ಪದಗ್ರಹಣ ಸಮಾರಂಭ ನಾಳೆ (ಜೂ.30) ಹೋಟೆಲ್ ಕಲ್ಯಾಣಿಯಲ್ಲಿ ಏರ್ಪಡಿಸಲಾಗಿದೆ.

ಪದಗ್ರಹಣ ಅಧಿಕಾರಿಯಾಗಿ ಲಯನ್ ಡಾ.ಎನ್.ಕೃಷ್ಣೆಗೌಡ ನೂತನ ಪದಾಧಿಕಾರಿಗಳಿಗೆ ಪದಗ್ರಹಣ ಮಾಡುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಂಪುಟ ಕಾರ್ಯದರ್ಶಿ ಲಯನ್ ಟಿ.ಎಚ್. ವೆಂಕಟೇಶ್, ಜಿಲ್ಲಾ ಸಂಪುಟ ಖಜಾಂಚಿ ಲಯನ್ ಎ.ಪಿ.ಭರತೇಶ್, ಪ್ರಾಂತೀಯ ಅಧ್ಯಕ್ಷರಾದ ಲಯನ್ ಜ್ಯೋತಿ ಮಂಜುನಾಥ್, ವಲಯ ಅಧ್ಯಕ್ಷ ಲಯನ್ ಪಿ.ಶಿವಾಜಿರಾವ್, ಪದಗ್ರಹಣ ಕಾರ್ಯಕ್ರಮದ ಅಧ್ಯಕ್ಷ ಲಯನ್ ಶಿವಕುಮಾರ್, ನೂತನ ಕಾರ್ಯದರ್ಶಿ ಲಯನ್ ಡಾ. ಜಿ.ಕಿಶೋರ್, ಖಜಾಂಚಿ ಲಯನ್ ಪಿ. ಮಲ್ಲಿಕಾರ್ಜುನಪ್ಪ, ಹಾಲಿ ಅಧ್ಯಕ್ಷ ಲಯನ್ ಡಾ.ಆರ್.ಡಿ.ಕುಮಾರ್, ಕಾರ್ಯದರ್ಶಿ ಲಯನ್ ಕೆ.ಟಿ.ವಿಷ್ಣು ಉಪಸ್ಥಿತಿರುವರು ಎಂದು ಜಿಲ್ಲಾ ಸಾರ್ವಜನಿಕ ಸಂಪರ್ಕ ಅಧಿಕಾರಿ ಲಯನ್ ದಿನೇಶ್ ತಿಳಿಸಿದ್ದಾರೆ.

ಪಲ್ಸ್ ಪೋಲಿಯೋಗೆ ಚಾಲನೆ...



ಮೈಸೂರು ತಾಲೂಕು ಕಡಕೊಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಗುವಿಗೆ ಪಲ್ಸ್ ಪೋಲಿಯೋ ಹಾಕುವ ಮೂಲಕ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಕಡಕೊಳ ಕುಮಾರಸ್ವಾಮಿ ಚಾಲನೆ ನೀಡಿದರು. ಈ ವೇಳೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಅರುಣ್ ಕುಮಾರ್, ಸಮುದಾಯ ಆರೋಗ್ಯ ನಿರೀಕ್ಷಾಧಿಕಾರಿ ಶ್ಯಾಮ್ ಮಹೇಶ್, ಹಿರಿಯ ಆರೋಗ್ಯ ಶುಶ್ರೂಷಕಿ ರಾಜಮ್ಮ, ಹೇಮಾ, ಪ್ರಜ್ವಲ್ ಮತ್ತಿತರರು ಉಪಸ್ಥಿತರಿದ್ದರು.



ಪ್ರಬಂಧ ಸ್ಪರ್ಧೆ...

ದೇಸಿ ರಂಗ ಸಂಸ್ಥೆ ಏರ್ಪಡಿಸಿದ್ದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಲೇಖಕಿ ಎನ್.ಆರ್.ರೂಪಶ್ರೀ ಅವರ ಮೀಸಲಾತಿ ಕುರಿತ ಲೇಖನ ತೃತೀಯ ಬಹುಮಾನ ಪಡೆದುಕೊಂಡಿದೆ. ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಯಿತು. ಪ್ರೊ.ಚ.ಸರ್ವಮಂಗಳ, ಕಾಳೇಗೌಡ ನಾಗವಾರ, ಕೃಷ್ಣ ಜನಮನ ಇದ್ದರು.

'ಲೆಟ್ ದಿ ಗ್ರೀನ್ ವಾಲ್ಸ್ ಸ್ಪೀಕ್' ಕಾರ್ಯಕ್ರಮ ಇಂದು

ಮೈಸೂರು, ಜೂ.29–ಮೈಸೂರಿನ ಸಂಸ್ಕೃತಿ ವುಮೆನ್ಸ್ ಸ್ಪಿಯರ್‌ನ ಗೋ ಗ್ರೀನ್ ಅಭಿಯಾನದ ಅಂಗವಾಗಿ ಜೂ.30ರಂದು ನಗರದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲೆಯಲ್ಲಿ 'ಲೆಟ್ ದಿ ಗ್ರೀನ್ ವಾಲ್ಸ್ ಸ್ಪೀಕ್' ಎಂಬ ವಿನೂತನ ಪರಿಸರ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಪ್ರೌಢ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿ, ಪ್ರಕೃತಿ, ಜೀವ ವೈವಿಧ್ಯತೆ ಪರಿಸರ ಸಂರಕ್ಷಣೆ ಹಾಗೂ ಭೂಮಿ ಉಳಿಸುವ ಗೋಡೆ ಚಿತ್ರಗಳನ್ನು ರಚಿಸಲಿದ್ದಾರೆ. ಕಾರ್ಯಕ್ರಮವು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 12ರವರೆಗೆ ನಡೆಯಲಿದೆ.

ನೆಟ್ಟ ಗಿಡಗಳನ್ನು ಮರಗಳಾಗುವ ತನಕ ಪೋಷಣೆ

ಯಾದವಗಿರಿ ನಿವಾಸಿಗಳ ಸಂಘದ ಮಾಸಿಕ ಸಭೆಯಲ್ಲಿ ನಿರ್ಧಾರ

ಮೈಸೂರು, ಜೂ.29(ಎಸ್‌ಪಿಎನ್)–ಯಾದವಗಿರಿ ಸುತ್ತ–ಮುತ್ತಲಿನ ಪಾರ್ಕ್, ಸಾರ್ವಜನಿಕ ಜಾಗದಲ್ಲಿ ಫೋಟೋಗಾಗಿ ಗಿಡ ನೆಡದೆ, ನೆಟ್ಟ ಗಿಡಗಳನ್ನು ಮರಗಳಾಗುವ ತನಕ ಪೋಷಿಸುತ್ತೇವೆ ಎಂದು ಯಾದವಗಿರಿ ನಿವಾಸಿಗಳ ಸಂಘದ ಸದಸ್ಯರು ಸಂಕಲ್ಪ ಮಾಡಿದರು.

ಮೈಸೂರಿನ ಯಾದವಗಿರಿ ವಿವೇಕಾನಂದ ರಸ್ತೆಯ ಎಸ್‌ಬಿಐ ಬ್ಯಾಂಕ್ ಬಳಿ ಪಾರ್ಕ್‌ನಲ್ಲಿ ಯಾದವಗಿರಿ ನಿವಾಸಿಗಳ ಸಂಘದ ಮಾಸಿಕ ಸಭೆಯಲ್ಲಿ ಸದಸ್ಯರು ಈ ತೀರ್ಮಾನ ತೆಗೆದುಕೊಂಡರು.



ಯಾದವಗಿರಿ ನಿವಾಸಿಗಳ ಸಂಘ (ವೈಆರ್‌ಎ)ದಿಂದ ಸಾರ್ವಜನಿಕರಿಗೆ ಸ್ನೇಕ್‌ಪ್ಲಾಂಟ್ ವಿತರಿಸಿರುವ ದೃಶ್ಯ.

ಈ ವೇಳೆ ಯಾದವಗಿರಿ ರೈಲ್ವೆ ಇಲಾಖೆ ಖಾಲಿ ಜಾಗ, ರಸ್ತೆ, ಪಾರ್ಕ್‌ಗಳ ಖಾಲಿ ಜಾಗದಲ್ಲಿ 2 ಸಾವಿರ ಗಿಡ ನೆಡುವ ಸಂಬಂಧ ನೈರುತ್ಯ ವಲಯದ ಡಿಆರ್‌ಎಂ ಅವರನ್ನು ಭೇಟಿ ಮಾಡಿ, ವೈಆರ್‌ಎ ಹಾಗೂ ರೈಲ್ವೆ ಇಲಾಖೆಯೊಂದಿಗೆ ಸಹಯೋಗದೊಂದಿಗೆ ಸಸಿ ನೆಟ್ಟು, ಮರವಾಗುವ ತನಕ ಪೋಷಿಸಲು ತೀರ್ಮಾನಿಸಿದರು.

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರು ತಮ್ಮ ತಮ್ಮ ಮನೆ ತ್ಯಾಜ್ಯಗಳನ್ನು ಮರಗಳ ಬುಡಕ್ಕೆ ಸುರಿದು ಹೋಗುತ್ತಿದ್ದಾರೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಸ್ನೇಕ್ ಪ್ಲಾಂಟ್‌ಗಳನ್ನು ನೆಡಲು ತೀರ್ಮಾನಿಸಿ, ಸಾರ್ವಜನಿಕರಿಗೆ ಸ್ನೇಕ್ ಪ್ಲಾಂಟ್‌ಗಳನ್ನು ವಿತರಿಸಿದರಲ್ಲದೆ, ಯಾದವಗಿರಿ ಬಡಾವಣೆ ನಿವಾಸಿಗಳು ಮರಗಳ ಸುತ್ತ ಮನೆ ತ್ಯಾಜ್ಯ ಹಾಕದಂತೆ ಮನವಿ ಮಾಡಿದರು.

ಈ ಹಿಂದೆ ಯಾದವಗಿರಿ, ಒಂಟಿಕೊಪ್ಪಲು, ವಿವಿ ಮೊಹಲ್ಲಾ ಹಾಗೂ ಜಯಲಕ್ಷ್ಮಿಪುರಂ ಬಡಾವಣೆಗಳನ್ನು ಅಭಿವೃದ್ಧಿಪಡಿಸುವಾಗ ನಿವೇಶನ ಮುಂಭಾಗ ರಸ್ತೆ ಬಿಟ್ಟಂತೆ ನಿವೇಶನ ಹಿಂಭಾಗವೂ ಮನೆ ತ್ಯಾಜ್ಯ ನಿರ್ವಹಣೆಗಾಗಿ ಚಿಕ್ಕದಾದ ರಸ್ತೆಗೆ ಜಾಗ ಬಿಡಲಾಗಿತ್ತು. ಕ್ರಮೇಣ ಆ ರಸ್ತೆಗಳ ಉಪಯೋಗ ಕಡಿಮೆಯಾಗಿ, ಆ ಜಾಗಗಳು ಇದೀಗ ಒತ್ತುವರಿಯಾಗುತ್ತಿದ್ದು, ಇದನ್ನು ಸಂರಕ್ಷಣೆ ಮಾಡುವಂತೆ ಮೈಸೂರು ಪಾಲಿಕೆ ಅಧಿಕಾರಿಗಳನ್ನು ಒತ್ತಾಯಿಸಿದರಲ್ಲದೆ, ಈ ಸಂಬಂಧ ಚರ್ಚಿಸಲು ವಲಯ ಕಚೇರಿ 4ರ ಸಹಾಯಕ ಆಯುಕ್ತ ಜಿಗಣಿ ಅವರಿಗೆ ಆಹ್ವಾನ ನೀಡಲಾಗಿತ್ತು. ಆದರೆ ಅವರು, ಸಭೆಗೆ ಆಗಮಿಸಿರುವುದಕ್ಕೆ ಸದಸ್ಯರಿಂದ ತೀವ್ರ ಬೇಸರ ಹೊರಹಾಕಿದ್ದಾರೆ.

ತ್ಯಾಜ್ಯ ಮುಕ್ತವಾಗಬೇಕು: ತ್ಯಾಜ್ಯವನ್ನು ಸಾರ್ವಜನಿಕವಾಗಿ ಬಿಸಾಡದಂತೆ ಅರಿವು ಮೂಡಿಸಲು ತೀರ್ಮಾನ ತೆಗೆದುಕೊಳ್ಳಲಾಯಿತು. ಯಾದವಗಿರಿಯನ್ನು ಮುಂದಿನ ದಿನಗಳಲ್ಲಿ ತ್ಯಾಜ್ಯ ಮುಕ್ತ ಬಡಾವಣೆಯಾಗಿ ಮಾಡಲು ಎಂಸಿಸಿಯೊಂದಿಗೆ ಕೈಜೋಡಿಸಲು ವೈಆರ್‌ಎ ಸದಸ್ಯರು ತೀರ್ಮಾನಿಸಿದರು. ಮೈಸೂರನ್ನು ಸುಂದರ ನಗರಿ ಮೈಸೂರು, ಸಾಂಸ್ಕೃತಿ ನಗರಿ ಮೈಸೂರು ಎಂಬ ವಿಶೇಷಣಕ್ಕೆ ಪ್ರತಿಯೊಂದು ಬಡಾವಣೆಯಲ್ಲೂ ವೈಆರ್‌ಎ ರೀತಿ ಸಂಘಗಳನ್ನು ರಚಿಸಿ ಕಾರ್ಯ ನಿರ್ವಹಣೆಯ ಸೂಕ್ತ ಸಲಹೆಗಳಿಗಾಗಿ ಸಾರ್ವಜನಿಕರು ಮೊ:98458–51638, 88610–96205 ಸಂಪರ್ಕಿಸಬಹುದು.

ಈ ವೇಳೆ ಯಾದವಗಿರಿ ಬಡಾವಣೆ ನಿವಾಸಿಗಳ ಸಂಘದ ಭಾಮೀ ವಿ.ಶೆಣೈ, ದಿನೇಶ್, ಡಾ.ರಾಜೇಶ್ವರ್, ಸಂಜಯ್, ಬಾಲಕೃಷ್ಣ, ಶ್ರವಣ್, ಅಜಿತ್ ವಿಶ್ವನಾಥ್, ಎಲಿಜಬತ್ ಸೇರಿದಂತೆ ಇತರರಿದ್ದರು.

ಪ್ರಾಂಶುಪಾಲರ ಸಂಘದ ನೂತನ ಪದಾಧಿಕಾರಿಗಳು

ಮೈಸೂರು: ಜಿಲ್ಲೆಯ 2026–27ನೇ ಸಾಲಿನ ಪ್ರಾಂಶುಪಾಲರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕಿ ಎಂ.ಪಿ. ನಾಗಮ್ಮ, ಅಧ್ಯಕ್ಷರಾಗಿ ಹುಣಸೂರು ಬಾಲಕಿಯರ ಸರ್ಕಾರಿ ಪಪೂರ್ವ ಕಾಲೇಜು ಪ್ರಾಂಶುಪಾಲ ಎ.ರಾಮೇಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಮಹಾಜನ ಕಾಲೇಜು ಪ್ರಾಂಶುಪಾಲ ವಿಷಕಂಠಮೂರ್ತಿ, ಖಜಾಂಚಿಯಾಗಿ ನಂಜನಗೂಡು ಬಾಲಕರ ಸರ್ಕಾರಿ ಕಾಲೇಜು ಪ್ರಾಂಶುಪಾಲ ದಿನೇಶ್, ಸಂಘಟನಾ ಕಾರ್ಯದರ್ಶಿಯಾಗಿ ರಾಜೇಂದ್ರ ನಗರ ಸರ್ಕಾರಿ ಕಾಲೇಜು ಪ್ರಿನ್ಸಿಪಾಲ್ ವಿಜೇಯೆಂದ್ರ ಕುಮಾರ್, ಕಾರ್ಯಾಧ್ಯಕ್ಷರಾಗಿ ಬನ್ನೂರು ಬಾಲಕಿಯರ ಸರ್ಕಾರಿ ಕಾಲೇಜು ಪ್ರಾಂಶುಪಾಲ ರವೀಶ್, ಉಪಾಧ್ಯಕ್ಷರಾಗಿ ವಿಜಯ ವಿಠ್ಠಲ ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ಬನುಮಯ್ಯ ಕಾಲೇಜು ಪ್ರಾಂಶುಪಾಲ ಚಂದ್ರಶೇಖರ, ಮಹಾರಾಜ ಸರ್ಕಾರಿ ಕಾಲೇಜು ಪ್ರಿನ್ಸಿಪಾಲ್ ಉದಯಶಂಕರ ಆಯ್ಕೆಯಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.06.2026 ಮಂಗಳವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ನೋವು, ಸ್ಪಾಂಡಿಲೋಸಿಸ್, ಭುಜನೋವು, ಬೆನ್ನು ನೋವಿಗೆ ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್, ಅಸೃಗ್ದರ (ಗರ್ಭಾಶಯ ರಕ್ತಸ್ರಾವ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಭಾನವಿ ಆಸ್ಪತ್ರೆ:** ಪಲ್ಸ್ ಪೋಲಿಯೋ ಕಾರ್ಯಕ್ರಮ, ಸ್ಥಳ: ಭಾನವಿ ಆಸ್ಪತ್ರೆ, ಕುವೆಂಪುನಗರ, ಬೆಳಗ್ಗೆ 8 ರಿಂದ.

■ **ಜೆಎಸ್‌ಎಸ್ ಪ್ರೌಢಶಾಲೆ, ಸರಸ್ವತಿಪುರಂ :** ಸಂಸ್ಕೃತಿ ವುಮೆನ್ಸ್ ಸ್ಪಿಯರ್‌ನ ಗೋ ಗ್ರೀನ್ ಅಭಿಯಾನದ ಅಂಗವಾಗಿ 'ಲೆಟ್ ದಿ ಗ್ರೀನ್ ವಾಲ್ಸ್ ಸ್ಪೀಕ್' ಎಂಬ ವಿನೂತನ ಪರಿಸರ ಜಾಗೃತಿ ಕಾರ್ಯಕ್ರಮ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ಸರಸ್ವತಿಪುರಂ, ಬೆಳಗ್ಗೆ 10 ರಿಂದ.


■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು :** ಗಿಡ ನೆಡುವ ಅಭಿಯಾನ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಸಹಕಾರಿ ವೃತ್ತಿಪರ ನಿರ್ದೇಶಕ ಬಿ. ಮಹದೇವಸ್ವಾಮಿ, ಮುಖ್ಯ ಅತಿಥಿಗಳು : ಅಧ್ಯಕ್ಷ ಎಸ್.ಆರ್. ನಾರಾಯಣರಾವ್, ಬೀರೇಂದ್ರ, ಶ್ರೀಮತಿ ಮೀನಾಕುಮಾರಿ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ.

■ **ಚಂಪಾ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ ಮತ್ತು ಚಂಪಾ ಸ್ಕೂಲ್ ಆಫ್ ಲಾ :** ಕಾನೂನು ಉತ್ಸವ, ಎಥ್ನಿಕ್ ಡೇ ಕಾರ್ಯಕ್ರಮ, ಮುಖ್ಯ ಅತಿಥಿಗಳು : ವಿಜಯಧ್ವನಿ ಪ್ರತಿಷ್ಠಾನ ಕಲ್ಚರಲ್ ಟ್ರಸ್ಟ್ ಅಧ್ಯಕ್ಷೆ ವಿದುಷಿ ಆರ್.ಸಿ.ರಾಜಲಕ್ಷ್ಮಿ, ಅಧ್ಯಕ್ಷತೆ : ಕಾಲೇಜಿನ ಪ್ರಾಂಶುಪಾಲರಾದ ಡಾ.ಜಿ.ಅಸ್ಮತುನ್ನೀಸಾ, ಉಪಸ್ಥಿತರು : ಸಂಚಾಲಕ ಪ್ರಾಧ್ಯಾಪಕ ಭರತ್, ಸ್ಥಳ: ಸಂಸ್ಥೆ ಆವರಣ, ರಾಜರಾಜೇಶ್ವರಿನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಸಂವಹನ ಪ್ರಕಾಶನ :** ಹಿರಿಯ ಪತ್ರಕರ್ತ ನಾ. ಮಹಾವೀರ ಪ್ರಸಾದ ಸಂಪಾದಿಸಿರುವ ಕನ್ನಡ ಪರಿಚಾರಕ ಪಂಡಿತ್ ಪ. ನಾಗರಾಜಯ್ಯ ಸ್ಮರಣ ಸಂಪುಟ ಕೃತಿ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕ ಕುರಿತು : ವಿದ್ವಾಂಸರಾದ ಡಾ. ಕೆ. ಅನಂತರಾಮು, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್. ಸುನೀಲ್ ಕುಮಾರ್, ಪದ್ಮಶ್ರೀ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ನಂದಿನಿ ಸಂಜಯ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಆಸ್ಪತ್ರೆ :** ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ವಾರ್ಷಿಕ ಉಪನ್ಯಾಸ, 'ತಾಯಿಯ ಮಾನಸಿಕ ಆರೋಗ್ಯ ಸಮಸ್ಯೆಗಳು', ಉದ್ಘಾಟನೆ : ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಗೌರವ ಅತಿಥಿಗಳು : ಕುಲಸಚಿವ ಡಾ. ಬಿ. ಮಂಜುನಾಥ್, ನಿರ್ದೇಶಕ ಡಾ. ಸಿ.ಪಿ. ಮಧು, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ವಾಮಿ ವಿವೇಕಾನಂದ ಪೀಠದ ಕಾರ್ಯಚಟುವಟಿಕೆಗಳನ್ನು ಕುರಿತು ಪೀಠದ ಸಂಯೋಜನಾಧಿಕಾರಿ ಹಾಗೂ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಜ್ಯೋತಿಶಂಕರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು ಎನ್. ಕಾರ್ತಿಕ್– ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಹೊಂಗಿರಣ' ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಎಸ್. ಲಕ್ಷೀನಾರಾಯಣ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, ನಾಟಕ–ಫೋನಾಯಣ, ರಚನೆ–ಬಿ. ಆರ್. ನಾಗರತ್ನ, ನಿರ್ದೇಶನ ಹಾಗೂ ನಿರ್ಮಾಣ–ದಿಗ್ವಿಜಯ್ .ಬಿ, 12.35 ದೇವರನಾಮ–ಸ್ನೇಹಾ ಟಿ.ಎಸ್., 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 1.30 ಮತ್ತು ಸಂಜೆ 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ನಿಲಯದ ಕಲಾವಿದರಿಂದ ವಾದ್ಯವೃಂದ, ನಿರ್ದೇಶನ– ಹೆಚ್. ಕೆ.ನರಸಿಂಹಮೂರ್ತಿ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ 'ವಾಲಿಮೋಕ್ಷ', ಪ್ರಸ್ತುತಿ–ಸಂತ ಶ್ರೀ ಕೇಶವ ದಾಸರು, 6.50 ಕೃಷಿರಂಗ– ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ನಂಜನಗೂಡು ತಾಲೂಕು ಸೂರಹಳ್ಳಿ ಗ್ರಾಮದಲ್ಲಿ ನಡೆದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮದ ಬಾನುಲಿ ವರದಿ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 Running commentary of ICC Women's T20 World cup cricket match 1st Semi final

ಮೈಸೂರು ಜಿಲ್ಲೆಯಲ್ಲಿ ಇಂದಿನಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣಾ ಕಾರ್ಯ ಆರಂಭ

● ಬಿಎಲ್‌ಒಗಳಿಂದ ಪ್ರತಿ ಮನೆಗೆ ಎನ್ಯುಮರೇಷನ್ ಫಾರಂ ಹಂಚಿಕೆ ● ಇವುಗಳ ಭರ್ತಿ ಮಾಡಿ ಬಿಎಲ್‌ಒಗಳಿಗೆ ಸಲ್ಲಿಕೆ ಕಡ್ಡಾಯ ● ಮತಗಳ್ಳತನದ ಆರೋಪದ ಹಿನ್ನೆಲೆ ಎಸ್‌ಐಆರ್ ● ಅನರ್ಹ ಮತದಾರರಿಗೆ ಕೊಕ್ ● 2,915 ಬಿಎಲ್‌ಒಗಳ ನೇಮಕ ● ಪ್ರತಿ ದಿನದ ಎಸ್‌ಐಆರ್ ಮಾಹಿತಿ ಪಡೆಯುವ ಚುನಾವಣಾ ಆಯೋಗ



ಬಿಎಲ್‌ಒಗಳು ಪ್ರತಿಯೊಂದು ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂಗಳನ್ನು ವಿತರಿಸಿ, ತರುವಾಯ ಭರ್ತಿ ಮಾಡಿದ ಫಾರಂಗಳನ್ನು ಸಂಗ್ರಹಿಸಲಿದ್ದಾರೆ. ಈ ಸಂಬಂಧ ಸಿಬ್ಬಂದಿಗೆ ತರಬೇತಿ ಕೂಡ ನೀಡಲಾಗಿದೆ. ಚುನಾವಣಾ ಆಯೋಗದ ನಿರ್ದೇಶನದಂತೆ ಪ್ರಕ್ರಿಯೆಗಳು ನಡೆಯಲಿದೆ. ಪ್ರತಿದಿನ ಎಷ್ಟು ಎನ್ಯುಮರೇಷನ್ ಫಾರಂ ನೀಡಲಾಗಿದೆ, ಎಷ್ಟು ಸಂಗ್ರಹಿಸಲಾಗಿದೆ ಎಂಬ ಮಾಹಿತಿಯನ್ನು ಆಯಾಯ ದಿನವೇ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗುವುದು.
- ಆರ್.ಐಶ್ವರ್ಯ, ಅಪರ ಜಿಲ್ಲಾಧಿಕಾರಿ, ಮೈಸೂರು.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಮತದಾರರ ವಿವರ

ಪ್ರಸ್ತುತ ಮೈಸೂರು ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳ 2,915 ಮತಗಟ್ಟೆಗಳಲ್ಲಿ ಒಟ್ಟು 2799931 ಮತದಾರರಿದ್ದಾರೆ. ಇವರಲ್ಲಿ 1372817 ಪುರುಷ ಮತದಾರರು ಹಾಗೂ 142688 ಮಹಿಳಾ ಮತದಾರರಿದ್ದಾರೆ.

ಕೃಷ್ಣರಾಜ ವಿಧಾನಸಭಾ ಕ್ಷೇತ್ರ	263440
ಚಾಮರಾಜ ವಿಧಾನಸಭಾ ಕ್ಷೇತ್ರ	263799
ನರಸಿಂಹರಾಜ ವಿಧಾನಸಭಾ ಕ್ಷೇತ್ರ	327472
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ	357084
ವರುಣ ವಿಧಾನಸಭಾ ಕ್ಷೇತ್ರ	243914
ತಿ.ನರಸೀಪುರ ವಿಧಾನಸಭಾ ಕ್ಷೇತ್ರ	212576
ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ	199543
ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ	220942
ಹುಣಸೂರು ವಿಧಾನಸಭಾ ಕ್ಷೇತ್ರ	253343
ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ	234537
ನಂಜನಗೂಡು ವಿಧಾನಸಭಾ ಕ್ಷೇತ್ರ	223281

ಮೈಸೂರು, ಜೂ.29(ಬಿಎಲ್‌ಯು)– ಕೇಂದ್ರ ಚುನಾವಣಾ ಆಯೋಗದ ಆದೇಶದಂತೆ ನಾಳೆ (ಜೂನ್ 30) ಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭವಾಗಲಿದ್ದು, ಮೈಸೂರು ಜಿಲ್ಲಾಡಳಿತ ಎಸ್‌ಐಆರ್ ಪ್ರಕ್ರಿಯೆಗೆ ಸರ್ವ ರೀತಿಯಲ್ಲೂ ಸಜ್ಜುಗೊಂಡಿದೆ.

ಭಾರತದ ಚುನಾವಣಾ ಆಯೋಗ 1950 ರಲ್ಲಿ ರಚನೆಯಾದ 1952ರಲ್ಲಿ ಮೊದಲ ಚುನಾವಣೆ ನಡೆಯಿತು. ಅಲ್ಲಿಂದ ಇಲ್ಲಿವರೆಗೆ ಕೇಂದ್ರ ಚುನಾವಣಾ ಆಯೋಗ ಆಗಿಂದಾಗ ಮತದಾರರ ಪಟ್ಟಿ ಪರಿಷ್ಕರಣೆ ಮಾಡುತ್ತಲೆ ಬಂದಿದೆ. ಇತ್ತೀಚಿಗೆ ಅಂದರೆ 2002 ರಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆದಿತ್ತು.

ಆದರೆ, ಇತ್ತೀಚಿನ ಚುನಾವಣೆಗಳಲ್ಲಿ ಮತಗಳ್ಳತನ ಆಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕೆಲ ದಾಖಲಾತಿ ಆಧರಿಸಿ ಆಪಾದನೆ ಮಾಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಚುನಾವಣಾ ಆಯೋಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಮುಂದಾಗಿದ್ದಾರೆ.

ಬಿಹಾರ, ಪಶ್ಚಿಮ ಬಂಗಾಳ, ಕೇರಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಈಗಾಗಲೇ ಎಸ್‌ಐಆರ್ ನಡೆಸಿರುವ ಆಯೋಗ ಕೋಟ್ಯಾಂತರ ಅನರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ನಾಳೆಯಿಂದ ಆರಂಭವಾಗುವ ಎಸ್‌ಐಆರ್ ಬಹಳ ಮಹತ್ವ ಪಡೆದಿದೆ.



ಸಾಂದರ್ಭಿಕ ಚಿತ್ರ

ಹೊಸ ಮತದಾರರಿಗೆ ಅವಕಾಶ

ಎಸ್‌ಐಆರ್ ವೇಳೆ ಹೊಸದಾಗಿ ಮತದಾರರಾಗಿ ನೋಂದಣಿ ಮಾಡಿಸಿಕೊಳ್ಳುವವರಿಗೂ ಕೂಡ ಅವಕಾಶ ಕಲ್ಪಿಸಲಾಗಿದೆ. ಹೊಸ ಮತದಾರರನ್ನು ನೋಂದಣಿ ಮಾಡಿಸುವ ಸಂಬಂಧ ಬಿಎಲ್‌ಒಗಳು ಖಾಲಿ ನಮೂನೆ–6 ಹಾಗೂ ಖಾಲಿ ಡಿಕ್ಲರೇಷನ್ ಫಾರಂಗಳನ್ನು ನೀಡಲಿದ್ದಾರೆ. ಇವುಗಳನ್ನು ಭರ್ತಿ ಮಾಡಿ ಸಲ್ಲಿಸಬೇಕಷ್ಟೆ!

ಮೈಸೂರು ಜಿಲ್ಲೆಯಲ್ಲಿ ಒಟ್ಟು 2,915 ಮತಗಟ್ಟೆಗಳಿದ್ದು, ಪ್ರತಿಯೊಂದು ಮತಗಟ್ಟೆಗೆ ಒಬ್ಬ ಬಿಎಲ್‌ಒ (ಬೂತ್ ಲೆವೆಲ್ ಆಫೀಸರ್) ನೇಮಕ ಮಾಡಲಾಗಿದೆ. ಎಸ್‌ಐಆರ್ ಪ್ರಕ್ರಿಯೆಯ ಮೇಲುಸ್ತುವಾರಿಗಾಗಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಎಆರ್‌ಒ (ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್) ಹಾಗೂ ಎಇಆರ್‌ಒ (ಅಸಿಸ್ಟೆಂಟ್ ಎಲೆಕ್ಟ್ರೋಲ್ ರಿಜಿಸ್ಟ್ರೇಷನ್ ಆಫೀಸರ್) ಗಳನ್ನು ನಿಯೋಜಿಸಲಾಗಿದೆ.

ಎಸ್‌ಐಆರ್ ಪ್ರಕ್ರಿಯೆಗಾಗಿ ಚುನಾವಣಾ ಆಯೋಗ ಈಗಾಗಲೇ ಮುಖ್ಯ ಚುನಾವಣಾಧಿಕಾರಿಗಳು, ಜಿಲ್ಲಾ ಚುನಾವಣಾಧಿಕಾರಿಗಳು, ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು, ಜಿಲ್ಲಾ ಮತ್ತು ಪ್ರತಿಯೊಂದು ವಿಧಾನಸಭಾ ಕ್ಷೇತ್ರ ಮಟ್ಟದ ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲಾಗಿದೆ.

ಮಾಸ್ಟರ್ ಟ್ರೈನರ್‌ಗಳು ಈಗಾಗಲೇ ಬಿಎಲ್‌ಒಗಳಿಗೆ ತರಬೇತಿ ನೀಡಿದ್ದಾರೆ. ಅಲ್ಲದೆ ರಾಜಕೀಯ ಪಕ್ಷಗಳಿಂದ ನೇಮಕಗೊಂಡಿರುವ ಬಿಎಲ್‌ಎಗಳಿಗೆ ಕೂಡ ತರಬೇತಿ ನೀಡಲಾಗಿದೆ.

ಮತಗಟ್ಟೆಗಳ ರಾಷನಲೈಜೇಷನ್: ನಾಳೆಯಿಂದ ಜುಲೈ 29 ರವರೆಗೆ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂ ಸಂಗ್ರಹಿಸಿದ ನಂತರ ಜುಲೈ 29 ರಿಂದ ಮತಗಟ್ಟೆಗಳ ರಾಷನಲೈಜೇಷನ್ ಪ್ರಕ್ರಿಯೆ ನಡೆಯಲಿದೆ. ಅಂದರೆ ಹೊಸ ಮತಗಟ್ಟೆ ಸ್ಥಾಪನೆ, ವಿಲೀನ, ಸ್ಥಳಾಂತರ, ಹೆಸರು ಬದಲಾವಣೆ ಪ್ರಕ್ರಿಯೆ ನಡೆಯಲಿದೆ. ಒಂದು ಮತಗಟ್ಟೆಯಲ್ಲಿ 1,200 ಕ್ಕಿಂತ ಹೆಚ್ಚಿನ ಮತದಾರರು ಇದ್ದಲ್ಲಿ ಹೊಸ ಮತಗಟ್ಟೆ ಸ್ಥಾಪನೆ ಮಾಡಲಾಗುವುದು.

ಕರಡು ಮತದಾರರ ಪಟ್ಟಿ: ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಇಆರ್‌ಒ ಹಾಗೂ ಎಇಆರ್‌ಒ ಕಚೇರಿಗಳಲ್ಲಿ ಕರಡು ಮತದಾರರ ಪಟ್ಟಿ ಲಭ್ಯವಿರುತ್ತದೆ. ಅಲ್ಲದೆ ರಾಜಕೀಯ ಪಕ್ಷಗಳಿಗೆ ಕೂಡ ಇದನ್ನು ವಿತರಣೆ ಮಾಡಲಾಗುವುದು.

ಕರಡು ಪಟ್ಟಿಯಲ್ಲಿ ಆಕ್ಷೇಪಣೆ ಇದ್ದರೆ ಆಗಸ್ಟ್ 5 ರಿಂದ ಸೆಪ್ಟೆಂಬರ್ 4 ರವರೆಗೆ ಸಲ್ಲಿಸಬಹುದು. ಅಲ್ಲದೆ ರಾಜಕೀಯ ಪಕ್ಷಗಳು ದಿನಕ್ಕೆ 10 ಆಕ್ಷೇಪಣೆಗಳ ನಮೂನೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ವ್ಯತ್ಯಾಸ ಕಂಡು ಬಂದರೆ ನೋಂದಣಾಧಿಕಾರಿಗಳು ನೋಟಿಸ್ ನೀಡಲಿದ್ದಾರೆ. ಈ ಆಕ್ಷೇಪಣೆಗಳನ್ನು ಅಕ್ಟೋಬರ್ 10 ರವರೆಗೆ ಸರಿಪಡಿಸಲು ಅವಕಾಶವಿರುತ್ತದೆ.

ತರುವಾಯ ಎಸ್‌ಐಆರ್‌ನ ಈ ಎಲ್ಲಾ ಪ್ರಕ್ರಿಯೆ ಸಂಪೂರ್ಣಗೊಂಡ ನಂತರ ಅಕ್ಟೋಬರ್ 7 ರಂದು ಅಂತಿಮ ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗ ಪ್ರಕಟಿಸಲಿದೆ.

ಸೂಕ್ತ ಮಾಹಿತಿ ಹಾಗೂ ದಾಖಲಾತಿ ಸಲ್ಲಿಸದ, ಎರಡು ಸ್ಥಳಗಳಲ್ಲಿ ಮತದಾನದ ಹಕ್ಕು ಹೊಂದಿರುವವರು ಸೇರಿದಂತೆ ಇತರೆ ಅನರ್ಹ ಮತದಾರರಿಗೆ ಕೊಕ್ ನೀಡಲಾಗುತ್ತದೆ. ಎಸ್‌ಐಆರ್ ಅನ್ನು ಬಹಳ ಗಂಭೀರವಾಗಿ ಪರಿಗಣಿಸಿರುವ ಹಿನ್ನೆಲೆಯಲ್ಲಿ ಹಲವು ರಾಜ್ಯಗಳಲ್ಲಿ ಕೋಟ್ಯಾಂತರ ಅನರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ಎನ್ಯುಮರೇಷನ್ ಫಾರಂ ನೀಡದಿದ್ದರೆ ಮತದಾರ ಪಟ್ಟಿಯಿಂದ ಔಟ್!

ಇಷ್ಟು ವರ್ಷದ ಮತದಾರರ ಪಟ್ಟಿ ಪರಿಷ್ಕರಣೆ ಒಂದು ಲೆಕ್ಕವಾದರೆ, ಈಗ ನಡೆಯುವ ಎಸ್‌ಐಆರ್ ಪ್ರಕ್ರಿಯೆ ಮತ್ತೊಂದು ಲೆಕ್ಕವಾಗಿದೆ. ಎನ್ಯುಮರೇಷನ್ ಫಾರಂ ಹಾಗೂ ಸೂಕ್ತ ದಾಖಲಾತಿ ನೀಡದಿದ್ದವರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಿದ್ದು, ಅವರು ಮತದಾನದ ಹಕ್ಕು ಕಳೆದುಕೊಳ್ಳಲಿದ್ದಾರೆ.

ನಾಳೆಯಿಂದ ಬಿಎಲ್‌ಒಗಳು ಪ್ರತಿಯೊಂದು ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂ ದ್ವಿಪ್ರತಿ ನೀಡಲಿದ್ದಾರೆ. ಅಲ್ಲದೆ ಎನ್ಯುಮರೇಷನ್ ಫಾರಂ ನೀಡಿ ಏನೇನು ವಿಚಾರಗಳನ್ನು ಭರ್ತಿ ಮಾಡಬೇಕು ಎಂಬ ಮಾಹಿತಿಯನ್ನು ಕುಟುಂಬಸ್ಥರಿಗೆ ತಿಳಿಸಲಿದ್ದಾರೆ. ಒಂದು ವೇಳೆ ಮನೆಗೆ ಬೀಗ ಹಾಕಿರುವುದು, ಮುಚ್ಚಲ್ಪಟ್ಟಿರುವುದು ಕಂಡು ಬಂದರೆ ಎನ್ಯುಮರೇಷನ್ ಫಾರಂನ್ನು ಮನೆಯಲ್ಲಿ ಹಾಕಲಿದ್ದಾರೆ. ತರುವಾಯ ದೊರೆತ ಎನ್ಯುಮರೇಷನ್ ಫಾರಂ ಅನ್ನು ಮನೆಯವರು ಪಡೆಯಬಹುದಾಗಿದೆ. ಒಂದು ವೇಳೆ ಎನ್ಯುಮರೇಷನ್ ಫಾರಂ ಸಿಗಲಿಲ್ಲವೆಂದರೆ https//voters.eci.gov.inನಲ್ಲಿ ಫಾರಂ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಮತದಾರರು 2002 ನೇ ಸಾಲಿನ ಮತದಾರರ ಪಟ್ಟಿಯ ವಿವರ, ತಂದೆ–ತಾಯಿ, ಅಜ್ಜ–ಅಜ್ಜಿ ವಿವರ ಸೇರಿದಂತೆ ಇತರೆ ಮಾಹಿತಿಯನ್ನು ನಮೂದಿಸಿ ಸಹಿ ಮಾಡಿ ಒಂದು ಪ್ರತಿಯನ್ನು ಬಿಎಲ್ ಒಗಳಿಗೆ ನೀಡಬೇಕು. ಒಂದು ಪ್ರತಿಯನ್ನು ಬಿಎಲ್‌ಒಗಳು ಇಟ್ಟುಕೊಳ್ಳಲಿದ್ದು, ಮತ್ತೊಂದಕ್ಕೆ ಸಹಿ ಮಾಡಿ ಮತದಾರರಿಗೆ ಸ್ವೀಕೃತಿ ಪತ್ರವಾಗಿ ನೀಡುತ್ತಾರೆ. ಬಿಎಲ್‌ಒಗಳು ಕನಿಷ್ಠ 3 ಬಾರಿ ಮನೆಗಳಿಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂ ಪಡೆಯಬೇಕು. ಹೀಗೆ ಪಡೆದ ಎನ್ಯುಮರೇಷನ್ ಫಾರಂಗಳನ್ನು ಬಿಎಲ್‌ಒ ಆ್ಯಪ್ ಮೂಲಕ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಲಿದ್ದಾರೆ. ತರುವಾಯ ಅಪ್ ಲೋಡ್ ಮಾಡಿರುವ ಎಮ್ಯೂ ರೇಷನ್ ಫಾರಂಗಳನ್ನು ಮತದಾರರ ನೋಂದಣಾಧಿಕಾರಿಗಳು ಪರಿಶೀಲಿಸಿ ಇತ್ಯರ್ಥಪಡಿಸಲಿದ್ದಾರೆ.

ಮತದಾರರು ಎನ್ಯುಮರೇಷನ್ ಫಾರಂ ಭರ್ತಿ ಮಾಡಿ ಬಿಎಲ್‌ಒಗಳಿಗೆ ನೀಡಲು ಬೇಜವಾಬ್ದಾರಿ ತೋರಿದರೆ ಅವರ ಹೆಸರು ಮತದಾರರ ಪಟ್ಟಿಯಿಂದ ಕೈಬಿಡಲಾಗುತ್ತದೆ. ಇದರಿಂದ ಮತದಾನದ ಹಕ್ಕು ಕಳೆದುಕೊಳ್ಳಲಿದ್ದಾರೆ.

ರೈತರ ಹೋರಾಟದ ಹಿನ್ನೆಲೆ; ಬಿಡದಿ ಟೌನ್‌ಶಿಪ್‌ಗೆ ಸಚಿವರ ನಿರಾಸಕ್ತಿ

● ಸಾಂದರ್ಭಿಕವಾಗಿ ಅಪಸ್ವರ; ವರಿಷ್ಠರ ಮೇಲೆ ವಿಶ್ವಾಸ
● ಮುಂದಿನ ಚುನಾವಣೆ ದೃಷ್ಟಿಯಿಂದ ಸೂಕ್ತ ನಿರ್ಧಾರದ ಆಶಾಭಾವ

ಬೆಂಗಳೂರು, ಜೂ.29(ಕೆಎಂಶಿ)– ರೈತರ ವಿರೋಧ ಕಟ್ಟಿಕೊಂಡು ಬಿಡದಿ ಟೌನ್‌ಶಿಪ್ ಮಾಡುವುದರ ಬಗ್ಗೆ ಸಚಿವರಲ್ಲೇ ವಿಭಿನ್ನ ಅಭಿಪ್ರಾಯ ಕೇಳಿಬರುತ್ತಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಡದಿ ಟೌನ್‌ಶಿಪ್ ಮಾಡಿಯೇ ಮಾಡುತ್ತೇವೆ ಎಂಬ ಹಠ ತೊಟ್ಟಿರುವ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಸತೀಶ್ ಜಾರಕಿಹೊಳಿ, ರೈತರಿಗೆ ಬೇಡವಾದ ಟೌನ್‌ಶಿಪ್ ನಿರ್ಮಾಣ ಮಾಡುವುದಿಲ್ಲ ಎಂದಿದ್ದಾರೆ.

ಈ ಸಂಬಂಧ ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭೂಮಿ ಕೊಡಿ ಎಂಬುದಾಗಿ ನಾವು ಯಾವ ರೈತರಿಗೂ ಬಲವಂತ ಮಾಡುವಂತಿಲ್ಲ, ನಾವು ಬಲವಂತವಾಗಿ ಎಂದೂ ಭೂಮಿ ಪಡೆದುಕೊಂಡಿಲ್ಲ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಪ್ರಿಯಾಂಕ್ ಖರ್ಗೆ

ಭೂಸ್ವಾಧೀನ ನಿಯಮಗಳು ಬಹಳ ಸ್ಪಷ್ಟವಾಗಿವೆ. ಯಾರೂ ಒತ್ತಾಯ ಪೂರ್ವಕವಾಗಿ ಭೂಮಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ರೈತರು ಸ್ವಇಚ್ಛೆಯಿಂದ ಎಲ್ಲಿ ಕೊಡುತ್ತಾರೋ ಅಲ್ಲಿ ಪರಿಗಣನೆ ಮಾಡುತ್ತೇವೆ. ಶೇ.90ರಿಂದ ಶೇ.95ರಷ್ಟು ವಿರೋಧ ವ್ಯಕ್ತವಾದರೆ, ಅಲ್ಲಿ ಯೋಜನೆ ತರಲು ಸಾಧ್ಯವಿಲ್ಲ, ರೈತರಿಂದ ವಿರೋಧ ಬಂದ ಕಾರಣಕ್ಕೇ ದೇವನಹಳ್ಳಿ, ಚನ್ನರಾಯಪಟ್ಟಣ ಬಳಿ ನಾವು ಭೂಸ್ವಾಧೀನ ಕೈಬಿಟ್ಟೆವು ಎಂದಿದ್ದಾರೆ.

ಈ ಸಂಬಂಧ ಮಾತನಾಡಿದ ಜಾರಕಿಹೊಳಿ, ಬಿಡದಿ ಟೌನ್‌ಶಿಪ್ ವಿರುದ್ಧವಾಗಿ ನಡೆಯುತ್ತಿರುವ ರೈತ ಚಳವಳಿಯನ್ನು ನಮ್ಮ ವರಿಷ್ಠರು ಗಮನಿಸುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಅವರಿಗೂ ಅರಿವಿದೆ. ಈ ಹೋರಾಟದಿಂದ ಮುಂದಿನ ಚುನಾವಣೆಗಳಲ್ಲಿ ಏನು ಪರಿಣಾಮ ಬೀರಬಹುದೆಂಬ ನಮ್ಮ ಅಭಿಪ್ರಾಯಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ. ಟೌನ್‌ಶಿಪ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಂಪುಟದಲ್ಲಿ ಇದುವರೆಗೂ ಚರ್ಚೆ ಆಗಿಲ್ಲ ಎಂದರು.

ಅವರು ಶಕ್ತಿಯುತವಾಗಿ ಹೋರಾಡಿದ್ದರೆ ಅವರಿಗೆ ಇಂತಹ ಸ್ಥಿತಿ ಬರುತ್ತಿರಲಿಲ್ಲವೇನೋ...!

ಸಿದ್ದರಾಮಯ್ಯ ಕುರಿತಾಗಿ ಸಚಿವ ಸತೀಶ್ ಜಾರಕಿಹೊಳಿ ಪರೋಕ್ಷ ಪ್ರತಿಕ್ರಿಯೆ

ಬೆಂಗಳೂರು, ಜೂನ್ 29(ಕೆಎಂಶಿ)– ಮನೆಯಲ್ಲೇ ಕುಳಿತು ರಾಜಕಾರಣ ಮಾಡಿದರೆ ದೊಡ್ಡ ನಾಯಕನಾಗಲು ಸಾಧ್ಯವಿಲ್ಲ. ಇದು ರಾಜಕೀಯ ಸಿದ್ಧಾಂತ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಇಂದಿಲ್ಲಿ ಮಾರ್ಮಿಕವಾಗಿ ನುಡಿದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಹುದ್ದೆ ತ್ಯಜಿಸಿದ ನಂತರ ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗುತ್ತಿದೆಯೇ ಎಂಬ ಪ್ರಶ್ನೆಗೆ, ಪ್ರಸ್ತುತ ರಾಜಕೀಯ ಮತ್ತು ನಾಯಕತ್ವದ ಅನಿವಾರ್ಯತೆಗಳನ್ನು ಚಲಿಸುವ ರೈಲಿಗೆ ಹೋಲಿಸಿದರು.

ನಾವು ಒಂದು ಗುರಿಯಿಂದ ಇನ್ನೊಂದು ಗುರಿ ಮುಟ್ಟಲು ಓಡುತ್ತಿರಬೇಕು. ನಾವು ನಿಧಾನ ಮಾಡಿದರೆ, ಇನ್ನೊಬ್ಬರು ಅಧಿಕಾರದ ರೈಲು ಹತ್ತಲು ಮುಂದಾಗುತ್ತಾರೆ.

ರೈಲು ತಪ್ಪಿತೆಂದು ಕುಳಿತರೆ ಏನೂ ಆಗದು, ಬೆಂಗಳೂರಿನಲ್ಲಿ ರೈಲು ಹತ್ತಲು ಆಗದಿದ್ದರೆ, ತುಮಕೂರು, ಅರಸೀಕೆರೆ ಇಲ್ಲವೇ ದಾವಣಗೆರೆಯಲ್ಲಾದರೂ ಓಡಿ ಹತ್ತಬೇಕು. ಕುಳಿತು ರಾಜಕಾರಣ ಮಾಡುವ ಕಾಲ ಹೋಯಿತೂರೀ.., ಅವರು (ಸಿದ್ದರಾಮಯ್ಯ), ಶಕ್ತಿಯುತವಾಗಿ ಹೋರಾಡಿದ್ದರೆ, ಇಂತಹ ಸ್ಥಿತಿ ಬರುತ್ತಿರಲಿಲ್ಲವೇನೋ. ದೆಹಲಿ ವರಿಷ್ಠರಿಗೆ ಏನು ಅನ್ನಿಸಿತೋ ತಿಳಿಯದು. ರಾಜ್ಯದಲ್ಲಿ ನಾಯಕತ್ವ ಬದಲಾಯಿಸಿ ಹೊಸಬರಿಗೆ ಕೊಟ್ಟಿದ್ದಾರೆ.



ಸತೀಶ್ ಜಾರಕಿಹೊಳಿ

ಕಳೆದ 20 ವರ್ಷಗಳ ಹಿಂದೆ ಇದ್ದ ರಾಜಕಾರಣಿಗಳು ಈಗ ಯಾರೂ ಇಲ್ಲ. ಇದು ಕಾಂಗ್ರೆಸ್‌ಗೆ ಸೀಮಿತವಾಗಿಲ್ಲ, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷಗಳಲ್ಲೂ ಇದೇ ಪರಿಸ್ಥಿತಿ. ನಾವು ರೈಲು ಹಿಡಿಯದಿದ್ದರೆ, ಜನರು ನಮ್ಮನ್ನು ಮರೆತುಬಿಡುತ್ತಾರೆ. ಇದನ್ನು ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ, ಜನರ ಮಾತನ್ನೇ ಇಲ್ಲಿ ವಿಶ್ಲೇಷಿಸಿದ್ದೇನೆ. ಸಿದ್ದರಾಮಯ್ಯ ಮೈಸೂರಲ್ಲೇ ಕುಳಿತು ರಾಜಕಾರಣ ಮಾಡಬಹುದು, ಅದರಲ್ಲಿ ತಪ್ಪಿಲ್ಲ. ಆದರೆ, ಜನಸಂಪರ್ಕ ಎಲ್ಲಿಯವರೆಗೆ ಇರುತ್ತದೋ, ಅಲ್ಲಿಯವರೆಗೆ ಮಾತ್ರ ಅವರು ನಾಯಕನಾಗಿ ಉಳಿಯಲು ಸಾಧ್ಯ.

ಸಿದ್ದರಾಮಯ್ಯ ಕಾಂಗ್ರೆಸ್‌ನಲ್ಲಿ 20 ವರ್ಷಗಳಿಂದ ಇದ್ದಾರೆ, ಅವರದೇ ಆದ ಬೆಂಬಲಿಗರು ಇದ್ದಾರೆ, ಅವರದೇ ಧಾಟಿಯಲ್ಲಿ ಕೆಲಸ ಮಾಡುತ್ತಾರೆ ಎಂದರು.

ಅಕ್ಷರಾಭ್ಯಾಸ ಕಾರ್ಯಕ್ರಮ



ರೋಟರಿ ಮೈಸೂರು ಉತ್ತರ ಹಿರಿಯ ಪ್ರಾಥಮಿಕ ಶಾಲೆ ವಾಜಮಂಗಲದಲ್ಲಿ ಬೇಬಿ ಸಿಟ್ಟಿಂಗ್ ಮತ್ತು ಎಲ್ ಕೆ ಜಿ ತರಗತಿಯ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷ ರೊ. ಡಿ.ಬಿ. ರಾಜಶೇಖರ ಮೂರ್ತಿ, ರೋಟರಿ ಅಧ್ಯಕ್ಷ ರೊ. ಎಂ ಚಂದ್ರಶೇಖರ್, ಟ್ರಸ್ಟ್ ಕಾರ್ಯದರ್ಶಿ ರೊ. ರಾಮರಾಧ್ಯ, ಟ್ರಸ್ಟ್ ಖಜಾಂಚಿ ರೊ. ಎಂ ರಾಜು ಹಾಗೂ ಪೋಷಕರು ಮತ್ತು ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿಜಯೇಂದ್ರರ ರಾಜ್ಯಾಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿದರೆ ಎಲ್ಲವೂ ಸರಿಹೋಗಲಿದೆ...

● ವರಿಷ್ಠ ಪ್ರದೀಪ್ ಎಂಬುವರೊಂದಿಗೆ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡರ ಸಂಭಾಷಣೆ ಆಡಿಯೋ ವೈರಲ್ ● ರಾಜ್ಯ ಬಿಜೆಪಿಯಲ್ಲಿ ತಲ್ಲಣ; ಮಾಜಿ ಸಚಿವ ರೇಣುಕಾಚಾರ್ಯ ಆಕ್ರೋಶ; ಪ್ರತಿಕ್ರಿಯೆಗೆ ಗೌಡರ ನಕಾರ

ಬೆಂಗಳೂರು, ಜೂ.29– ರಾಜ್ಯ ಬಿಜೆಪಿಯ ಸದ್ಯದ ಪರಿಸ್ಥಿತಿಯ ಬಗ್ಗೆ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡರು ವರಿಷ್ಠರಲ್ಲಿ ಒಬ್ಬರೆನ್ನಲಾಗುವ ಪ್ರದೀಪ್ ಎಂಬುವರೊಂದಿಗೆ ಇಂಗ್ಲಿಷ್‌ನಲ್ಲಿ ನಡೆಸಿರುವ ಆಡಿಯೋ ಸಂಭಾಷಣೆ ವೈರಲ್ ಆಗಿದ್ದು, ಭಾರೀ ವಿವಾದ ಸೃಷ್ಟಿಸಿದೆ.

ಬಿಜೆಪಿಯ ಸದ್ಯದ ಪರಿಸ್ಥಿತಿಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರಣ. ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿದರೆ ಎಲ್ಲವೂ ಸರಿ ಹೋಗಲಿದೆ. ಅವರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕುವ ಕಾಲ ಹತ್ತಿರ ಬಂದಿದೆ ಎಂದು ಸದಾನಂದಗೌಡರು ಹೇಳಿರುವ ವಿಷಯ ಆಡಿಯೋದಲ್ಲಿ ಬಹಿರಂಗವಾಗಿದೆ.

ಮೂರು ನಿಮಿಷದ ಈ ಆಡಿಯೋದಲ್ಲಿ ಸದಾನಂದಗೌಡರು ಈಗ ಜೂನ್ ನಂತರ, ಜುಲೈ ಆಮೇಲೆ ಆಗಸ್ಟ್; ಅದು ಮುಗಿದ ನಂತರ ವಿಜಯೇಂದ್ರ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ಕಿಕ್ ಔಟ್ ಮಾಡಲಾಗುತ್ತದೆ. ಆನಂತರ ಎಲ್ಲವೂ ಸರಿ ಹೋಗುತ್ತದೆ ಎಂದಿದ್ದಾರೆ.

ಎರಡು ತಿಂಗಳು ನಾವು ಕಾಯೋಣ. ನವೆಂಬರ್‌ಗೆ ಹೇಗಿದ್ದರೂ ವಿಜಯೇಂದ್ರ ಅವಧಿ ಮುಗಿಯಲಿದೆ. ಅವರು ಕಿಕ್ ಔಟ್ ಆದರೆ ಎಲ್ಲಾ ಸಮಸ್ಯೆಗಳು ಇತ್ಯರ್ಥವಾಗಲಿವೆ. ಅನಗತ್ಯವಾಗಿ ಇದು ನಾವೇಕೆ ಗೊಂದಲ ಸೃಷ್ಟಿಸಿಕೊಳ್ಳೋಣ. ಹೈಕಮಾಂಡ್ ನಾಯಕರು ಸೂಕ್ತ ಕಾಲದಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಅವರನ್ನು ಈಗಲೇ ಕಿತ್ತು ಹಾಕಿದರೆ ನಾವು ಲಿಂಗಾಯಿತರ ವಿರೋಧಿ ಎಂದು ಸಾಬೀತಾಗುತ್ತದೆ. ನವೆಂಬರ್‌ನಲ್ಲಿ ಅಧಿಕಾರ ಮುಗಿಯುತ್ತಿದ್ದಂತೆ ಕಿತ್ತು ಹಾಕಿಬಿಡಿ. ಆಗ ಯಾವ ಗೊಂದಲವೂ ಇರುವುದಿಲ್ಲ ಎಂದಿದ್ದಾರೆ



ವಿಜಯೇಂದ್ರ ಮುಂದುವರೆಯುವುದರಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಮತ್ತು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕೈವಾಡ ಇದೆಯೇ ಎಂದು ಅನಾಮಧೇಯ ವ್ಯಕ್ತಿ ಕೇಳಿದಾಗ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಆಟವಾಡುತ್ತಿದ್ದಾರೆ. ನೋಡೋಣ, ಏನಾಗುತ್ತದೆ ಎಂದು ಡಿವಿಎಸ್ ಹೇಳಿದ್ದಾರೆ.

ನಾನು ದೇವರನ್ನು ನಂಬುವ ವ್ಯಕ್ತಿ. ಈಗಲೂ ನಾನು ಹೋದರೆ ಬಸ್ ನಿಲ್ದಾಣ, ಆಟೋ ಸ್ಟಾಂಡ್‌ಗಳಲ್ಲಿ 40ರಿಂದ 50 ಸಾವಿರ ಜನ ಸೇರುತ್ತಾರೆ ಎನ್ನುವ ಮೂಲಕ ಪರೋಕ್ಷವಾಗಿ ತಾವು ಅಧ್ಯಕ್ಷ ಸ್ಥಾನಕ್ಕೆ ಸಿದ್ಧ ಎಂದು ಹೇಳಿಕೊಂಡಿದ್ದಾರೆ. ನಾನು ಈ ಹಿಂದೆ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೇನೆ. ಆಗ ನಾನು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿದ್ದೆ. ಈಗ ಎಲ್ಲವೂ ವಿರುದ್ಧವಾಗಿ ನಡೆಯುತ್ತಿವೆ ಎಂದು ಹೇಳಿದ್ದಾರೆ

ಪ್ರತಿಕ್ರಿಯಿಸಲು ಗೌಡರ ನಕಾರ: ಈ ಬಗ್ಗೆ ಪ್ರತಿಕ್ರಿಯಿಸಲು ಸದಾನಂದಗೌಡ ನಿರಾಕರಿಸಿದ್ದಾರೆ. ಈ ಆಡಿಯೋ ಯಾರದ್ದು ಎಂಬ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಇದು ಯಾರದ್ದು ಎಂಬುದನ್ನು ಮಾಧ್ಯಮಗಳೇ ಕಂಡುಹಿಡಿಯಲಿ. ಈ ಕುರಿತು ನಾನು ಏನನ್ನು ಹೇಳುವುದಿಲ್ಲ ಎಂದು ತಿಳಿಸಿದ್ದಾರೆ.

ರೇಣುಕಾಚಾರ್ಯ ಆಕ್ರೋಶ: ಇನ್ನು ಆಡಿಯೋ ಬಗ್ಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಮಾಜಿ ಮಂತ್ರಿ ರೇಣುಕಾಚಾರ್ಯ, ರಾಜ್ಯದ ಮುಖ್ಯಮಂತ್ರಿ ಆಗಿ ಅಧಿಕಾರ ಅನುಭವಿಸಲು ಸದಾನಂದಗೌಡ ಅವರಿಗೆ ಯಾರ ಆಶೀರ್ವಾದ ಬೇಕಾಗಿತ್ತು, ಯಾರ ಬೆಂಬಲದಿಂದ ಅವರು ಪಕ್ಷದ ಅಧ್ಯಕ್ಷರಾಗಿದ್ದರು ಎಂಬುದನ್ನು ಒಮ್ಮೆ ನೆನಪು ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಅಂದು ರಾಜ್ಯಾದ್ಯಂತ ಸುತ್ತಿ ಪಕ್ಷವನ್ನು ಕಟ್ಟದೆ ಹೋಗಿದ್ದರೆ ಸದಾನಂದಗೌಡ ಅವರು ಮುಖ್ಯಮಂತ್ರಿ ಆಗುತ್ತಿರಲಿಲ್ಲ. ಕೇಂದ್ರ ಮಂತ್ರಿಯು ಆಗುತ್ತಿರಲಿಲ್ಲ. ಇಂದು ದೊಡ್ಡದಾಗಿ ಮಾತನಾಡುತ್ತಿರುವ ಬಿಜೆಪಿ ನಾಯಕರು ಯಾರು ಇರುತ್ತಿರಲಿಲ್ಲ ಎಂದಿದ್ದಾರೆ.

ಪಕ್ಷದ ಅಧ್ಯಕ್ಷರಾಗಿ ವಿಜಯೇಂದ್ರ ಎರಡು ವರ್ಷಗಳ ಕಾಲ ಸಂಘಟನೆಯಲ್ಲಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ರಾಜ್ಯದ ಮೂಲೆ ಮೂಲೆಗೂ ಹೋಗಿ ಪಕ್ಷ ಸಂಘಟಿಸುತ್ತಿರುವ ಅವರನ್ನು ನಾವೆಲ್ಲರೂ ಬೆಂಬಲಿಸಬೇಕು. ಆದರೆ ಇಂತಹ ನಾಯಕರ ವಿರುದ್ಧ ಹಗುರವಾಗಿ ಮಾತನಾಡಲಾಗುತ್ತಿದೆ. ಇದನ್ನು ನಾವು ಸಹಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.



ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀಮತಿ. ಬಿವಾ ಗುಟಗುಟಿಯಾ ಮತ್ತು ಶ್ರೀ. ರೋನಕ್ ಗುಟಗುಟಿಯಾ ರವರುಗಳು ಒಟ್ಟಾಗಿ ಅವರವರ ಪ್ರತ್ಯೇಕ ಮಾಲೀಕತ್ವದಲ್ಲಿರುವ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕೆ.ಶೆಟ್ಟಹಳ್ಳಿ–2 ಹೋಬಳಿ, ಕೆ.ಶೆಟ್ಟಹಳ್ಳಿ ಗ್ರಾಮಕ್ಕೆ ಸೇರಿದ ವಾಣಿಜ್ಯ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡ ಒಟ್ಟು ವಿಸ್ತೀರ್ಣ 05 ಎಕರೆ 11 ಗುಂಟೆ ಜಮೀನಿನ ಮಾಲೀಕರ ವಿವರ, ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿಯು ಈ ಕೆಳಕಂಡಂತಿದೆ.

ಸರ್ವೆ ನಂ.	ವಿಸ್ತೀರ್ಣ		ಚಕ್ಕುಬಂದಿ			
	ಎ	ಗು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
338/1 No: 574414 ದಿ. 20-03-2024	00	24	ರಸ್ತೆ	ಸರ್ವೆ. ನಂ. 339	ಸರ್ವೆ. ನಂ. 338	ಸರ್ವೆ. ನಂ. 338
340/1 No: 574413 ದಿ. 20-03-2024	00	36	ರಸ್ತೆ	ಸರ್ವೆ. ನಂ. 339	ಸರ್ವೆ. ನಂ. 340	ಸರ್ವೆ. ನಂ. 338 & ಸರ್ವೆ. ನಂ. 340
339/1 ಖುಷ್ಕಿ ಜಮೀನು	01	06	ಸರ್ವೆ. ನಂ. 339/4	ಲೋಕಪಾವನಿ ನದಿ	ಸರ್ವೆ. ನಂ. 343/2, & ಸರ್ವೆ. ನಂ. 343/3, 343/4	ಸರ್ವೆ. ನಂ. 339/2
ಶ್ರೀಮತಿ. ಬಿವಾ ಗುಟಗುಟಿಯಾ ಕೋಂ ಎಸ್ .ಕೆ. ಗುಟಗುಟಿಯಾ ರವರ ಮಾಲೀಕತ್ವದ ಒಟ್ಟು 02 ಎಕರೆ 26 ಗುಂಟೆ						
339/4 No: 574416 ದಿ. 20-03-2024	01	05	ಸರ್ವೆ. ನಂ. 340 ರಲ್ಲಿ ದಾಸಯ್ಯ & ಚಿಕ್ಕಹೈದಯ್ಯ ರವರ ಜಮೀನು	ಸರ್ವೆ. ನಂ. 339/1 ರಲ್ಲಿ ಬಿವಾ ಗುಟಗುಟಿಯಾ ರವರ ಜಮೀನು	ಶೇಷಾಯ್ಯಂಗಾರ್ ರವರ ಜಮೀನು	ಸರ್ವೆ. ನಂ. 339 ರಲ್ಲಿ ಬಿವಾ ಗುಟಗುಟಿಯಾ ರವರ ಜಮೀನು
340/2 Order No: 574415 dt 20-03-2024	01	20	ಬೆಂಗಳೂರು-ಮೈಸೂರು ರಸ್ತೆ	ಸರ್ವೆ. ನಂ. 339 ರಲ್ಲಿ ದಾಸಯ್ಯ ರವರ ಜಮೀನು	ಶೇಷಾಯ್ಯಂಗಾರ್ ರವರ ಜಮೀನು	ಕಮಲಮ್ಮ ರವರ ಜಮೀನು
ಶ್ರೀ. ರೋನಕ್ ಗುಟಗುಟಿಯಾ ಬಿನ್ ಎಸ್ .ಕೆ. ಗುಟಗುಟಿಯಾ ರವರ ಮಾಲೀಕತ್ವದ ಒಟ್ಟು 02 ಎಕರೆ 25 ಗುಂಟೆ						

ಸಹಿ/– ಶ್ರೀಲತಾ ದೀಕ್ಷಿತ್,
ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್ ನಂ. 1416, ನಾರಾಯಣಶಾಸ್ತ್ರೀ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು – 570 001.
ಮೊ: + 91 9844640641 ; email: sldlawfirm2021@gmail.com

ಗೌರವಾನ್ವಿತ ಉಪ–ವಿಭಾಗಾಧಿಕಾರಿಗಳ ನ್ಯಾಯಾಲಯ, ಹುಣಸೂರು

ಆರ್.ಎ. ಸಂಖ್ಯೆ: 16/2026

ಮೇಲ್ಮನವಿದಾರರು: ಸ್ವಾಮಿನಾಯಕ ಮತ್ತು ಇತರರು

ವಿರುದ್ಧ

ಎದುರುದಾರರು: 4. ಬಸಮ್ಮ @ ಬಸಮಣಿ ಕೋಂ ಎಂ.ಕೆ. ಪುಟ್ಟರಾಜು ವಯಸ್ಸು ಸುಮಾರು 58 ವರ್ಷ ; 5. ಎನ್.ಕೆ. ಪುಟ್ಟರಾಜು ಬಿನ್ ಲೇಟ್.ಕುಳ್ಳಪ್ಪ ವಯಸ್ಸು ಸುಮಾರು 65 ವರ್ಷ.

4 ಮತ್ತು 5ನೇ ಎದುರುದಾರರ ವಾಸ: ಮೋದೂರು ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

7. ಮಮತ ಕೋಂ. ಬೀರಭದ್ರ ವಯಸ್ಸು ಸುಮಾರು 38 ವರ್ಷ, ವಾಸ: ದಡಕನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ಜಿಲ್ಲೆ.

8. ಸುನಿತ ಕೋಂ ಮಹೇಶ ವಯಸ್ಸು ಸುಮಾರು 40 ವರ್ಷ, ವಾಸ: ಕೊಳವಿಗೆ ಗ್ರಾಮ, ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು.

9. ಪವಿತ್ರ ಕೋಂ. ಶಿವಶಂಕರ ವಯಸ್ಸು ಸುಮಾರು 41 ವರ್ಷ ವಾಸ: ಕಂಪಲಾಪುರ ಗ್ರಾಮ, ರಾವಂದೂರು ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಮೇಲ್ಮನವಿದಾರರು ಸದರಿ ಮೇಲ್ಮನವಿಯನ್ನು ಎದುರುದಾರರಾದ 4, 5, 7, 8 ಮತ್ತು 9ನೇ ನಿಮ್ಮಗಳ ಮೇಲೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ನಿಮ್ಮ ಹಾಜರಾತಿಗಾಗಿ ಮಾನ್ಯ ಘನ ನ್ಯಾಯಾಲಯವು ದಿನಾಂಕ 06.07.2026ರಂದು ಮಧ್ಯಾಹ್ನ 3.00 ಗಂಟೆಗೆ ಸದರಿ ಪ್ರಕರಣವನ್ನು ನಿಗದಿಪಡಿಸಿದ್ದು, ಆ ದಿನ ನೀವು ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಮಾನ್ಯ ಘನ ನ್ಯಾಯಾಲಯವು ನಿಮ್ಮ ವಿರುದ್ಧ ಏಕ ಪಕ್ಷೀಯವಾಗಿ ಆದೇಶವನ್ನು ಹೊರಡಿಸಿ ಪ್ರಕರಣವನ್ನು ಮುಂದುವರೆಸಿಕೊಂಡು ಹೋಗುವುದೆಂದು ತಿಳಿಯಪಡಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಉಪವಿಭಾಗಾಧಿಕಾರಿಗಳು
ಹುಣಸೂರು ಉಪವಿಭಾಗ, ಹುಣಸೂರು.

ಮೇಲ್ಮನವಿದಾರರ ಪರ ವಕೀಲರು
ಸಹಿ/– ಎಂ.ಆರ್.ಹರೀಶ್, ಬಿ.ಕಾಂ. ಜೆ.ಡಿ.ಸಿ ಎಲ್.ಎಲ್.ಬಿ, ವಕೀಲರು, ಮಾರುತಿ ಪೆಟ್ರೋಲ್ ಬಂಕ್ ಎದುರು, ಹಳೇ ಬಿ.ಎಂ.ರಸ್ತೆ, ಹುಣಸೂರು.

ನಕ್ಕರೆ ಅದೇ ಸ್ವರ್ಗ

ತಿಮ್ಮ : ಯಾಕೆ ಹೆಣ್ಣು ನೋಡೋಕೆ ಗಂಡಿನ ಕಡೆಯವರೇ ಹೋಗ್ತಾರೆ?

ಗುಂಡ: ಯಾಕಂದ್ರೆ ಗಂಡಿನ ಮನೆ ತಲುಪುವಷ್ಟರಲ್ಲಿ ಮಾಡ್ಕೊಂಡಿರುವ ಮೇಕಪ್ ಹಾಳಾಗುತ್ತೆ ಅಂತ.

ಮೈಸೂರು ಮಿತ್ರ

ಮಂಗಳವಾರ, ಜೂನ್ 30, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಾವು ಇಂದು ಮಾಡುವ ಪ್ರತಿಯೊಂದು ಕಾರ್ಯವೂ ನಮ್ಮ ನಾಳೆಗಳ ಸ್ವರೂಪವನ್ನು ನಿರ್ಧರಿಸುತ್ತದೆ. ಹಾಗಾಗಿ ನಮ್ಮ ಪ್ರತಿ ಹೆಜ್ಜೆಗೂ ಸಮಯೋಚಿತವಾಗಿರಲಿ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಕೃತಿ ಇಲ್ಲದ ಮಾತು ಕಸ ಬೆಳೆದ ತೋಟವಿದ್ದಂತೆ.

ನಿಮ್ಮ ಪತ್ರಗಳು

ಮೈಸೂರಲ್ಲಿ ಕಂಬಳ ಕ್ರೀಡೆಯ ಅಗತ್ಯವೇನು?

ಮಾನ್ಯರೆ,

ದಸರಾ ವೇಳೆ ಮೈಸೂರಿನಲ್ಲಿ ಅ.18 ಮತ್ತು 19 ರಂದು 2 ದಿನ ಕಂಬಳ ಉತ್ಸವ ನಡೆಸಲು ತೀರ್ಮಾನಿಸಿದ್ದು, ದಕ್ಷಿಣ ಕನ್ನಡ ಜಿಲ್ಲೆಯ 200 ಜೋಡಿ ಕೋಣಗಳು ಪಾಲ್ಗೊಳ್ಳಲು ಆಹ್ವಾನ ನೀಡಲಾಗಿದೆ. ಎರಡೂ ದಿನ ಮೈಸೂರು ನಗರಕ್ಕೆ 5 ಲಕ್ಷ ಪ್ರವಾಸಿಗರು ಬರುವ ನಿರೀಕ್ಷೆ ಇದೆ ಎಂದು ಕಂಬಳ ಸಮಿತಿ ಅಧ್ಯಕ್ಷರೂ ಆದ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಮೈಸೂರು ನಗರದ ಕೇಂದ್ರ ಭಾಗದಲ್ಲಿ ವಿಶಾಲ ರಸ್ತೆಗಳು ಇಲ್ಲದೆ ಇರುವುದರಿಂದ ದಸರಾ ವೇಳೆ ರಸ್ತೆಗಳಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಇದು ಪ್ರತಿ ವರ್ಷ ದಸರಾ ವೇಳೆ ನಗರದ ನಾಗರಿಕರು ಎದುರಿಸುತ್ತಿರುವ ಸಮಸ್ಯೆ ಯಾಗಿದ್ದು, ತಮ್ಮ ನಿತ್ಯ ಕೆಲಸಗಳನ್ನು ನಿರ್ವಹಿಸಲು ತೊಂದರೆ ಪಡುವಂತಾಗುತ್ತದೆ. ಈಗಾಗಲೇ ದಸರಾ ದೀಪಾಲಂಕಾರ ನೋಡಲು ಬರುವ ಜನರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದು ಹೋಟೆಲ್, ವ್ಯಾಪಾರಿ, ಉದ್ಯಮಿದಾರರಿಗೆ ಅನುಕೂಲವಾಗಿದೆ. ಆದರೆ ನಾಗರಿಕರಿಗೆ ತೊಂದರೆಯಾಗಿದೆ. ಕಂಬಳ ಕ್ರೀಡೆ ಅದು ಕರಾವಳಿಯ ಅಸ್ಮಿತೆ. ಅದು ಅಲ್ಲಿಯೇ ನಡೆಯಲಿ. ಬೇಕಾದರೆ ಅವರು ವರ್ಷದಲ್ಲಿ ಮತ್ತೊಂದು ಬಾರಿ ನಡೆಸಲಿ. ಅದಕ್ಕೆ ಕಾರಣವೂ ಇದೆ ಇತಿಹಾಸವಿದೆ.

ಮೈಸೂರು ದಸರಾಕ್ಕೆ ಖರ್ಚು ಮಾಡುವ ಮೊತ್ತ ಪ್ರತಿ ವರ್ಷ ಏರುತ್ತಿದೆ. ಕಳೆದ ವರ್ಷ 40 ಕೋಟಿ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿತ್ತು. ಇದು ಎಷ್ಟು ಖರ್ಚಾಯಿತು ಎನ್ನುವ ರಾಮನ ಲೆಕ್ಕ ಕೃಷ್ಣನ ಲೆಕ್ಕ ಎಂಬಂತೆ ಮೊನ್ನೆಯಷ್ಟೇ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಇದೀಗ ಕಂಬಳ ಕೂಡ ಸೇರಿದರೆ ಇದರ ಮೊತ್ತ ಇನ್ನೂ ಏರಿಕೆಯಾಗುವ ಸಂಭವವಿದೆ. ಇದು ಕೇವಲ ಹಣ ಬಿಡುಗಡೆ ಮಾಡಿಸಿಕೊಂಡು ಖರ್ಚು ಮಾಡುವ ದಾರಿಯಷ್ಟೆ.

ರಿಂಗ್ ರಸ್ತೆಯ ಉತ್ತನಹಳ್ಳಿ ಬಳಿ ಈಗಾಗಲೇ 2 ವರ್ಷಗಳಿಂದ ಯುವ ದಸರಾ ನಡೆಯುತ್ತಿದೆ. ಈಗ ಹತ್ತಿರವೇ ಮತ್ತೊಂದು ಕಾರ್ಯಕ್ರಮ ಆಯೋಜಿಸುವುದು. ನಗರದ ವಾಹನ ದಟ್ಟಣೆ ಸಮಸ್ಯೆಯ ಮತ್ತಷ್ಟು ಬಿಗಡಾಯಿಸಲು ಕಾರಣವಾಗುತ್ತದೆ. ಕಂಬಳದಲ್ಲಿ ಕೋಣಗಳಿಗೆ ಹಿಂಸೆ ನೀಡಲಾಗುತ್ತದೆ. ಮೈಸೂರಿನಲ್ಲಿ ಆನೆ ಸಾಕುವುದಂತೂ ಇದ್ದೇ ಇದೆ. ಈಗ ಹೊಸದಾಗಿ ಗುಂಡಿ ತೆಗೆದು, ನೀರು ಹಾಕಿ ಕಂಬಳ ಮಾಡುವುದು ಬೇಡ ಎಂದು ಕನ್ನಡ ಚಳುವಳಿ ವಾಟಾಳ್ ನಾಗರಾಜ್ ಹೇಳಿರುವುದು ಸರಿಯಾಗಿಯೇ ಇದೆ.

ರಾಜ್ಯದಲ್ಲಿ ಜೂನ್‌ನಲ್ಲಿ ಕೆರೆ, ಕಟ್ಟೆಗಳು ತುಂಬಬೇಕಿದ್ದ ಮುಂಗಾರು ಮಳೆ ವಿಫಲವಾಗಿ ಬರದ ಛಾಯೆ ಗೋಚರಿಸುತ್ತಿದೆ. ಮುಂಗಾರು ಪೂರ್ವ ಮಳೆಯೂ ವಿಫಲವಾಗಿ ರೈತರು ಬೆಳೆ ಇಲ್ಲದೆ ತಲೆ ಮೇಲೆ ಕೈ ಹೊತ್ತು ಕುಳಿತಿದ್ದಾರೆ. ಬರದ ಈ ವೇಳೆ ದಸರಾವನ್ನು ಸರಳವಾಗಿ ಆಚರಿಸಿ ರೈತರಿಗೆ ನೆರವಾಗಿ ನಿಲ್ಲುವ ಬದಲು ಸರ್ಕಾರ ದುಂದು ವೆಚ್ಚಕ್ಕೆ ಮುಂದಾಗಿರುವುದು ಅದ್ದೂರಿಯಾಗಿ ದಸರಾ ಆಚರಣೆ ಮಾಡುವುದನ್ನು ಪ್ರತಿಷ್ಠೆಯಾಗಿ ಮಾಡಿಕೊಂಡಿರುವುದು ವಿಪರ್ಯಾಸವೇ ಸರಿ. ಈಗಲೂ ಕಾಲ ಮಿಂಚಿಲ್ಲ, ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿ, ಸರ್ಕಾರ, ಮುಖ್ಯ ಮಂತ್ರಿಗಳು ಗಮನ ಹರಿಸಿ ಬರ, ರೈತರ ಕಡೆ ನೋಡುವುದು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹರಿಸುವುದು ಈಗಿನ ತುರ್ತು ಅಗತ್ಯ ಎನ್ನುವುದನ್ನು ಮನಗಾಣಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಬೋಗಾದಿ ಕೆರೆಯನ್ನು ಉಳಿಸಿ



ಮಾನ್ಯರೆ,

ಮೈಸೂರು ನಗರ ಪಾಲಿಕೆ ಅಪರೂಪಕ್ಕೆ ಒಂದು ಒಳ್ಳೆಯ ಕೆಲಸವನ್ನು ಕೈಗೆತ್ತಿಕೊಂಡಿದೆ. ಪಾಲಿಕೆ ವತಿಯಿಂದ ಕಟ್ಟಡ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣವಾಗುತ್ತಿರುವುದಾಗಿ ವರದಿಯಾಗಿದೆ. (ಮೈ.ಮಿ 29.6.2026). ಆಧುನಿಕತೆ ಹೆಚ್ಚಾದಂತೆ, ಜನಸಂಖ್ಯೆ ಹೆಚ್ಚಾದಂತೆ, ವಾಸದ ಮನೆಗಳ ನಿರ್ಮಾಣವೂ ಹೆಚ್ಚಾಗಿದೆ. ಇದರ ಜೊತೆಗೆ ಹಳೆಯ ಮನೆಗಳನ್ನು ಕೆಡವಿ ಹೊಸ ಮನೆ ಕಟ್ಟುವವರ ಸಂಖ್ಯೆಯೂ ಹೆಚ್ಚಾಗಿದೆ. ಮೈಸೂರು ನಗರದ ದಶದಿಕ್ಕುಗಳಲ್ಲೂ ಎಲ್ಲಿ ಹೋಗಿ ನೋಡಿದರೂ ರಿಂಗ್ ರಸ್ತೆಯ ಸುತ್ತಲೂ ಲಾರಿಗಟ್ಟಲೆ ಘನ ತ್ಯಾಜ್ಯ ವಸ್ತುಗಳು ಗುಡ್ಡೆ ಗುಡ್ಡೆಯಾಗಿ ಬಿದ್ದಿವೆ. ಈ ತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಿ ಮರು ಬಳಕೆಗೆ ಬಳಸುವ ಯೋಜನೆ ಅತ್ಯಂತ ಸ್ವಾಗತಾರ್ಹ ವಿಷಯವಾಗಿದೆ. ಇದು ಪರಿಸರ ರಕ್ಷಣೆಗೂ ಅತ್ಯಂತ ಉತ್ತಮ ಹೆಜ್ಜೆಯಾಗಿದೆ.

ಕೆರೆಗಳು ನಮ್ಮ ಆಸ್ತಿ ಅಲ್ಲವೇ? ಅದನ್ನು ಉಳಿಸಿಕೊಳ್ಳ ಬೇಡವೇ? ಪಾಲಿಕೆ ಅಧಿಕಾರಿಗಳಲ್ಲಿ ನನ್ನ ಮನವಿ ಏನೆಂದರೆ ಬೋಗಾದಿ ಕೆರೆ ಎಂದು ಕರೆಯಲ್ಪಡುವ ಮರಿಯಪ್ಪನ ಕೆರೆ ಬಗ್ಗೆಯೂ ಗಮನ ನೀಡಿ. ಕೆರೆಗೆ ಗೇಟ್ ಇದ್ದರೂ ಕೂಡ (ಚಿತ್ರ ನೋಡಿ) ತ್ಯಾಜ್ಯ ವಸ್ತುಗಳನ್ನು ತಂದು ಸುರಿದಿದ್ದಾರೆ. ಈ ಕ್ಷೇತ್ರದ ಅತ್ಯಂತ ಜನಪರ ಶಾಸಕರಾದ ಸನ್ಮಾನ್ಯ ಜಿ. ಟಿ. ದೇವೇಗೌಡರು ಈ ಕೆರೆಯ ಅಭಿವೃದ್ಧಿಗೆ ಕಾರ್ಯ ಪ್ರವೃತ್ತರಾಗಿ ಕೆರೆಯನ್ನು ಪುನರುಜ್ಜೀವನ ಗೊಳಿಸಲಿ.

–ವಿ. ಕೇಶವಮೂರ್ತಿ, ಜ್ಯೋತಿಷ್ಯ ವಿದ್ವಾಂಸ, ಮೈಸೂರು.

ಶಾಸಕ ಪ್ರದೀಪ್ ಈಶ್ವರ್‌ರ ಅನಾಗರಿಕ ವರ್ತನೆ

ಮಾನ್ಯರೆ,

ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್ ಅವರು, ಕೆಂಪೇಗೌಡ ಜಯಂತಿಯಂದು ಸಾರ್ವಜನಿಕವಾಗಿ ನಡೆದುಕೊಂಡಿರುವ ಘಟನೆ ನೋಡಿದರೆ, ಇವರು ಜನಪ್ರತಿನಿಧಿಯೋ, ಇಲ್ಲ ಬೀದಿ ರೌಡಿಯೋ ಎನ್ನುವಂತಾಗಿದೆ. ಸಾರ್ವಜನಿಕವಾಗಿ ಹೇಗೆ ನಡೆದುಕೊಳ್ಳಬೇಕು ಎಂಬ ಕನಿಷ್ಠ ಜ್ಞಾನವೂ ಇವರಿಗೆ ಇಲ್ಲವಾಯಿತೆ? ಸಾರ್ವಜನಿಕ ಸಮಾರಂಭದಲ್ಲಿ ಅದು ಕೆಂಪೇಗೌಡರ ಜಯಂತಿ ಆಚರಣೆಯ ಸಂದರ್ಭದಲ್ಲಿ ಮೀಸೆ ತಿರುವುದು, ಭುಜ ತಟ್ಟಿ ಕುಸ್ತಿಗೆ ಆಹ್ವಾನಿಸುವಂತೆ ಜನರನ್ನು ಕೆರಳಿಸಿರುವುದು ನಾನೊಬ್ಬ ಬೀದಿ ರೌಡಿ, ನಿಮಗೆ ತಾಕತ್ತಿದ್ದರೆ ನನ್ನ ಜೊತೆ ಕುಸ್ತಿಗೆ ಬನ್ನಿ ಎನ್ನುವಂತಿದೆ. ಇದು ಅವರ ಅನಾಗರಿಕ ವರ್ತನೆ. ಇವರು ಮುಂದಿನ ದಿನಗಳಲ್ಲಿ ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳದಿದ್ದರೆ ಜನರೆ ಇವರಿಗೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸುತ್ತಾರೆ. ಇವರು ಪರಿಶ್ರಮ ಎಂದು ಹೆಸರಿನಲ್ಲಿ ದ್ವಿತೀಯ ಪಿಯುಸಿ ಮಕ್ಕಳಿಗೆ ಟ್ಯೂಷನ್ ಹೇಳಿಕೊಡುವ ಅಧ್ಯಾಪಕ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಎಲ್ಲಿ ಹೋದವು ಆ ಕಥನ ಗೀತೆಗಳು ಭಾಗ–2

(ಜೂ.9ರ ಸಂಚಿಕೆಯಿಂದ)

ಮಕ್ಕಳು ಮರಿ ಸಮೇತರಾಗಿ ಇಡೀ ಕುಟುಂಬವೇ ಈ ಕಥನ ಗೀತೆಯನ್ನು ಬೆಳ್ಳಿತೆರೆಯ ಮೇಲೆ ನೋಡಿ ಆನಂದಿಸುತ್ತಿತ್ತು. ಹಾಗೆ ಆನಂದಿಸಿದ ಆ ಹಾಡನ್ನು ಅಲ್ಲಿಯೇ ಬಿಟ್ಟು ಬರುತ್ತಿರಲಿಲ್ಲ. ಆ ಹಾಡಿನಲ್ಲಿರುವ ನೈತಿಕತೆಯನ್ನು ಜನ ತಮ್ಮ ಮನೆಯಂಗಳದವರೆಗೂ ತೆಗೆದುಕೊಂಡು ಹೋಗುತ್ತಿದ್ದರು.

ಕನ್ನಡನಾಡಿನ ವೀರರಮಣಿಯ
ಗಂಡು ಭೂಮಿಯ ವೀರನಾರಿಯ
ಚರಿತೆಯ ನಾನು ಹಾಡುವೆ ....

ಹೀಗೆ 'ನಾಗರಹಾವು' ಸಿನಿಮಾದಲ್ಲಿ ಹಾಡು ಶುರುವಾಯಿತೆಂದರೆ ಕನ್ನಡಿಗರ ಮೈಯ್ಯಲ್ಲಿನ ರೋಮ ಚುಳ್ಳಗೆ ರೋಮಾಂಚನವಾಗುತ್ತದೆ. ನಮಗೆ ಗೊತ್ತಿಲ್ಲದೆಯೇ ನಮ್ಮ ಧಮನಿಧಮನಿಗಳಲ್ಲಿ ನಾಡಪ್ರೇಮದ ಬಿಸಿರಕ್ತ ವಾಯುವೇಗದಲ್ಲಿ ಹರಿಯಲಾರಂಭಿಸುತ್ತದೆ. ಒನಕೆ ಓಬವ್ವ ನಮ್ಮ ಕರುನಾಡಿನ ತಾಯಿಯಂತೆ ಕಾಣಿಸುತ್ತಾಳೆ.

ಚಿತ್ರದುರ್ಗದ ಕೋಟೆಯನ್ನಾಳಿದ ಮದಕರಿ ನಾಯಕ ಹೈದರಾಲಿಯ ಯುದ್ಧದ ಕತೆಯನ್ನು ಮಂಡ್ಯ ಜಿಲ್ಲೆಯ ಯುವಕ, ಬೀದರ್ ಜಿಲ್ಲೆಯ ಯುವತಿ, ಬೆಳಗಾವಿಯ ಅಜ್ಜ, ಧಾರವಾಡದ ಅಜ್ಜಿ, ಕೇಳಿಸಿಕೊಂಡರೂ ಸಾಕು ಚಿತ್ರದುರ್ಗ ನಮ್ಮದಾಗಿ ಬಿಡುತ್ತದೆ. ನಾಡಭಕ್ತಿಯನ್ನು ಮೈಯಲ್ಲಿ ತುಂಬಿಕೊಂಡು ಓಬವ್ವ ಸಾಯುವಾಗ ಥಿಯೇಟರಿನಲ್ಲಿ ಕುಳಿತ ಮಂದಿ ಉಮ್ಮಳಿಸಿ ದುಃಖಿಸುತ್ತಾರೆ. ಬರಿಯ ಮಕ್ಕಳಷ್ಟೇ ಅಲ್ಲ ಎಷ್ಟೋ ಮಂದಿ ದೊಡ್ಡವರೂ ಕೂಡ ಅತ್ತುಬಿಟ್ಟಿದ್ದಾರೆ. ಇವತ್ತಿಗೂ ಆಡಿಯೋದಲ್ಲೋ ವೀಡಿಯೋದಲ್ಲೋ ಒನಕೆ ಓಬವ್ವನ ಹಾಡು ಕೇಳಿದರೆ ನರನಾಡಿಗಳಲ್ಲಿ ಪೌರುಷ ಕಣ್ಣಾಲಿಗಳಲ್ಲಿ ದುಃಖ ಒಸರುತ್ತಿರುತ್ತದೆ. ಹಾಗಿತ್ತು ಆ ಕಾಲದ ಕಥನಗೀತೆಗಳ ಸೊಗಸು.

ತಾಳಿ ಕಟ್ಟುವ ಶುಭ ವೇಳೆ
ಕೈಯ್ಯಲ್ಲಿ ಹೂವಿನ ಮಾಲೆ
ಯಾರಿಗೆ ಯಾರುಂಟು?
ವಿಧಿ ಬರೆದಿರುವಾ ಲೀಲೆ
ಕೇಳೀ ಒಂದು ಕತೆಯಿದೆ.....

'ಬೆಂಕಿಯಲ್ಲಿ ಅರಳಿದ ಹೂವು' ಚಿತ್ರದಲ್ಲಿ ನಟ ರಾಮಕೃಷ್ಣ, ಅಕ್ಕ–ತಂಗಿಯರಿಬ್ಬರ ಕಷ್ಟದ ಕತೆ ದುಃಖದ ದುರಂತ. ಜೀವನಪಾಠ ತುಂಬಿದ ಮಿಮಿಕ್ರಿ ಬಳಸಿದ ಈ ಹಾಡು ಬಂತೆಂದರೆ ಎಂತವರಿಗೂ ಎಂಟರ್‌ಟೇನ್‌ಮೆಂಟ್ ಮುಗಿದ ಮೇಲೆ ಛೇ! ಎನ್ನಿಸದೆ ಇರದು.

ಕನ್ನಡನಾಡಿನ ರನ್ನದ ರತುನ
ಕೇಳೋ ಕತೆಯನ್ನ
ನಾ ಹೇಳೋ ಕತೆಯನ್ನ
ಹೆಮ್ಮೆಯ ಪಡೆದ
ಹೊಯ್ಸಳ ವಂಶ ಹುಟ್ಟಿದ
ಕತೆಯನ್ನು ನಾಡನು
ಕಟ್ಟಿದ ಕತೆಯನ್ನು...

ಕುಮಾರ್ ಬಂಗಾರಪ್ಪ ನಟಿಸಿದ 'ಶರವೇಗದ ಸರದಾರ' ಚಿತ್ರದ ಈ ಹಾಡು ಇಂದಿಗೂ ಜನಪ್ರಿಯ. ಕರ್ನಾಟಕವನ್ನು ಆಳಿದ ಕನ್ನಡ ಸಾಮ್ರಾಜ್ಯಗಳಲ್ಲಿ ಒಂದಾದ ಹೊಯ್ಸಳರ ಕತೆಯನ್ನು ಹೇಳುತ್ತಾ ಕೆಲವೇ ನಿಮಿಷಗಳಲ್ಲಿ ಇತಿಹಾಸದ ಹಿನ್ನೆಲೆಯನ್ನು ಹೇಳಿ ಮುಗಿಸುವ ಈ ಕಥನಗೀತೆಯಲ್ಲಿ ಎಂತಹ ನೈತಿಕತೆಯ ಪಾಠವಿದೆ. ಯುವಕರು ಹೀರೋಗಳಾಗಬೇಕು. ಅಂತಹ ಸಂದರ್ಭಗಳು ಸೃಷ್ಟಿಯಾದಾಗ ಗುರುಗಳ ಮಾತು ಕೇಳಬೇಕು. ಹಾಗೆ ಗುರು ತೋರಿದ ಮಾರ್ಗದಲ್ಲಿ ನಡೆಯುವ ವೀರನೂ ಧೀರನೂ ಆಗುತ್ತಾನೆ ಎನ್ನುವ ನೈತಿಕ ಪಾಠ ಎಂಟರ್‌ಟೈನ್‌ಮೆಂಟಿನ ಜೊತೆ ಹೇಗೆ ಹಾಸುಹೊಕ್ಕಾಗಿ ಮೂಡಿ ಬಂದಿದೆ ನೋಡಿ.

'ಭೂಕೈಲಾಸ' ಚಿತ್ರದ ರಾಮನ ಅವತಾರ ರಘುಕುಲ ಸೋಮನ ಅವತಾರ ಹಾಡನ್ನು ಕೇಳದ ಕನ್ನಡದ ಕಿವಿಗಳೇ ಇಲ್ಲವೇನೋ! ಕೆಲವೇ ಕೆಲವು ನಿಮಿಷಗಳಲ್ಲಿ ಭಾರತದ ಮಹಾಕಾವ್ಯವಾದ ವಾಲ್ಮೀಕಿ ರಾಮಾಯಣದ ಕತೆಯನ್ನು ಸರ್ವರಿಗೂ ಸರಳವಾಗಿ ತಿಳಿಯುವಂತೆ ಕತೆ ಹೇಳುತ್ತಲೇ ಕಾವ್ಯವನ್ನು ಜೀವಂತವಾಗಿರಿಸುವ ಆ ಕಥನಗೀತೆಗೆ ಯಾವ ಪ್ರಶಸ್ತಿ ಕೊಡ್ತೀರಿ.

ಆಹಾ ನೋಡದೊ ಹೊನ್ನಿನ ಜಿಂಕೆ
ಹಾಳಾಗುವುದಯ್ಯೊಲಂಕೇ
ಮಣ್ಣಾಗುವೆ ನೀನಿಶ್ಶಂಕೇ

ಅಂದರೆ ಅಷ್ಟು ದೊಡ್ಡ ರಾಮಾಯಣದ ಕತೆಯನ್ನು 'ಭೂಕೈಲಾಸ' ಚಿತ್ರದಲ್ಲಿ ಸಿ.ಎಸ್.ಜಯರಾಮನ್ ತನ್ನ ಕಂಚಿನ ಕಂಠದಲ್ಲಿ ಹಾಡುತ್ತಿದ್ದರೆ ಆ ಕಾಲದ ಜನಕ್ಕೆ ಮೈನವಿರೇಳುತ್ತಿತ್ತು.

ಗಂಗೆ ಬಾರೆ ಗೌರಿ ಬಾರೆ
ತುಂಗಭದ್ರೆ ತಾಯಿಬಾರೆ
ಪುಣ್ಯಕೋಟಿ ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು

'ಧರಣಿ ಮಂಡಲ ಮಧ್ಯದೊಳಗೆ' ಹಾಡಿನ ಪುಣ್ಯಕೋಟಿಯ ಕತೆ ಸತ್ಯಕೆ ನ್ಯಾಯಕೆ ಕೊಟ್ಟ ಮಾತಿಗೆ ಬಾಳುವ ಬದುಕುವ ಹಸುವೊಂದರ ಕತೆ. ಸತ್ಯಕ್ಕಾಗಿ ಪ್ರಾಣ ತ್ಯಾಗಕ್ಕಾಗಿ ಸಿದ್ಧವಾಗುವ ಪುಣ್ಯಕೋಟಿ 'ಕೊಟ್ಟ ಮಾತಿಗೆ ತಪ್ಪಲಾರೆನು, ಕೆಟ್ಟ ಯೋಚನೆ ಮಾಡಲಾರೆನು' ಎಂಬ ವಚನಕ್ಕೆ ಸಾಕ್ಷಿಯಾಗಿ ನಿಂತ ಕಥನಗೀತೆಯಿದು. ಹುಲಿಗೆ ಮಾತು ಕೊಟ್ಟ ಕಾರಣಕ್ಕೆ ತಪ್ಪಿಸಿಕೊಂಡು ಜೀವ ಉಳಿಸಿಕೊಳ್ಳುವ ಕೆಟ್ಟ ಯೋಚನೆ ಮಾಡದೆ ತನ್ನ ಸತ್ಯನಿಷ್ಠೆಯಿಂದಲೇ ಹುಲಿಯ ಮನಃಪರಿವರ್ತಿಸಿದ ಈ ಕಥನಗೀತೆಯನ್ನು ಕೇಳದವರಾರು.

ಅಮ್ಮಗಳಿರ ಅಕ್ಕಗಳಿರ
ಎನ್ನ ತಾಯೊಡ ಹುಟ್ಟುಗಳಿರ
ನಿಮ್ಮ ಕಂದ ಎಂದು ಕಾಣಿರಿ
ತಬ್ಬಲಿಯ ನೀ ಕರುವನು
ಸತ್ಯವೇ ಭಗವಂತನೆಂಬ
ಪುಣ್ಯಕೋಟಿಯ ಕತೆಯಿದು.

ಕರ್ನಾಟಕದ ರಿಯಾಲಿಟಿ ಶೋಗಳಲ್ಲಿ ಇವತ್ತಿಗೂ ಈ ಹಾಡು ಪುಟ್ಟ ಮಕ್ಕಳ ಬಾಯಲ್ಲಿ ಉಲಿಯುತ್ತಿದೆ. ಮನರಂಜನೆ ಜೊತೆಗೆ ನೈತಿಕತೆಯ ಸಾರ ಸರ್ವಸ್ವವನ್ನೂ ಕೇಳಿಸಿಕೊಂಡು ಕೆಲವರಾದರೂ ಕನಲುತ್ತಾರೆ. ಹಾಡಿಗೆ ಸೋಲುತ್ತಾರೆ. ಕನ್ನಡದ ಜನಪದಗೀತೆಯನ್ನು ಚಿತ್ರಕ್ಕೆ ಅಳವಡಿಸಿ ತೋರಿಸಿದ ಕಥನಗೀತೆಯಿದು.

ಮಲೆನಾಡಿನ ಮೂಲೆನಾಗೆ
ಇತ್ತೊಂದು ಸೊಮ್ನಹಳ್ಳಿ,
ಆ ಹಳ್ಳೀಲ್ ಮುದುಕಿ ಒಬ್ಳು
ದೌಲಿಂದ್ಲೇ ಮೆರೀತಿದ್ಲು
ಅವಳಂತೂ ಭೋ ಘಾತಿ
ಜಂಬಗಾತಿ ....

'ಸುವರ್ಣ ಸೇತುವೆ' ಚಿತ್ರದಲ್ಲಿ ಬೇಬಿರೇಖಾ ಕೈಯ್ಯಲ್ಲಿ ಹುಂಜ ಹಿಡಿದುಕೊಂಡು ಆ ಜಂಬಗಾತಿ ಪಾರ್ಟ್ ಮಾಡುತ್ತಿದ್ದರೆ ಇವತ್ತಿನ ಪುಟ್ಟಂಜ ಚಿತ್ರದ ಉಮಾಶ್ರೀ ಸಮಕ್ಕೆ ಆ ಪುಟ್ಟ ಹುಡುಗಿ ತೂಗಿ ಬಿಡುತ್ತಾಳೆ. ಮುದುಕಿ ತನ್ನ ಕೋಳಿ ಕೂಗಿದರೇನೇ ಬೆಳಗಾಗೋದು ಎಂಬ ಜಂಭ ತೋರಿಸುವ ಕತೆಯಿರುವ ಆ ಕಥನಗೀತೆ ಕೊನೆಗೆ ಅವಳ ಜಂಭ ಮುರಿಯುವಂತೆ ಸೂರ್ಯ ಬೆಳಗುತ್ತಾನೆ ಎನ್ನುವ ಸಾರ್ವಕಾಲಿಕ ಸತ್ಯ ಹೇಳಿ ಹೋಗುತ್ತದೆ.



ಪುಟ್ಟ ಮಕ್ಕಳಲ್ಲಿ ಎಷ್ಟೋ ಮಕ್ಕಳು ಆ ರೀತಿಯ ಸ್ವಭಾವದವರಿದ್ದರೆ, ಆ ಮಕ್ಕಳಿಗೆ ಅದು ಅರಿವಾಗಿ ಆ ಮಕ್ಕಳು ಬದಲಾಗುತ್ತಿದ್ದರು. ಸುವರ್ಣ ಸೇತುವೆಯ ಆ ಕಥನಗೀತೆ ನಿಮಗೆ ನೆನಪಿದೆಯಲ್ಲವೇ?

ಹದಿನಾಲ್ಕು ವರ್ಷ ವನವಾಸದಿಂದ
ಮರಳಿ ಬಂದಳು ಸೀತೆ ....
ಮರಳಿ ಬಂದಳು ಸೀತೆ .....

'ಶರಪಂಜರ'ದಲ್ಲಿ ಕಲ್ಪನ ಈ ಹಾಡು ಹಾಡುತ್ತಿದ್ದರೆ ಹೆಣ್ಣೊಬ್ಬಳ ಕಷ್ಟ ಪರಂಪರೆ, ಸ್ತ್ರೀ ಸಂಕುಲದ ಕಣ್ಣಲ್ಲಿ ಭಾವರಸಧಾರೆಯಾಗಿ ಹರಿಯುತ್ತಿತ್ತು. ಸ್ತ್ರೀ ಸಂಕುಲದ ಕಣ್ಣಲ್ಲಿ ಭಾವರಸಧಾರೆಯಾಗಿ ಹರಿಯುತ್ತಿತ್ತು. ಕಲಾ ಮಾಧ್ಯಮ ಸೃಷ್ಟಿಸಬೇಕಾದ ಭಾವತೀವ್ರತೆ ಅದು. ಹೀಗೆ ಶುರುವಾದ ಹಾಡು ಲವಕುಶ ಜನನದವರೆಗೂ ಓಡಿಬಿಡುತ್ತದೆ. ಹೀಗೆ ಕಥನಗೀತೆಗಳು ಕನ್ನಡ ಸಿನಿಮಾ ಲೋಕವನ್ನು ಆಳಲಿಲ್ಲ. ಬದಲಿಗೆ ತಮ್ಮ ಕಥನ ಗುಣದಿಂದ ಬೆಳ್ಳಿತೆರೆಯನ್ನು ಬೆಳಗಿಸಿವೆ. ಸುವರ್ಣ ಚೌಕಟ್ಟಿನಂತೆ ಕರುನಾಡಿಗೆ ತೋರಿಸಿವೆ.

ಪುಟಾಣಿ ಏಜೆಂಟ್ 1, 2, 3 ಚಿತ್ರದಲ್ಲಿ

ಕೀ... ಕೀ... ಕೀ... ಕೀ...
ಎನ್ನುತ ಹಾಡೋಣ
ತೂಗಿ... ಬಾಗಿ...
ಎಲ್ಲರೂ ಕುಣಿಯೋಣ
ಎನ್ನುವ ಪಕ್ಷಿಗೀತೆ ಕೇಳಿರಬೇಕು.
ಕಂದ ನೀ ಬಲಿಯಾದೆಯಾ
ತಂದೆ ತಾಯಿಯ ತೊರೆದೆಯ
ಅಗಲಿ ಇರಲಾರೆನು
ನಾ ಆಗಲಿ ಇರಲಾರೆನು
ಕಾಳ ಸರ್ಪದ ಕಾಟವು,
ತಾಳಲಾರದ ನೋವು
ಇದಕೆ ಕೊನೆಯಿಲ್ಲವೇ...
ಯಾರು ಗತಿಯಿಲ್ಲವೇ ಇಲ್ಲವೇ....

ಹೀಗೆ ಶುರುವಾಗುವ ಈ ಕಥನಗೀತೆ ಪಕ್ಷಿ ಸಂಕುಲದ ಕತೆ ಹೇಳುತ್ತದೆ. ಹಕ್ಕಿ ಪಕ್ಷಿಗಳ ಮೇಲೆ ಸರ್ಪ ಮಾಡುವ ದಾಳಿ, ಪಕ್ಷಿರಾಜ ಬಂದು ಅವುಗಳನ್ನು ಕಾಪಾಡುವ ಪರಿ, ಅಪಾಯ ಬಂದಾಗ ಕಾಪಾಡುವ ಪರಿ, ಅಪಾಯ ಬಂದಾಗ ಉಪಾಯದಿಂದ ಕಾರ್ಯ ಸಾಧಿಸಬೇಕು ಎನ್ನುವ ಬುದ್ಧಿವಂತ ನರಿ ಆ ಮೂಲಕ ಮಕ್ಕಳ ತಲೆಗೆ ಜಾಣತನ ತುಂಬುವ ಈ ಕಥನಗೀತೆ ಕೇಳಿ ಬೆಳೆದವರಲ್ಲವೇ ನಾವೆಲ್ಲ.

ಕೇಳದೆ ನಿಮಗೀಗ ದೂರದಲ್ಲಿ ಯಾರೋ
ಹಾಡು ಹೇಳಿದಂತೆ ಒಂದು,
ಹೆಣ್ಣಿನಾ ನೊಂದ ವಿರಹಗೀತೆ
ಮಲ್ಲಿಗೆ ಒಂದೂರು, ಸಂಪಿಗೆ ಒಂದೂರು....

'ಗೀತಾ' ಚಿತ್ರದಲ್ಲಿ ಕರಾಟೆ ಕಿಂಗ್ ಶಂಕರ್‌ನಾಗ್ ಹೀಗೆ ಪ್ರೇಮಿಗಳಿಬ್ಬರ ಕತೆಯನ್ನು ಕಥನಗೀತೆಯಲ್ಲಿ ಹೇಳಿದ ಹಾಡು ಇವತ್ತಿಗೂ 'ಎವರ್‌ಗ್ರೀನ್ ಹಿಟ್' ಆಗಿಯೇ ಉಳಿದಿದೆ.

ಕೇಳು ಮಗುವೆ ಕತೆಯ
ಆಸೆ ತಂದ ವ್ಯಥೆಯಾ
ಜಗದ ತಾಯಿ ಜಾನಕಿಯ
ಶೋಕದ ವಿಷಯಾ ...
ಕೇಳು ಮಗುವೆ ಕತೆಯ....

'ಮಾಂಗಲ್ಯ ಭಾಗ್ಯ' ಚಿತ್ರದ ಈ ಕಥನಗೀತೆ ಜಾನಕಿಯ ಕಥೆ ಹೇಳುತ್ತದೆ. ಹೀಗೆ ರಾಮಾಯಣದ ಬೇರೆ ಬೇರೆ ರೂಪಕಗಳಲ್ಲಿ ಸಾಕಷ್ಟು ಕಥನಗೀತೆಗಳು ಕನ್ನಡದ ಚಿತ್ರ ಸಾಹಿತ್ಯದಲ್ಲಿ ಹುಟ್ಟಿವೆ.

ಸಾಮಾಜಿಕ ಜೀವನದಲ್ಲಿ ಇಬ್ಬರು ಹೆಂಡಿರ ಕತೆ ಎರಡೆರಡು ಮದುವೆಯಾದವರ ಜಿಜ್ಞಾಸೆ, ದುಃಖ ದುಮ್ಮಾನಗಳು, ಪ್ರೀತಿಯನ್ನು ಹಂಚಿಕೊಳ್ಳುವ ಹೋರಾಟಗಳು ಕೂಡ ನಮ್ಮ ಕನ್ನಡ ಸಿನಿಮಾಗಳಲ್ಲಿ ಕಥನಗೀತೆಗಳಾಗಿ ಮೂಡಿಬಂದಿವೆ.

ನವರಾತ್ರಿ ಸಂಜೆಯಲಿ,
ನಾ ನುಡಿವ ಮಾತಿನಲಿ
ಪ್ರಶ್ನೆಯೊಂದು ಅಡಗಿಹುದು ಕೇಳಮ್ಮ
ನೀಲಮೇಘಶ್ಯಾಮ
ನಿತ್ಯಾನಂದಧಾಮ
ರುಕ್ಮಿಣಿಗಾಗೀ
ಈ ರುಕ್ಮಿಣಿಗಾಗಿ....

ಹೀಗೆ ಎರಡು ರೇಖೆಗಳು ಚಿತ್ರದಲ್ಲಿ ಗೀತಾ, ಸರಿತ ಕೃಷ್ಣನನ್ನು ಕೇಂದ್ರೀಕರಿಸಿಕೊಂಡು ಬೆಳ್ಳಿತೆರೆಯ ಮೇಲೆ ಹಾಡುತ್ತಿದ್ದರೆ ಅದೆಷ್ಟು ಜನ ಖುಷಿ ಪಟ್ಟಿಲ್ಲ! ಆನಂದಿಸಿಲ್ಲ! ಎಲ್ಲಿ ಹೋದವು ಆ ಕಥನಗೀತೆಗಳು ಎಲ್ಲಿ ಹೋದವು. ಆ ಕಥಾನಕಗಳು? ನಮ್ಮ ಕಾಲದ ಮಕ್ಕಳಿಗೆ, ಯುವಕರಿಗೆ, ವಯಸ್ಕರಿಗೆ ಈ ರೀತಿಯ ನೈತಿಕ ಕತೆಗಳಿರುವ ಕಥನ ಕವಿತೆಗಳು ಬೇಡವೇ?

ಹಾಗೊಂದು ವೇಳೆ ಅಂಥ ಸದಭಿರುಚಿಯ ಕಥನಗೀತೆಗಳು ಬಂದರೆ ಸ್ವೀಕರಿಸುವ ಸ್ಥಿತಿಯಲ್ಲಿ ನಮ್ಮ ಪ್ರೇಕ್ಷಕ ವರ್ಗ ಇಲ್ಲವೇ? ಎಲ್ಲಿ ಹೋದವು ಆ ದಿನಗಳು... ನಮ್ಮ ಕಾಲದ ಹುಡುಗರ ಕಿವಿಗಳಲ್ಲಿ ಈಗ ಬರೀ ಅಲ್ಲಾಡ್ಸು ಅಲ್ಲಾಡ್ಸು.... ಎಂಬ ಟಾನಿಕ್ ಹಾಡುಗಳೇ ರಿಂಗಣ ಸುವರ್ಣ ಸೇತುವೆಯ ಆ ಕಥನಗೀತೆ ನಿಮಗೆ ನೆನಪಿದೆಯಲ್ಲವೇ?

ಕತೆ ಹೇಳುವೇ ನನ್ನ ಕತೆ ಹೇಳುವೇ
ಬಾಳಿನಾ ಪುಟಗಳಲಿ ಕಣ್ಣೀರ ಹನಿಗಳಲಿ
ಬರೆದಿರುವ ಹೆಣ್ಣಿನಾ ಕತೆ ಹೇಳುವೆ

'ನಾಗರಹಾವು' ಚಿತ್ರದಲ್ಲಿ ಗಂಡನ ಶೋಷಣೆಗೆ ಒಳಗಾಗುವ ಹೆಣ್ಣೊಬ್ಬಳ ಸಾಮಾಜಿಕ ಕತೆಯಿರುವ ಕಥನಗೀತೆಯಿದು. ಪುಟ್ಟಣ್ಣ ಕಣಗಾಲ್ ಅದ್ಯಾವ ಘಳಿಗೆಯಲ್ಲಿ ಈ ಹಾಡನ್ನು ಚಿತ್ರಿಸಿದರೋ ಗೊತ್ತಿಲ್ಲ! ಆ ಹಾಡಿನ ಆಡಿಯೋ ಅಥವಾ ವೀಡಿಯೋ ಪ್ರಸಾರವಾಗುತ್ತಿದ್ದರೆ ನಿಜಕ್ಕೂ ಅಂಥ ದುರಂತಗಳಿಗೆ ಗುರಿಯಾದ ಅದೆಷ್ಟೋ ಹೆಣ್ಣು ಮಕ್ಕಳು ತಮ್ಮದೇ ಕಥೆಯೆಂಬಂತೆ ಅಂತರಂಗದಲ್ಲೇ ಅತ್ತಿದ್ದರೆ ಮನರಂಜನೆ ಮತ್ತು ನೈತಿಕತೆ ಅಲ್ಲಾಡುತ್ತಲೇ ಇರುತ್ತದೆ. ಎಲ್ಲಿವರೆಗೆ ಅಲ್ಲಾಡಿಸೋದು ಅಲ್ಲವೇ. ಏನಂತೀರಿ?

73ನೇ ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ



ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ಕಲೆಮನೆ ಸಭಾಂಗಣದಲ್ಲಿ 73ನೇ ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ನಡೆಯಿತು.

ಮೈಸೂರು: ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಲೆಮನೆ ಸಭಾಂಗಣದಲ್ಲಿ 73ನೇ ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಕಿಶೋರ್ ಕದಂ, ಎಕ್ಸ್ ನಾಯಕ್, ಇಂಡಿಯನ್ ಆರ್ಮಿ ಆಗಮಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮೈಸೂರಿನ ವಿಸ್ಮಯ ಸ್ಕೂಲ್ ಆಫ್ ಲರ್ನಿಂಗ್ ಇದರ ಸ್ಥಾಪಕರು ಹಾಗೂ ನಿರ್ದೇಶಕರು ಆದ ವಿದುಷಿ ಶ್ರೀಮತಿ ಸ್ಮೃತಿ ರಮೇಶ್ ಕೌಶಿಕ್ ಮತ್ತು ಇವರ ಶಿಷ್ಯ ವೃಂದ, ಬೆಂಗಳೂರಿನ ದೈವಕಲಾ ಗೃಹಂ ಆರ್ಟ್ ಹೌಸ್ ಇದರ ನಿರ್ದೇಶಕರು ಮತ್ತು ಸ್ಥಾಪಕರು ಆದ ವಿದ್ವಾನ್ ಅಲೆಕ್ಸ್ ರಾಫಲ್ ಮತ್ತು ಅವರ ಶಿಷ್ಯರ ವೃಂದ, ಬೆಂಗಳೂರಿನ ವೈಷ್ಣವಿ ನಾಟ್ಯಶಾಲಾ, ಸ್ಥಾಪಕರು, ನಿರ್ದೇಶಕರಾದ ವಿದ್ವಾನ್ ಮಿಥುನ್ ಶ್ಯಾಮ್ ಇವರ ಹಿರಿಯ ವಿದ್ಯಾರ್ಥಿಗಳಾದ ಕುಮಾರಿ ಸಾಕ್ಷಿ ಅಶೋಕ್ ಮತ್ತು ವೃಂದದವರಿಂದ ಭರತ ನಾಟ್ಯ ನೃತ್ಯ ಕಾರ್ಯಕ್ರಮಗಳು ಪ್ರದರ್ಶನಗೊಂಡಿತು.

ವಿವಿಧ ಸಾಧಕರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ



ವಿವಿಧ ಕ್ಷೇತ್ರದ ಸಾಧಕರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು: ಕಸ್ತೂರಿ ಸಿರಿಗನ್ನಡ ವೇದಿಕೆ ಹಾಗೂ ಕೀರ್ತಿ ಯುವತಿ ಮಹಿಳಾ ಮಂಡಳಿ ವತಿಯಿಂದ ಹೆಬ್ಬಾಳದಲ್ಲಿರುವ ಕನ್ನಿಕಾ ಕಾವೇರಿ ಎಜುಕೇಶನ್ ಸೊಸೈಟಿ ಅವರಣದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಹಾಗೂ ಪ್ರಬಂಧ ಸ್ಪರ್ಧೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಡಾ.ಪ್ರಭಾಕರ್ (ಕ್ರೀಡೆ), ಯು.ಆರ್.ಶೆಟ್ಟಿ (ಸಮಾಜ ಸೇವೆ) ರತ್ನ ಚಂದ್ರಶೇಖರ್ (ಸಾಹಿತ್ಯ), ಬಿಎಸ್ ವಸಂತ (ಶೂಶ್ರೂಷಕಿ), ಸುಧೀರ್‌ಕುಮಾರ್ (ಶಿಕ್ಷಣ), ಶಿವರಾಜು (ಕಟ್ಟಡ ಕಾರ್ಮಿಕ) ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕನ್ನಿಕಾ ಕಾವೇರಿ ಸ್ಕೂಲ್ ಸಂಸ್ಥಾಪಕಿ ಎಂ.ಸಿ.ಚೋಂದಮ್ಮ ಪೂಣಚ್ಚ, ಕೀರ್ತಿ ಯುವತಿ ಮಹಿಳಾ ಮಂಡಳಿ ಅಧ್ಯಕ್ಷೆ ಹಾಗೂ ಕಸ್ತೂರಿ ಸಿರಿಗನ್ನಡ ವೇದಿಕೆ ಜಿಲ್ಲಾಧ್ಯಕ್ಷೆ ಮಂಜುಳಾ ರಮೇಶ್, ಕಸ್ತೂರಿ ಸಿರಿಗನ್ನಡ ವೇದಿಕೆ ರಾಜ್ಯಾಧ್ಯಕ್ಷರಾದ ಪ್ರೊಫೆಸರ್ ಮಹದೇವ, ನಿವೃತ್ತ ತಹಸೀಲ್ದಾರ್ ಕೆ.ಬಿ.ಪಾವಣ್ಣ, ನಿವೃತ್ತ ಬ್ಯಾಂಕ್ ಅಧಿಕಾರಿ ರಘುಪತಿ ಇನ್ನಿತರರು ಹಾಜರಿದ್ದರು.

ರಾಜ್ಯದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ ಇಂದು

ಮೈಸೂರು,ಜೂ.29– ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ ಮತ್ತು ಅನ್ನಭಾಗ್ಯ ಯೋಜನೆಗಳಿಗೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳೊಂದಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಹಾಗೂ ಚಾಮರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರ ಉಪಸ್ಥಿತಿಯಲ್ಲಿ ಜನರ ಕುಂದುಕೊರತೆ ಸಮಾಲೋಚನಾ ಸಭೆಯನ್ನು ಜೂನ್ 30ರಂದು ಮಧ್ಯಾಹ್ನ 12 ಗಂಟೆಗೆ ಮೈಸೂರು ಮಹಾನಗರಪಾಲಿಕೆಯ ವಲಯ ಕಚೇರಿ–4ರ ವಾರ್ಡ್ ನಂ.18ರ 1ನೇ ಮುಖ್ಯ ರಸ್ತೆಯ ಅಂಗನವಾಡಿ ಕೇಂದ್ರದಲ್ಲಿ ಏರ್ಪಡಿಸಲಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರು, ಮೈಸೂರು ಪಾಲಿಕೆ ಮಾಜಿ ಉಪಮೇಯರ್ ಪುಷ್ಪವಲ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪ್ರಸಾದ' ಲೇಖನ ಸ್ಪರ್ಧೆ

ಮೈಸೂರು, ಜೂ. 29– ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಪ್ರಯುಕ್ತ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಹಾಗೂ ಮಡಿಕೇರಿ ಜಿಲ್ಲೆಗಳ ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ 'ಭಾರತೀಯ ಸಂಸ್ಕೃತಿ ಮತ್ತು ಜಾಗತೀಕರಣ' ಕುರಿತು 'ಪ್ರಸಾದ' ಲೇಖನ ಸ್ಪರ್ಧೆ ಏರ್ಪಡಿಸಲಾಗಿದೆ.

ವಿದ್ಯಾರ್ಥಿಗಳು 6ರಿಂದ 8 ಪುಟಗಳ ಸ್ವರಚಿತ ಲೇಖನವನ್ನು ಕಳುಹಿಸಬಹುದು. ಇದರೊಂದಿಗೆ ತಮ್ಮ ಫೋಟೋ ಸಮೇತ ತಮ್ಮ ಹೆಸರನ್ನು ಕಾಲೇಜಿನ ಮುಖ್ಯಸ್ಥರಿಂದ ದೃಢೀಕರಿಸಿದ ಪ್ರತಿ ಲಗತ್ತಿಸಬೇಕು. ಪ್ರತಿ ಕಾಲೇಜಿನಿಂದ ಗರಿಷ್ಠ ಮೂರು ಲೇಖನಗಳನ್ನು ಕಳುಹಿಸಲು ಅವಕಾಶವಿದೆ. ಆಸಕ್ತರು ಜು.25ರೊಳಗೆ ನಿರ್ದೇಶಕರು, ಪ್ರಕಟಣಾ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570004, ಈ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 0821–2548211/45/46 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜು.4ರಿಂದ 10ನೇ ಆವೃತ್ತಿಯ ಮೈಸೂರು ಸಾಹಿತ್ಯೋತ್ಸವ

Mysuru Literature Festival 2026



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ 10ನೇ ಆವೃತ್ತಿಯ ಮೈಸೂರು ಸಾಹಿತ್ಯೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಈ ವೇಳೆ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭ ಸಂಜಯ್ ಅರಸ್, ಟ್ರಸ್ಟ್‌ನ ಕಿಟ್ಟಿ ಮಂದಣ್ಣ, ತಂಗಂ ಪಣಕಲ್, ಸ್ಯಾಮ್ ಚೆರಿಯನ್, ರಿಯಾನ್ ಇರಾನಿ ಉಪಸ್ಥಿತರಿದ್ದಾರೆ.


ಅಮಿಶ್ ತ್ರಿಪಾಠಿ


ಅರೂಣ್ ರಾಮನ್


ಟಿ.ಎಂ.ಕೃಷ್ಣ


ಶತಾವಧಾನಿ ಗಣೇಶ್


ವಿವೇಕ್ ಶಾನಭಾಗ್


ಕ್ಯಾ.ಗೋಪಿನಾಥ್

ಮೈಸೂರು,ಜೂ.29(ಜಿಎ)–ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ 10ನೇ ಆವೃತ್ತಿಯ 'ಮೈಸೂರು ಸಾಹಿತ್ಯೋತ್ಸವ'ವು ಜು.4 ಮತ್ತು 5ರಂದು ಮೈಸೂರಿನ ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ ನಡೆಯಲಿದೆ.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭ ಸಂಜಯ್ ಅರಸ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, 2 ದಿನಗಳ ಮೈಸೂರು ಸಾಹಿತ್ಯೋತ್ಸವದಲ್ಲಿ ಸಾಹಿತ್ಯ, ಇತಿಹಾಸ, ಪತ್ರಿಕೋದ್ಯಮ, ವಿಜ್ಞಾನ, ಉದ್ಯಮ, ರಾಜತಾಂತ್ರಿಕತೆ, ಸಿನಿಮಾ, ಸಂಗೀತ ಹಾಗೂ ಕಲೆ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿ ವಿಚಾರ ವಿನಿಮಯ ನಡೆಸಲಿದ್ದಾರೆ ಎಂದರು.

ಜು.4ರಂದು ಬೆಳಗ್ಗೆ 10 ಗಂಟೆಗೆ ಸಾಹಿತ್ಯ ಉತ್ಸವವನ್ನು ರಾಜವಂಶಸ್ಥೆ ಡಾ.ಪ್ರಮೋದಾದೇವಿ ಒಡೆಯರ್ ಉದ್ಘಾಟಿಸದ್ದಾರೆ. ಖ್ಯಾತ ಲೇಖಕ ಅಮೀಶ್ ತ್ರಿಪಾಠಿ ಹಾಗೂ ಲೇಖಕ–ಉದ್ಯಮಿ ಆರೂನ್ ರಾಮನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಪದ್ಮಶ್ರೀ ಪುರಸ್ಕೃತ ಪಾಂಡವಪುರದ ಪುಸ್ತಕ ಮನೆಯ ಅಂಕೇಗೌಡ ಅವರನ್ನು ಸನ್ಮಾನಿಸಲಾಗುವುದು. ಉತ್ಸವದಲ್ಲಿ 8 ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಅವರು ಕಾರ್ಯಕ್ರಮದ ವಿವರ ನೀಡಿದರು.

ಉತ್ಸವದಲ್ಲಿ ಕನ್ನಡ, ಇಂಗ್ಲಿಷ್ ಹಾಗೂ ಈ ಬಾರಿ ಒಂದು ಹಿಂದಿ ಭಾಷೆಯ ಸಂವಾದ ಆಯೋಜಿಸಿದ್ದು, ಪುರಾಣ, ಭಾರತೀಯ ನಾಗರಿಕತೆ, ಇತಿಹಾಸ, ಕನ್ನಡ ಹಾಗೂ ಭಾರತೀಯ ಭಾಷೆಗಳ ಸಾಹಿತ್ಯ, ಕಾವ್ಯ, ಅನುವಾದ, ವಿಜ್ಞಾನ, ಕೃತಕ ಬುದ್ಧಿಮತ್ತೆ, ಪ್ರಜಾಪ್ರಭುತ್ವ, ಸಮಾಜ, ಪರಿಸರ, ಸಿನಿಮಾ, ಸಂಗೀತ, ರಂಗಭೂಮಿ ಸೇರಿದಂತೆ ಹಲವು ವಿಷಯಗಳ ಕುರಿತು ವಿಶೇಷ ಸಂವಾದಗಳು ನಡೆಯಲಿದೆ. ಖ್ಯಾತ ಲೇಖಕರಾದ ಅಮೀಶ್ ತ್ರಿಪಾಠಿ, ಜೊನಾಥನ್ ಗಿಲ್ ಹ್ಯಾರಿಸ್, ಹರೀಶ್‌ಭಟ್, ಭಾಸ್ಕರ್‌ಭಟ್, ಕ್ಯಾಪ್ಟನ್ ಜಿ.ಆರ್.ಗೋಪಿನಾಥ್, ಟಿ.ಎಂ.ಕೃಷ್ಣ, ಡಾ.ಸಂಜಯ್ ಗುಬ್ಬಿ ಸೇರಿದಂತೆ ಹಲವು ಗಣ್ಯರು ವಿವಿಧ ಅಧಿವೇಶನಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಉತ್ಸವದಲ್ಲಿ 'ರಿವರ್ ಆಫ್ ಲೈಫ್' ಸಾಕ್ಷ್ಯಚಿತ್ರ ಪ್ರದರ್ಶನ, ಲೇಖಕರೊಂದಿಗೆ ಸಂವಾದ, ಪುಸ್ತಕ ಬಿಡುಗಡೆ, ಪುಸ್ತಕ ಮಾರಾಟವಿರಲಿದೆ ಎಂದರು.

ಜು.4ರಂದು ಇಂಗ್ಲಿಷ್ ವೇದಿಕೆಯಲ್ಲಿ: ಉದ್ಘಾಟನಾ ಕಾರ್ಯಕ್ರಮದ ನಂತರ ಬೆಳಗ್ಗೆ 10.45ರಿಂದ 11.45: 'ಅಭಿಜಾತ ಸಾಹಿತ್ಯದ ಅವಶ್ಯಕತೆ' ಕರಿತು ಖ್ಯಾತ ಲೇಖಕರಾದ ಶತಾವಧಾನಿ ಗಣೇಶ್ ಮಾತನಾಡಲಿದ್ದಾರೆ. 11.45ರಿಂದ 12.30ರವರೆಗೆ 'ಭಾರತೀಯ ಜವಳಿ ಪರಂಪರೆಯ ಶಾಶ್ವತತೆ' ಕುರಿತು ಮಯಾಂಕ್ ಮನ್‌ಸಿಂಗ್ ಕೌಲ್ ತಿಳಿಸಿಕೊಡಲಿದ್ದಾರೆ. 12.30ರಿಂದ 1.15ರವರೆಗೆ 'ಟಾಟಾ ಸಮೂಹದಿಂದ ನಾಯಕತ್ವದ ಪಾಠಗಳು' ಕುರಿತು ಭಾಸ್ಕರ್ ಭಟ್ ಮತ್ತು ಹರೀಶ್ ಭಟ್ ಮಾತನಾಡಲಿದ್ದಾರೆ. 1.15ರಿಂದ 2.00ರವರೆಗೆ 'ಬದಲಾಗುತ್ತಿರುವ ಭಾರತದ ಸಮಗ್ರ ಚಿತ್ರಣ' ಈ ವಿಷಯ ಕುರಿತು ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಅವರೊಂದಿಗೆ ಶಂಕರ್ ಬೇಲೂರು ಸಂವಾದ ನಡೆಸಿಕೊಡಲಿದ್ದಾರೆ ಎಂದರು.


ಪ್ರಮೋದಾದೇವಿ ಒಡೆಯರ್

ನಂತರ ಮಧ್ಯಾಹ್ನ 2.00ರಿಂದ 2.45ರವರೆಗೆ 'ಕರ್ನಾಟಕ ಮತ್ತು ರಾಜಸ್ಥಾನದ ಸಾಹಿತ್ಯದ ವಿಭಿನ್ನ ಓದು' ಕುರಿತು ತಬೀನಾ ಅಂಜುಮ್, ಶ್ರೀಕರ್ ರಾಘವನ್, ಅಖಿಲ್ ಚೌಧರಿ, ದೀಪ್ ಮುಖರ್ಜಿ ಅವರೊಂದಿಗೆ ಪ್ರೀತಿ ನಾಗರಾಜ್ ಸಂವಾದ ನಡೆಸಲಿದ್ದಾರೆ. ನಂತರ 2.45ರಿಂದ 3.30ರವರೆಗೆ ಆರ್.ಕೆ.ನಾರಾಯಣ್ ಕುರಿತ ಪುಸ್ತಕ ಲೋಕಾರ್ಪಣೆಯಾಗಲಿದೆ ಈ ವೇಳೆ ಸೀತಾ ಭಾಸ್ಕರ್, ಜಯಶ್ರೀ ಜಗನ್ನಾಥ ಉಪಸ್ಥಿತರಿರಲಿದ್ದಾರೆ. 3.30ರಿಂದ 4.15ರವರೆಗೆ 'ಪ್ರಾಚೀನ ಭಾಷೆಗಳು ಮತ್ತು ಕಲೆಗಳ ವೈಭವ' ಕುರಿತ ಸಂವಾದದಲ್ಲಿ ಮನೀಷಾ ಚೌಧರಿ, ಕೆ.ಎಸ್.ಜಯಲಕ್ಷ್ಮಿ, ಅನಿತಾ ರಾಜರಾಜನ್, ಬಿಸ್ವಜಿತ್ ಬಾಲಸುಬ್ರಮಣಿಯನ್ ಪಾಲ್ಗೊಳ್ಳಲಿದ್ದಾರೆ. 4.15ರಿಂದ 4.45ರವರೆಗೆ 'ಮೈಸೂರಿನ ಅಭಿವೃದ್ಧಿ ಪಯಣ' ಕುರಿತು ಚಂದನ್ ಗೌಡ, ಅಂಶುಲಾ ಪ್ರಕಾಶ್ ಸಂವಾದ ನಡೆಸಲಿದ್ದಾರೆ.

4.45ರಿಂದ 5.00ರವರೆಗೆ ಹಿಂದಿ ಭಾಷೆಯಲ್ಲಿ 'ಕವಿತೆಯ ಅರ್ಥ ಮತ್ತು ಜೀವನ' ಕುರಿತು ದ್ವಾರಿಕಾ ಉನಿಯಾಲ್, ಪೂರ್ಣಿಮಾ ಎ.ಪಿ. ಮಾತನಾಡಲಿದ್ದಾರೆ. ಸಂಜೆ 5ರಿಂದ 5.45ರವರೆಗೆ 'ಹೈಫನ್ ಸಾಹಿತ್ಯಗಳ ಸೇತುವೆ' ವಿವೇಕ್ ಶಾನಭಾಗ್, ಜೊನಾಥನ್ ಗಿಲ್ ಹ್ಯಾರಿಸ್ ಸಂವಾದ ನಡೆಸಲಿದ್ದಾರೆ. 5.45ರಿಂದ 6.30ರವರೆಗೆ 'ಪಲ್ಸ್ ಬೀಟ್ ಆಫ್, ವೀ ದಿ ಪೀಪಲ್' ಕುರಿತು ಟಿ.ಎಂ.ಕೃಷ್ಣ, ಶ್ರೀಕರ್ ರಾಘವನ್ ಚರ್ಚಿಸಲಿದ್ದಾರೆ. ಅಂದಿನ ವಿಶೇಷವಾಗಿ 6.45ರಿಂದ 7.45ರವರೆಗೆ 'ರಿವರ್ ಆಫ್ ಲೈಫ್' ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ಡಾ.ಸಂಜಯ್ ಗುಬ್ಬಿ ಅವರೊಂದಿಗೆ ಸಂವಾದ ಏರ್ಪಡಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಜು.4 ಕನ್ನಡ ವೇದಿಕೆಯಲ್ಲಿ: 12.30ರಿಂದ 1ಗಂಟೆವರೆಗೂ ಸೌಮ್ಯ ವರ್ಮ ನಿರ್ದೇಶನದ 'ಹೆಣ್ಣಲ್ಲವೇ' ಏಕ ವ್ಯಕ್ತಿ ಪ್ರದರ್ಶನ ನಡೆಸಲಿದೆ. 1 ಗಂಟೆಯಿಂದ 1.15ರವರೆಗೆ 'ಸ್ತ್ರೀ ನೋಟದಿಂದ ಸಾಹಿತ್ಯ, ಸಂಸ್ಕೃತಿ, ಸಮಾಜ' ಕುರಿತು ಪ್ರೊ. ಆರ್.ಸುನಂದಮ್ಮ, ಪ್ರೊ.ಲಕ್ಷ್ಮಿ ಚಂದ್ರಶೇಖರ್, ಪ್ರೊ.ಸಬಿಹಾ ಭೂಮಿಗೌಡ ಹಾಗೂ ಶಾಂತಾ ಜಯಾನಂದ್ ಸಂವಾದ ನಡೆಸಲಿದ್ದಾರೆ.

ನಂತರ 1.15ರಿಂದ 2.45ರವರೆಗೆ 'ಪೊನ್ನಚ್ಚಿಯ ಕಥೆಗಾರರು' ಕುರಿತು ಸೋಮಶೇಖರ್, ಸ್ವಾಮಿ ಪೊನ್ನಾಚಿ, ಪ್ರಕಾಶ್ ಪುಟ್ಟಪ್ಪ ಮಹದೇವ ಪೊನ್ನಾಚಿ, ಅಬ್ದುಲ್ ರಶೀದ್, ಚೇತನ್ ಪೊನ್ನಾಚಿ, ಶಿವಕುಮಾರ್ ಹಾಗೂ ಸತೀಶ್ ಪೊನ್ನಾಚಿ ಚರ್ಚಿಸಲಿದ್ದಾರೆ. 2.45ರಿಂದ 3.30ರವರೆಗೆ 'ಬುಡಕಟ್ಟು ಜನಾಂಗದ ಸಂಘಟನೆ ಮತ್ತು ಅರಣ್ಯಪರ ಹೋರಾಟದ ಜೀವನ ಯಾತ್ರೆ' ಕುರಿತು ಕೃಪಾಕರ್, ಸೋಮಣ್ಣ ಮತ್ತು ವಿಜಯಕುಮಾರ್ ಸಂವಾದ ನಡೆಸಲಿದ್ದಾರೆ.

3.30ರಿಂದ 4.30ರವರೆಗೆ 'ಹರಿಕಥೆಯ ನೆಪದಲ್ಲಿ ಜೀವನ ದರ್ಶನ' ಬಗ್ಗೆ ಶಿವಾರ ಉಮೇಶ್ ಮಾತನಾಡಲಿದ್ದಾರೆ. 4.30ರಿಂದ 5.15ರವರೆಗೆ 'ಮೂಲಕ್ಕೆ ಹೊಸ ರೂಪ ನೀಡುವ ಮೆರಗು: ಭಾಷಾಂತರದ ಬೆರಗು' ಕುರಿತು ಜಯರಾಮರಾಜೇಅರಸ್, ಕೃಷ್ಣಮೂರ್ತಿ ಶ್ರೀನಾಥ್, ಜಯಶ್ರೀ ಜಗನ್ನಾಥ, ಶುಭ ಸಂಜಯ್ ಅರಸ್, ಅನುರಾಧ ಚೌಡಿಪುರ, ನಿವೇದಿತಾ ಅವರು ಮಾತನಾಡಲಿದ್ದಾರೆ. 5.15ರಿಂದ 6.15ಕ್ಕೆ 'ಕೃಷಿಯಲ್ಲಿ ಸುರಕ್ಷತೆ ನಳ ಭೀಮಸೇನರ ಪಾಕ ಸ್ವಾದಿಷ್ಟ' ಬಗ್ಗೆ ಸಿಹಿಕಹಿ ಚಂದ್ರು, ಡೇವಿಡ್ ಬೆಲೊ, ವಿನಯ್ ಶ್ರೀನಿವಾಸ್, ಮಧು ಚಂದನ್ ಮತ್ತು ಧರ್ಮೇಂದ್ರ ಕುಮಾರ್ ಸಂವಾದ ನಡೆಸಲಿದ್ದಾರೆ.

ಜು.5ರಂದು: ಬೆಳಗ್ಗೆ 9.30ರಿಂದ 10 ಗಂಟೆವರೆಗೆ ಕ್ರಿಯ ತಂಡದವರು ಜನಪದ ಗೀತಗಾಯನ ನಡೆಸಲಿದ್ದಾರೆ. 10ರಿಂದ 10.45ರವರೆಗೆ 'ಬದಲಾಗುತ್ತಿರುವ ಮಾಧ್ಯಮದಲ್ಲಿ ಮಹಿಳಾ ದೃಷ್ಟಿಕೋನ ಔಚಿತ್ಯ, ಅನಿವಾರ್ಯತೆ' ಬಗ್ಗೆ ಚೇತನ ಬೆಳಗೆರೆ, ಹೆಚ್.ಎನ್.ಆರತಿ, ಶಾಂತಲಾ ಧರ್ಮರಾಜ್, ಪ್ರೀತಿ ನಾಗರಾಜ್ ಸಂವಾದ ನಡೆಸಲಿದ್ದಾರೆ. 10.45ರಿಂದ 11.30ರವರೆಗೆ 'ಮೈಸೂರಿನ ಪರಿಸರ, ಕೆರೆಗಳ ರಕ್ಷಣೆಯಲ್ಲಿ ನಾಗರಿಕರ ಹೊಣೆಗಾರಿಕೆ' ಕುರಿತು ಮೇಜರ್ ಜನರಲ್ ಸುಧೀರ್ ವೊಂಬತ್ಕೆರೆ, ಪರಶುರಾಮೇಗೌಡ, ಯು.ಎನ್.ರವಿಕುಮಾರ್, ಡಾ.ಚಂಪಾ ಚರ್ಚಿಸಲಿದ್ದಾರೆ. 11.30ರಿಂದ 12.15ರವರೆಗೆ 'ಪ್ರಸ್ತುತ ಯುವ ಸಮಾಜದ ಉನ್ನತೀಕರಣದಲ್ಲಿ ಭಾಷಾ ವಿಜ್ಞಾನ, ಸಂಶೋಧನೆ ಮತ್ತು ಸಾಹಿತ್ಯದ ಪಾತ್ರ' ಕುರಿತು ಡಾ.ಹಂಪನಾ, ಡಾ.ಹೆಚ್.ಟಿ.ಶೈಲಜಾ ಮಾತನಾಡಲಿದ್ದಾರೆ.

ನಂತರ 12.15ರಿಂದ 12.30ರವರೆಗೆ ನೆರಳು ಮಹಿಳಾ ತಂಡದಿಂದ ಕಂಸಾಳೆ ಪ್ರದರ್ಶನವಿರಲಿದೆ. 12.30ರಿಂದ 1ರವರೆಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ 'ದಶಕದ ಸಂಭ್ರಮಕ್ಕೆ ಬರಹದ ಬಾಗಿನ' ಪುಸ್ತಕವನ್ನು ಬಿಡುಗಡೆಗೊಳಿಸಲಿದ್ದಾರೆ. 1 ಗಂಟೆಯಿಂದ 1.45ರವರೆಗೆ ಸಂಸದರೂ ಆದ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರು 'ವೈದ್ಯಕೀಯ ಸೇವೆಗಳನ್ನು ಸಮಾಜದ ಅಂಚಿನಲ್ಲಿರುವ ಸಹಸ್ರಾರು ಮಂದಿಗೆ ತಲುಪಿಸುವ ಸವಾಲುಗಳು' ವಿಷಯದ ಕುರಿತು ಮಾತನಾಡಲಿದ್ದಾರೆ. 1.45ರಿಂದ 2.30ರವರೆಗೆ 'ಕಥೆ, ಕಾವ್ಯಕಾರಣ: ಹಳೆಯ ಹಂಬಲಗಳನ್ನು ದಾಟಿ ಹುಟ್ಟಿದ ಹೊಸ ಪ್ರತಿಭೆ' ಬಗ್ಗೆ ವಿಕ್ರಮ್ ಹತ್ವಾರ್, ದೀಪಾ ಜೋಶಿ, ಸಂಧ್ಯಾರಾಣಿ, ಲಿಂಗರಾಜ ಸೊಟ್ಟಪ್ಪನವರ ಚರ್ಚಿಸಲಿದ್ದಾರೆ. 2.30ರಿಂದ 3.15ರವರೆಗೆ 'ಕವಿತೆಗಳಲ್ಲಿ ಹರಿವ ಜೀವನದಿಯ ಕಲರವ' ಕುರಿತು ಸ್ವಾಮಿ ಪೊನ್ನಾಚಿ, ನದೀಮ್ ಸನದಿ, ಭವ್ಯ ಕಬ್ಬಳಿ, ಸವಿರಾಜ್ ಆನಂದೂರು, ಡಾ.ಎಂ.ಜಿ.ಆರ್. ಅರಸ್ ಮತ್ತು ಪ್ರವೀಣ್ ಸಂವಾದ ನಡೆಸಲಿದ್ದಾರೆ. 3.15ರಿಂದ 4ರವರೆಗೆ 'ಸಮಕಾಲೀನ ಕನ್ನಡ ಕಾದಂಬರಿಗಳಲ್ಲಿ ಅಧುನಿಕತೆಯ ಸಂಕೀರ್ಣ ನೆಲೆಗಳು' ಡಾ.ಹೆಚ್.ಎಲ್.ಪುಷ್ಪ, ಡಾ.ಎಂ.ಎಸ್.ಆಶಾದೇವಿ, ಡಾ.ಗಜಾನನ ಶರ್ಮ, ಸತೀಶ್ ಚಪ್ಪರಿಕೆ ಅವರು ಮಾತನಾಡಲಿದ್ದಾರೆ. 4 ಗಂಟೆಯಿಂದ 4.45ರವರೆಗೆ ಗೌರೀಶ್ ಅಕ್ಕಿ, ಕೀರ್ತಿ ನಾರಾಯಣ, ಪ್ರೊ.ಕೃಷ್ಣೇಗೌಡ, ರೂಪರ್ಶಿ ಅವರುಗಳು 'ಹರಟೆ ಹಾಸ್ಯ ಬದುಕು ಬವಣೆಗಳ ವಿವಿಧ ಮುಖಗಳ ನಿತ್ಯ ದರ್ಶನ' ಬಗ್ಗೆ ಸಂವಾದ ನಡೆಸಲಿದ್ದಾರೆ. 4.45ರಿಂದ 5.15ರವರೆಗೆ ಸಾಹಿತ್ಯ ವಲಯದಲ್ಲಿ ಸಂಚಲನ ಮೂಡಿಸಿರುವ ಜ.ನಾ.ತೇಜಶ್ರೀ ಅವರ ಮಹಾಕಾದಂಬರಿ 'ಜೀವರತಿ'ಯ ಬಗ್ಗೆ ಸೇನಾನಿ ಅವರು ಜ.ನಾ.ತೇಜಶ್ರೀ ಅವರೊಟ್ಟಿಗೆ ಸಂವಾದ ನಡೆಯಲಿದೆ. 5.15ರಿಂದ 6.15ರವರೆಗೆ 'ಸಿನಿಮಾ : ನಿನ್ನೆ–ಇಂದು–ನಾಳೆ' ಕುರಿತು ನಟಿ ಭಾರತೀ ವಿಷ್ಣುವರ್ಧನ್, ಎಸ್.ವಿ. ರಾಜೇಂದ್ರಸಿಂಗ್ ಬಾಬು, ವಿ.ನಾಗೇಂದ್ರ ಪ್ರಸಾದ್, ಮನ್ಸೂರ್ ಅವರು ವಿಶೇಷ ಸಂವಾದ ನಡೆಸಲಿದ್ದಾರೆ ಎಂದು ವಿವರಿಸಿದರು.

ಜು.5ರ ಕಾರ್ಯಕ್ರಮಗಳು: ಬೆಳಗ್ಗೆ 9.30ರಿಂದ 10ರವರೆಗೆ 'ಶೇಕ್ಸ್‌ಪಿಯರ್ ಮಸಾಲ' ವಿಷಯದ ಬಗ್ಗೆ ಜೊನಾಥನ್ ಗಿಲ್ ಹ್ಯಾರಿಸ್ ಮಾತನಾಡಲಿದ್ದಾರೆ. 10ರಿಂದ 11ರವರೆಗೆ 'ಪುರಾಣ, ದೈವಿಕ ಕಲ್ಪನೆಗಳು ಮತ್ತು ಸೂಪರ್ ಹೀರೋಗಳು' ಕುರಿತು ಅಮೀಶ್ ತ್ರಿಪಾಠಿ, ಅರೂಣ್ ರಾಮನ್ ಸಂವಾದ ನಡೆಸಲಿದ್ದಾರೆ. 11ರಿಂದ 11.45ರವರೆಗೆ 'ಭೂತ, ಪ್ರೇತಗಳ ಕಥೆಗಳ ಸಾಹಿತ್ಯ ಲೋಕ' ಬಗ್ಗೆ ಸಂಜೋಯ್ ಕೆ. ರಾಯ್, ದೀಪ್ತಿ.ಎನ್ ಚರ್ಚಿಸಲಿದ್ದಾರೆ. 11.45ರಿಂದ 12.00ರವರೆಗೆ ಪುನೀತ್ ರಾಜ್‌ಕುಮಾರ್ ಅಭಿನಯದ 'ಗಂಧದಗುಡಿ' ಸಾಕ್ಷ್ಯಚಿತ್ರದ ಪುಸ್ತಕದ ಅವತರಣಿಕೆಯ ಮುಖಪುಟ ಬಿಡುಗಡೆಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾಡಲಿದ್ದಾರೆ ಎಂದರು.

ನಂತರ 12.00ರಿಂದ 12.45ರವರೆಗೆ 'ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಓದು, ಬರಹ ಮತ್ತು ಅಚ್ಚರಿ' ಕುರಿತು ಆದರ್ಶ್ ಸುಧೀಂದ್ರ, ಅಜಯ್ ಪ್ರಮೋದ್ ಸಂವಾದ ನಡೆಸಲಿದ್ದಾರೆ. 12.45ರಿಂದ 1.30ರವರೆಗೆ 'ಸಾಮಾಜಿಕ ವಿಡಂಬನೆಗಳ ಹೊಸ ಆಯಾಮಗಳು' ಬಗ್ಗೆ ಮಹೇಶ್ ರಾವ್, ಮಾಧವಿ ಮೆನನ್ ಮಾತನಾಡಲಿದ್ದಾರೆ. 1.30ರಿಂದ 2.15ರವರೆಗೆ 'ಗಡಿಗಳನ್ನು ಮೀರುವ ಇತಿಹಾಸಗಳು' ಜೊನಾಥನ್ ಗಿಲ್ ಹ್ಯಾರಿಸ್, ಸ್ವಾನ್ಲಿ ಕಾರ್ವಾಲೊ ಸಂವಾದ ನಡೆಸುತ್ತಾರೆ. 2.15ರಿಂದ 3.00ರವರೆಗೆ 'ಸಣ್ಣ ಕಥೆ ಬರವಣಿಗೆ, ಸಂಪಾದನೆ ಮತ್ತು ಪ್ರಕಟಣೆ' ಕುರಿತಂತೆ ಹೊಸ ಸಾಹಿತಿಗಳಾದ ಶ್ರೀವಿದ್ಯಾ ತಡೆಪಲ್ಲಿ, ರತುಲ್ ಘೋಷ್, ಸಾಲಿನಿ ವಿನೀತ್, ಸುಮನ್ಯಾ ವೇಲಮೂರು, ಸುಚಿತ್ರಾ ಸುಕುಮಾರ್ ತಿಳಿಸಿಕೊಡಲಿದ್ದಾರೆ. 3.00ರಿಂದ 3.45ರವರೆಗೆ ಸಹರು ನುಸೈಬಾ ಕನ್ನನಾರಿ, ಸಚಿನ್, ಅರುಣಿಮಾ ಟೆನ್ನಿನ್ ತಾರಾ 'ರಹಸ್ಯ ಮತ್ತು ಸಾಹಸ ಕಥೆಗಳ ಲೋಕ'ವನ್ನು ಅನಾವರಣಗೊಳಿಸಲಿದ್ದಾರೆ. 3.45ರಿಂದ 4.30ರವರೆಗೆ 'ವಿಜ್ಞಾನದ ಹೊಸ ಆಯಾಮಗಳು' ಕುರಿತು ಉಪಾಸನಾ ಸರ್ರಾಜು, ಕೊಳ್ಳೆಗಾಲ ಶರ್ಮಾ, ಮಹಿಮಾ ಜೈನ್ ಚರ್ಚಿಸಲಿದ್ದಾರೆ. 4.30ರಿಂದ 5.15ವರೆಗೆ 'ದಕ್ಷಿಣದಿಂದ ಹಾಡು' ಎಂಬ ವಿಷಯದ ಬಗ್ಗೆ ಸುಮನಾ ಚಂದ್ರಶೇಖರ್, ಶರತ್ ಆರ್.ರಾವ್, ಜ್ಯೋತ್ಸ್ನಾ ಹೆಬ್ಬಾರ್ ಜುಗಲುಬಂದಿ ಜೊತೆಗೆ ಸಂವಾದ ನಡೆಸಲಿದ್ದಾರೆ. 5.15ರಿಂದ 6.00ರವರೆಗೆ 'ಚಿತ್ರರಂಗದಲ್ಲಿ ಬಹುಮುಖಿ ಪಾತ್ರಗಳು' ಬಗ್ಗೆ ಕುಬ್ರಾ ಸೇಠ್, ತ್ರಿಶ್ ಚೌಡ್ರೆ, ತಬೀನಾ ಅಂಜುಮ್ ಸಂವಾದ ನಡೆಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕಿಟ್ಟಿ ಮಂದಣ್ಣ, ತಂಗಂ ಪಣಕಲ್, ಶುಭ ಸಂಜಯ್ ಅರಸ್, ಸ್ಯಾಮ್ ಚೆರಿಯನ್, ರಿಯಾನ್ ಇರಾನಿ ಉಪಸ್ಥಿತರಿದ್ದರು.

ಎಂಎಲ್‌ಸಿ ಚುನಾವಣೆಯಲ್ಲಿ ನಿಷ್ಠಾವಂತರ ಕಡೆಗಣನೆಗೆ ಆಕ್ರೋಶ

ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಉಚ್ಚಾಟನೆ

● ಅಡ್ಡ ಮತದಾನದ ಬಗ್ಗೆ ಅಸಮಾಧಾನ ● ರಾಷ್ಟ್ರೀಯ, ರಾಜ್ಯ ನಾಯಕರಿಗೂ ತೀವ್ರ ತರಾಟೆ ● ಬಿಜೆಪಿ ಒಳಭೇಗುದಿ ಮತ್ತೊಮ್ಮೆ ಬಹಿರಂಗ

ಮೈಸೂರು, ಜೂ.29(ಬಿಎಲ್‌ಯು)– ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಟಿಕೆಟ್ ನೀಡದೆ ನಿರ್ಲಕ್ಷ್ಯ ತೋರಿರುವುದು, ಅಡ್ಡ ಮತದಾನ ತಡೆಯುವಲ್ಲಿ ಬಿಜೆಪಿ ನಾಯಕರ ಬೇಜವಾಬ್ದಾರಿ ಬಗ್ಗೆ ಪ್ರಸ್ತಾಪಿಸಿದ ರಾಜ್ಯ ಬಿಜೆಪಿ ವಕ್ತಾರರಾದ ಮೈಸೂರಿನ ಎಂ.ಜಿ.ಮಹೇಶ್ ಅವರನ್ನು ಪಕ್ಷದಿಂದಲೇ ಉಚ್ಚಾಟನೆ ಮಾಡಲಾಗಿದೆ.



ಈ ಮೂಲಕ ವಿಧಾನ ಪರಿಷತ್ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಹಾಗೂ ಅಡ್ಡ ಮತದಾನದ ವಿಚಾರವಾಗಿ ಬಿಜೆಪಿಯಲ್ಲಿ ನಡೆಯುತ್ತಿರುವ ಒಳ ಬೇಗುದಿಗೆ ಬಿಜೆಪಿ ರಾಜ್ಯ ವಕ್ತಾರನ ತಲೆದಂಡವಾಗಿದೆ.

ಬಿಜೆಪಿಯಲ್ಲಿ ನಡೆಯುತ್ತಿರುವ ಮುಸುಕಿನ ಗುದ್ದಾಟ, ಭಿನ್ನಮತದ ನಡುವೆ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡರು ಪಕ್ಷದ ಅವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕೆಂಬ ಆಡಿಯೋ ವೈರಲ್ ಆದ ದಿನವೇ ಎಂ.ಜಿ.ಮಹೇಶ್ ಅವರ ಉಚ್ಚಾಟನೆಯಾಗಿದೆ.

ಪರಿಷತ್ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ವಿಧಾನ, ಪಕ್ಷದ ನಿಷ್ಠಾವಂತರಿಗೆ ಅವಕಾಶ ನೀಡದಿರುವ ಬಗ್ಗೆ ಜೂ.19ರಂದು ನಡೆದ ಬಿಜೆಪಿ ಮಾಧ್ಯಮದ 'ವೆಬೆಕ್ಸ್ ಸಭೆ'ಯಲ್ಲಿ ಮಹೇಶ್ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಬಿಜೆಪಿ ರಾಷ್ಟ್ರೀಯ ನಾಯಕರು, ರಾಜ್ಯ ನಾಯಕರು ಹಾಗೂ ಬಿಜೆಪಿ ಪ್ರಮುಖರ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಚುನಾವಣೆಗೆ ಮುನ್ನ ಮತದಾನ ಮಾಡುವ ಶಾಸಕರಿಗೆ ವಿಪ್ ಜಾರಿ ಮಾಡುವುದು ನಿಯಮ. ಆದರೆ, ಮತದಾನ ಆರಂಭವಾಗಿ ಸುಮಾರು 20 ಶಾಸಕರು ಮತದಾನ ಮಾಡಿದ ನಂತರ ವಿಪ್ ಜಾರಿ ಮಾಡಿರುವುದಕ್ಕೆ ಮಹೇಶ್ ವೆಬೆಕ್ಸ್ ಸಭೆಯಲ್ಲಿ ಅನುಮಾನ ವ್ಯಕ್ತಪಡಿಸಿದ್ದರು.

ಬಿಜೆಪಿ ನಾಯಕರ ಇಂತಹ ಬೇಜವಾಬ್ದಾರಿಯಿಂದ ಅಡ್ಡ ಮತದಾನವಾಗಿದೆ ಎಂದು ಮಹೇಶ್ ಅವರು ಆರೋಪಿಸಿದ್ದರು. ವೆಬೆಕ್ಸ್ ಆಂತರಿಕ ಸಭೆಯಾದ ಹಿನ್ನೆಲೆಯಲ್ಲಿ ಮಹೇಶ್ ಪಕ್ಷದ ಬೆಳವಣಿಗೆ ಬಗ್ಗೆ ಮುಕ್ತವಾಗಿ ಮಾತನಾಡಿದ್ದರು.

ಮಹೇಶ್ ಅವರು ಆಡಿದ ಮಾತುಗಳನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿದೆ. ಈ ಸಂಬಂಧ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ್ ಅವರು ಮಹೇಶ್ ಅವರಿಗೆ ನೋಟಿಸ್ ಜಾರಿ ಮಾಡಿದ್ದರು. ಆದರೆ ನೋಟಿಸ್‌ಗೆ ಅವರು ನೀಡಿದ ಸ್ಪಷ್ಟೀಕರಣ ಸಮಂಜಸವಲ್ಲ ಎಂದು ಪರಿಗಣಿಸಿದ ಲಿಂಗರಾಜ ಪಾಟೀಲ್ ಅವರು ಮಹೇಶ್ ಅವರನ್ನು 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟಿಸಿ ಇಂದು ಆದೇಶ ಹೊರಡಿಸಿದ್ದಾರೆ.

ಉಚ್ಚಾಟನಾ ಆದೇಶದಲ್ಲೇನಿದೆ?

ಜೂನ್ 19ರಂದು ನಡೆದ ಪಕ್ಷದ ವೆಬೆಕ್ಸ್ ಸಭೆಯಲ್ಲಿ ತಾವು ರಾಷ್ಟ್ರೀಯ ನಾಯಕರು ಹಾಗೂ ರಾಜ್ಯ ಬಿಜೆಪಿ ಪ್ರಮುಖರ ಕುರಿತು ಇಲ್ಲಸಲ್ಲದ, ಕೀಳು ಮಟ್ಟದ ಹಾಗೂ ಅವಹೇಳನಕಾರಿ ಆರೋಪ ಮಾಡಿ ಪಕ್ಷದ ಸಂಘಟನೆಯಲ್ಲಿ ಅಶಿಸ್ತು ಪ್ರದರ್ಶಿಸಿರುವ ಬಗ್ಗೆ ನೋಟಿಸ್ ನೀಡಲಾಗಿತ್ತು. ಆದರೆ, ನೀವು ನೀಡಿದ ಸ್ಪಷ್ಟೀಕರಣ ಸಮಾಧಾನಕರವಲ್ಲದ ಕಾರಣ ತಕ್ಷಣದಿಂದ ಜಾರಿಗೆ ಬರುವಂತೆ ಬಿಜೆಪಿಯ ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸಿ, 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಲಿಂಗರಾಜ್ ಪಾಟೀಲ್ ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ಶೀಘ್ರದಲ್ಲೇ ವರಿಷ್ಠರ ಭೇಟಿ

"ಶೀಘ್ರದಲ್ಲೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಭೇಟಿ ಮಾಡಿ ಕರ್ನಾಟಕದ ಬಿಜೆಪಿಯಲ್ಲಿ ನಡೆಯುತ್ತಿರುವ ಆಂತರಿಕ ಬೆಳವಣಿಗೆ ಬಗ್ಗೆ ದೂರು ನೀಡುತ್ತೇನೆ. ಪಕ್ಷದ ಆಂತರಿಕ ವಿಚಾರಗಳನ್ನು ಈಗ ಬಹಿರಂಗಗೊಳಿಸಿ ಅವರೇ ಶಿಸ್ತು ಉಲ್ಲಂಘಿಸಿದ್ದಾರೆ ಎಂಬ ವಿಚಾರವನ್ನು ಗಮನಕ್ಕೆ ತರುತ್ತೇನೆ. ಪಕ್ಷದಿಂದ ಉಚ್ಚಾಟನೆ ಮಾಡಿದ್ದರೂ ಒಬ್ಬ ಕಾರ್ಯಕರ್ತನಾಗಿ ನಾನು ಕಾರ್ಯನಿರ್ವಹಿಸುತ್ತೇನೆ. **–ಎಂ.ಜಿ.ಮಹೇಶ್, ಉಚ್ಚಾಟಿತ ಬಿಜೆಪಿ ರಾಜ್ಯ ವಕ್ತಾರ**

ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ...



ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಗೋಪಾಲ್‌ರಾಜೇಅರಸ್(ರಘು ಅರಸ್), ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಜೈಶಂಕರ್, ಜಯರಾಮ್, ಕಾರ್ಯಾಲಯ ಕಾರ್ಯದರ್ಶಿ ಚಂದ್ರಶೇಖರ್‌ಗೌಡ, ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಮಹಿಳಾ ಮೋರ್ಚಾ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಕಾವೇರಿ ನಾಗರಾಜ್, ಮೈಸೂರು ನಗರ ಓಬಿಸಿ ಉಪಾಧ್ಯಕ್ಷ ಹರೀಶ್ ಅಂಕಿತ್, ಕ್ಷೇತ್ರದ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹೇಮಂತ, ಮುಖಂಡರಾದ ರಾಜೇಶ್ ಜಾದವ್, ಪುರುಷೋತ್ತಮ್, ಕ್ಷೇತ್ರದ ಮಹಿಳಾ ಮೋರ್ಚಾ ಕಾರ್ಯದರ್ಶಿ ಲತಾ ಇನ್ನಿತರರಿದ್ದರು.

ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ವ್ಯಾಪಕ ಬೆಂಬಲ



ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಅಂಗವಾಗಿ ಜೆ.ಪಿ.ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಕಾರ್ಯಕ್ರಮದ ಉದ್ಘಾಟನಾ ಸಂದರ್ಭ.

ಮೈಸೂರು, ಜೂ.29–ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಅಂಗವಾಗಿ ಜೆ.ಪಿ. ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ಮಕ್ಕಳಿಗೆ ಪೋಲಿಯೋ ಹನಿ ನೀಡುವ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಉತ್ಸಾಹದಿಂದ ಭಾಗವಹಿಸಿದ್ದರು.

ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಪೋಲಿಯೋ ನಿರ್ಮೂಲನೆಯ ರಾಷ್ಟ್ರೀಯ ಸಂಕಲ್ಪಕ್ಕೆ ಬೆಂಬಲ ಸೂಚಿಸುವ ನಿಟ್ಟಿನಲ್ಲಿ ಕ್ಲಬ್ ಸದಸ್ಯರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಸೇವೆ ಸಲ್ಲಿಸಿದರು.

ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ ವತಿಯಿಂದ ನಗರದ ಒಟ್ಟು 16 ಪಲ್ಸ್ ಪೋಲಿಯೋ ಕೇಂದ್ರಗಳಲ್ಲಿ ಸದಸ್ಯರು ಭಾಗವಹಿಸಿ ಮಕ್ಕಳಿಗೆ ಪೋಲಿಯೋ ಹನಿ ನೀಡುವ ಕಾರ್ಯಕ್ಕೆ ಸಹಕರಿಸಿದರು. ಅಲ್ಲದೆ, ಪೋಷಕರಲ್ಲಿ ಜಾಗೃತಿ ಮೂಡಿಸುವ ಮೂಲಕ ಪ್ರತಿಯೊಬ್ಬ ಮಗುವಿಗೂ ಪೋಲಿಯೋ ಲಸಿಕೆ ತಲುಪುವಂತೆ ಪ್ರೋತ್ಸಾಹ ನೀಡಿದರು. ಕಾರ್ಯಕ್ರಮದಲ್ಲಿ ಕ್ಲಬ್ ಅಧ್ಯಕ್ಷ ಎನ್.ಎಸ್.ಮಹದೇವಸ್ವಾಮಿ, ಕಾರ್ಯದರ್ಶಿ ಕೆ.ಜೆ. ಹರೀಶ್, ವಲಯ ಸೇನಾನಿ ಕೆ.ಎಸ್.ಕುಮಾರ್, ನಿಯೋಜಿತ ಅಧ್ಯಕ್ಷೆ ಮಂಗಳ ಶಿವಕುಮಾರ್, ಚಂದ್ರಶೇಖರ್, ಮಂಜೇಗೌಡ, ಪ್ರಕಾಶ್ ತಳೂರು, ಡಾ.ಸಿ.ಎಸ್. ಸೌಮ್ಯ, ಎಂ.ಎನ್.ಮಂಜುನಾಥ್ ಸೇರಿದಂತೆ ಕ್ಲಬ್ ಸದಸ್ಯರು ಹಾಗೂ ಜೆ.ಪಿ.ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಬೆಂಗಳೂರಿಂದ 100 ಕಿಮೀ ಒಳಗಿನ ನಗರಗಳಿಗೆ ಚತುಷ್ಪಥ ರೈಲು ಸಂಪರ್ಕ

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಘೋಷಣೆ



ಚನ್ನಪಟ್ಟಣ ತಾಲೂಕಿನ ಎಲೆಕೇರಿ ಬಳಿ ನೂತನವಾಗಿ ನಿರ್ಮಿಸಿರುವ ರಸ್ತೆ ಮೇಲ್ಸೇತುವೆ ಉದ್ಘಾಟನಾ ಸಮಾರಂಭವನ್ನು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸೋಮವಾರ ಉದ್ಘಾಟಿಸಿದರು.

ಬೆಂಗಳೂರು, ಜೂನ್ 29(ಕೆಎಂಶಿ)– ಬೆಂಗಳೂರಿನಿಂದ 100 ಕಿಲೋ ಮೀಟರ್ ಒಳಗಿನ ನಗರಗಳಿಗೆ ಚತುಷ್ಪಥ ರೈಲು ಮಾರ್ಗಗಳ ಸಂಪರ್ಕ ಅಭಿವೃದ್ಧಿಪಡಿಸಲಾಗುವುದು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಚನ್ನಪಟ್ಟಣ ತಾಲೂಕಿನ ಎಲೆಕೇರಿ ಬಳಿ ನೂತನವಾಗಿ ನಿರ್ಮಿಸಿರುವ ರಸ್ತೆ ಮೇಲ್ಸೇತುವೆ ಉದ್ಘಾಟಿಸಿ ಮಾತನಾಡಿದ ಅವರು, ರಾಜಧಾನಿಯಿಂದ ಕರಾವಳಿ ಭಾಗದ ಮಂಗಳೂರಿಗೂ ಚತುಷ್ಪಥ ಮಾರ್ಗ ಅಭಿವೃದ್ಧಿ ಪರಿಗಣಿಸಲಾಗುವುದು ಎಂದರು.

ಇದಕ್ಕೂ ಮುನ್ನ ಸಮಾರಂಭದಲ್ಲಿ ಕರ್ನಾಟಕದ ರೈಲ್ವೆ ಬೇಡಿಕೆಗಳ ಕುರಿತು ಪ್ರಸ್ತಾಪಿಸಿದ ರಾಜ್ಯದ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್, ಬೆಂಗಳೂರಿನಿಂದ ತುಮಕೂರು, ಮೈಸೂರು, ಗೌರಿಬಿದನೂರು ಮಾರ್ಗವಾಗಿ ಹಿಂದೂಪುರ ಮತ್ತು ಕೋಲಾರಕ್ಕೆ ಚತುಷ್ಪಥ ರೈಲು ಮಾರ್ಗ ನಿರ್ಮಿಸಬೇಕು.

ಮಂಗಳೂರಿಗೆ ತ್ವರಿತ ರೈಲು: ರಾಜಧಾನಿ ಬೆಂಗಳೂರಿನಿಂದ ಕರಾವಳಿಯ ಮಂಗಳೂರಿಗೆ ತ್ವರಿತ ರೈಲು ಸಂಚಾರ ವ್ಯವಸ್ಥೆ ಆಗಬೇಕಿದೆ. ಇದಕ್ಕಾಗಿ ಸಕಲೇಶಪುರ–ಗುಂಡ್ಯ ನಡುವೆ ಸಮಾನಾಂತರ ರಸ್ತೆ ಮತ್ತು ರೈಲು ಮಾರ್ಗ ಆಗಬೇಕು ಎಂದು ಕೋರಿದರು.

ಸಚಿವರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಕೇಂದ್ರ ಸಚಿವರು, ಬೆಂಗಳೂರು–ತುಮಕೂರು ಚತುಷ್ಪಥ ಮಾರ್ಗ ಸರ್ವೆ ಮುಗಿದಿದೆ. ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು.

ಮುಂದಿನ ಒಂದೂವರೆ–ಎರಡು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸುವ ಉದ್ದೇಶ ಇದೆ. ಅದೇ ರೀತಿ ಬೆಂಗಳೂರು–ಮೈಸೂರು ಚತುಷ್ಪಥ ನಿರ್ಮಾಣ ಸಮೀಕ್ಷೆಗೆ ತೀರ್ಮಾನಿಸಲಾಗಿದೆ. ಸಚಿವ ಎಂ.ಬಿ. ಪಾಟೀಲ್ ಪ್ರಸ್ತಾಪಿಸಿರುವ ಬೇಡಿಕೆಗಳು ಸರಿಯಾಗಿವೆ. ಅವರ ಕೋರಿಕೆಯಂತೆ ಬೆಂಗಳೂರು–ಕೋಲಾರ ನಡುವೆ ನೇರ ರೈಲು ಸಂಪರ್ಕ ಕಲ್ಪಿಸಲಾಗುವುದು.

ಸದ್ಯಕ್ಕೆ ವೈಟ್‌ಫೀಲ್ಡ್‌ವರೆಗಿನ ನಾಲ್ಕು ಪಥದ ಮಾರ್ಗ ವಿಸ್ತರಿಸಲಾಗುವುದು, ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವೇ ನಡೆಸಲಿದೆ ಎಂದರು. ಬೆಂಗಳೂರಿನಿಂದ ಕರಾವಳಿಯ ಮಂಗಳೂರಿಗೆ ರೈಲು ಮಾರ್ಗ ಕೋರಿಕೆಗೆ ಸ್ಪಂದಿಸಿದ ಸಚಿವ ವಿ.ಸೋಮಣ್ಣ, ಇದೊಂದು ಉಪಯುಕ್ತ ಸಲಹೆ, ಈ ಎರಡೂ ನಗರಗಳ ನಡುವೆ ಚತುಷ್ಪಥ ರೈಲು ಮಾರ್ಗ ಅಭಿವೃದ್ಧಿ ಅಗತ್ಯವಿದೆ. ಬಂದರು ನಗರ ಮಂಗಳೂರು ಸಂಪರ್ಕ ಮಾರ್ಗದಿಂದ ಅನೇಕ ಪ್ರಯೋಜನಗಳಿವೆ, ಇದು ನಮ್ಮ ಆದ್ಯತೆ. ತುಮಕೂರು–ಚಿತ್ರದುರ್ಗ–ದಾವಣಗೆರೆ ಮಾರ್ಗದಲ್ಲಿ ಕಾಮಗಾರಿ ತ್ವರಿತವಾಗಿ ಸಾಗಿದೆ, ಈಗಿನ ಏಕಪಥವನ್ನು ಜೋಡಿ ಹಳಿ ಮಾಡಬೇಕೆಂಬ ಬೇಡಿಕೆಯನ್ನು ಪಾಟೀಲ್ ಇಟ್ಟಿದ್ದಾರೆ. ಇದನ್ನೂ ಪರಿಗಣಿಸಲಾಗುವುದು ಎಂದು ಹೇಳಿದರು.

ಕಿತ್ತೂರು ಕರ್ನಾಟಕ ಭಾಗದ ವಿಜಯಪುರಕ್ಕೆ ವಂದೇ ಭಾರತ್ ಸ್ಲೀಪರ್ ರೈಲು ಸೇವೆ ಬೇಡಿಕೆ ಇನ್ನು 3–4 ತಿಂಗಳಲ್ಲಿ ನನಸಾಗಲಿದೆ, ವಂದೇ ಭಾರತ್ ರೈಲಿಗೆ ಬದಲಾಗಿ ಸ್ಲೀಪರ್ ರೈಲು ಓಡಿಸಲಾಗುವುದು. ಈ ಕುರಿತು ಸದ್ಯದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು.

ಬೆಂಗಳೂರು–ವಿಜಯಪುರ ನಡುವೆ ವಾರಕ್ಕೆ ಎರಡು ಬಾರಿ ಸಂಚರಿಸುವ ವಿಶೇಷ ರೈಲು ಸೇವೆಯನ್ನು ಖಾಯಂಗೊಳಿಸಲಾಗುವುದು, ಜೊತೆಗೆ ಇರುವಂತಹ ಸಣ್ಣಪುಟ್ಟ ತೊಂದರೆಗಳನ್ನೂ ನಿವಾರಿಸಲಾಗುವುದು.

ಬೆಂಗಳೂರು ಮತ್ತು ಮುಂಬೈ ಬೆಸೆಯಲು ಬೆಂಗಳೂರು–ಪುಣೆ ಮಧ್ಯೆ ಹೈಸ್ಪೀಡ್ ರೈಲು ಆರಂಭಿಸಬೇಕೆಂಬ ಬೇಡಿಕೆ ಸೂಕ್ತವಾಗಿದ್ದು, ಇದರ ಸಾಕಾರಕ್ಕೆ ಪ್ರಯತ್ನಿಸಲಾಗುವುದು. ರೈಲ್ವೆ ಮೂಲಸೌಕರ್ಯದ ಗುಣಮಟ್ಟ, ಸುರಕ್ಷತೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲಿಸಲು ಬಳಸಲಾಗುವ ವಿಶೇಷ ರೈಲ್ವೆ ಪರಿಶೀಲನಾ ವಾಹನದಲ್ಲಿ ಬೆಂಗಳೂರು ರೈಲು ನಿಲ್ದಾಣದಿಂದ ಚನ್ನಪಟ್ಟಣದವರೆಗೆ ಇಬ್ಬರೂ ಸಚಿವರು ಪ್ರಯಾಣಿಸಿದರು.

ಬೆಂಗಳೂರಿನ ಕುಂಬಳಗೋಡು ಸಮೀಪದ ರಾಮೋಹಳ್ಳಿಯಲ್ಲಿ ನಡೆಯುತ್ತಿರುವ ರೈಲ್ವೆ ಕೆಳಸೇತುವೆ ಕಾಮಗಾರಿ ವೀಕ್ಷಿಸಿ, ಮಳೆ ನೀರು ನಿಲ್ಲದಂತೆ ನಿಗಾ ವಹಿಸಿ ಕಾಮಗಾರಿ ಮುಗಿಸಲು ಕೇಂದ್ರ ಸಚಿವರು ಸೂಚಿಸಿದರು.

ಮದ್ದೂರು ನಗರಸಭೆಯಿಂದ ಗೆಜ್ಜಲಗೆರೆ ಕೈ ಬಿಡಲು ಪ್ರಯತ್ನ

ಶಾಸಕ ಕೆ.ಎಂ.ಉದಯ್ ಭರವಸೆ

ಮದ್ದೂರು, ಜೂ.29– ಮದ್ದೂರು ನಗರಸಭೆಯಿಂದ ಗೆಜ್ಜಲಗೆರೆ ಗ್ರಾಪಂ ಅನ್ನು ಕೈ ಬಿಡಲು ಸರ್ಕಾರದ ಮಟ್ಟದಲ್ಲಿ ನಾನು ನಿಮ್ಮ ಪರವಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಶಾಸಕ ಕೆ.ಎಂ. ಉದಯ್ ಭರವಸೆ ನೀಡಿದರು.


ಪ್ರತಿಭಟನಾ ಸ್ಥಳದಲ್ಲಿ ಶಾಸಕ ಕೆ.ಎಂ.ಉದಯ್ ಮಾತನಾಡಿದರು.

ತಾಲೂಕಿನ ಗೆಜ್ಜಲಗೆರೆ ಗ್ರಾಮದ ಗ್ರಾಪಂ ಆವರಣದಲ್ಲಿ ಗೆಜ್ಜಲಗೆರೆ ಗ್ರಾಪಂ ಅನ್ನು ಮದ್ದೂರು ನಗರಸಭೆಯಿಂದ ಕೈ ಬಿಡುವಂತೆ ಒತ್ತಾಯಿಸಿ ಕಳೆದ 195 ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಪ್ರತಿಭಟನಾ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ, ಪ್ರತಿಭಟನಾ ನಿರತ ಗ್ರಾಮಸ್ಥರನ್ನುದ್ದೇಶಿಸಿ ಅವರು ಮಾತನಾಡಿದರು.

ಈ ಹಿಂದೆ ಪಟ್ಟಣವಾಗಿದ್ದ ಮದ್ದೂರನ್ನು ಅಭಿವೃದ್ಧಿ ಉದ್ದೇಶದಿಂದಾಗಿ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಸರ್ಕಾರದ ಮಾನದಂಡದ ಅನುಗುಣವಾಗಿ ಜನಸಂಖ್ಯೆಯ ಆಧಾರದ ಮೇಲೆ ಮದ್ದೂರಿಗೆ ಸಮೀಪದ ಗೆಜ್ಜಲಗೆರೆ, ಸೋಮನಹಳ್ಳಿ, ಗೊರವನಹಳ್ಳಿ ಹಾಗೂ ಚಾಮನಹಳ್ಳಿ 4 ಗ್ರಾಪಂಗಳನ್ನು ಸೇರ್ಪಡೆಗೊಳಿಸಲಾಗಿತ್ತು. ನಂತರದ ದಿನಗಳಲ್ಲಿ ಆಡಳಿತಾತ್ಮಕ ಪ್ರಕ್ರಿಯೆಗಳೆಲ್ಲಾ ಮುಗಿದು ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ ಗೆಜ್ಜಲಗೆರೆ ಗ್ರಾಪಂ ಅನ್ನು ನಗರಸಭಾ ವ್ಯಾಪ್ತಿಯಿಂದ ಕೈ ಬಿಡಲು ಒತ್ತಾಯಿಸಿ ಗ್ರಾಮಸ್ಥರು ನಿರಂತರ ಪ್ರತಿಭಟನೆ ಮಾಡಿಕೊಂಡು ಬರುತ್ತಿದ್ದೀರಿ. ಆದರೆ ವಿರೋಧ ಪಕ್ಷದ ಹಲವು ನಾಯಕರು ಪ್ರತಿಭಟನೆಗೆ ಬೆಂಬಲ ನೀಡುತ್ತೇವೆ ಎಂದು ಪ್ರತಿಭಟನೆಯಲ್ಲಿ ಭಾಗವಹಿಸಿ ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಮುಂದಾಗಿದ್ದರು. ಅಷ್ಟೇ ಅಲ್ಲದೆ ನನ್ನ ವಿರುದ್ಧ ಅನಗತ್ಯವಾಗಿ ಮಾತನಾಡುತ್ತಿದದ್ದು ನನಗೆ ತುಂಬಾ ಬೇಸರ ತಂದಿತ್ತು ಎಂದರು.

> ಕೋವಿಡ್ ವೇಳೆ ಜನಸೇವೆ ಮಾಡಲು ಬಂದ ನಾನು ನಂತರ ಕ್ಷೇತ್ರದ ಜನರ ಒತ್ತಾಯದ ಮೇರೆಗೆ ರಾಜಕೀಯಕ್ಕೆ ಬಂದು ಶಾಸಕನಾದೆ. 3 ವರ್ಷಗಳಲ್ಲಿ ಹಲವು ನೀರಾವರಿ ಯೋಜನೆ ಸೇರಿದಂತೆ ರೈತರಿಗೆ ಅನುಕೂಲವಾಗುವ ಜನಪರ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದೇನೆ. ಹೀಗಿರುವಾಗ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಪ್ರತಿಭಟನಾ ಸ್ಥಳಕ್ಕೆ ಬಂದಿದ್ದ ವಿಪಕ್ಷ ನಾಯಕರೆಲ್ಲಾ ನನ್ನ ಹತ್ತಿರ ಸಹಾಯ ತೆಗೆದುಕೊಂಡಿದ್ದಾರೆ. ಇದನ್ನು ನಾನು ಎಲ್ಲಿ ಬೇಕಾದರೂ ಹೇಳುತ್ತೇನೆ. ಅವರೆಲ್ಲಾ ಬಂದು ನನ್ನ ವಿರುದ್ಧ ಮಾತನಾಡಿದ್ದು ನನಗೆ ತುಂಬಾ ನೋವು ತಂದಿತ್ತು. ಆದ್ದರಿಂದ ಪ್ರತಿಭಟನಾ ಸ್ಥಳಕ್ಕೆ ಬಂದಿರಲಿಲ್ಲ. – ಕೆ.ಎಂ.ಉದಯ್, ಶಾಸಕ.

ಗೆಜ್ಜಲಗೆರೆ ಗ್ರಾಮವಾಗಿಯೇ ಉಳಿದರೆ ನಿಮ್ಮಷ್ಟೇ ನಾನು ಸಂತೋಷ ಪಡುತ್ತೇನೆ. ಈ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಗೆಜ್ಜಲಗೆರೆ ಗ್ರಾಪಂ ಅನ್ನು ನಗರಸಭೆಯಿಂದ ಕೈ ಬಿಡುವ ಬಗ್ಗೆ ಒಂದು ದಿನಾಂಕ ನಿಗದಿಗೊಳಿಸಿ ಮಾತನಾಡುತ್ತೇನೆ. ಆ ವೇಳೆ ಗ್ರಾಮದ ಐದಾರು ಮಂದಿ ಪ್ರಮುಖರು ನನ್ನ ಜೊತೆ ಬನ್ನಿ. ನಿಮ್ಮ ಬೇಡಿಕೆಯ ಪರವಾಗಿಯೇ ನ್ಯಾಯ ಕೊಡಿಸುವ ಪ್ರಯತ್ನ ಮಾಡುವ ಭರವಸೆಯನ್ನು ನೂರಕ್ಕೆ ಸಾವಿರ ಪಟ್ಟು ಈ ಮೂಲಕ ನೀಡುತ್ತಿದ್ದೇನೆ. ಹೀಗಾಗಿ ಧರಣಿ ಪ್ರತಿಭಟನೆ ಕೈ ಬಿಡುವಂತೆ ಮನವಿ ಮಾಡಿದರು.

ರೈತ ಹೋರಾಟಗಾತಿ ಸುನಂದಾ ಜಯರಾಮು ಮಾತನಾಡಿ, ಶಾಸಕರಾದ ನಿಮ್ಮ ಮೇಲೆ ನಮಗೆ ಭರವಸೆ ಇದೆ. ಗೆಜ್ಜಲಗೆರೆ ಗ್ರಾಮವನ್ನು ಗ್ರಾಮವನ್ನಾಗಿಯೇ ಉಳಿಸುತ್ತೀರಿ ಎಂಬ ನಂಬಿಕೆ ಇದೆ. ಅಲ್ಲಿವರೆಗೆ ಗ್ರಾಮಸ್ಥರಾದ ನಾವು ಗ್ರಾಪಂ ಎದುರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಹೋರಾಟವನ್ನು ಶಾಂತಿಯುತವಾಗಿ ಮುಂದುವರೆಸುತ್ತೇವೆ ಎಂದರು.

ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಯಿಂದ ಕೈ ಬಿಡುವಂತೆ ಒತ್ತಾಯಿಸಲಾದ ಮನವಿ ಪತ್ರವನ್ನು ಶಾಸಕರಿಗೆ ಗ್ರಾಮದ ಮುಖಂಡರು ಗ್ರಾಮಸ್ಥರ ಪರವಾಗಿ ನೀಡಿದರು.

ಈ ವೇಳೆ ಮುಖಂಡರಾದ ಗುರು ಮೂರ್ತಿ, ಜಿ.ಎಚ್.ವೀರಪ್ಪ, ಲಿಂಗಪ್ಪಣ್ಣ, ಲೋಕೇಶ್, ಮಹದೇವಣ್ಣ, ಜಿ.ಬಿ.ಚಂದ್ರ ಶೇಖರ್, ಮೋಹನ್, ನಾಗಣ್ಣ, ಶಿವು, ಶಿವನಂಜು, ಚಂದ್ರಶೇಖರ್ ಸೇರಿದಂತೆ ಗ್ರಾಮದ ಹಲವಾರು ಮಹಿಳೆಯರು ಹಾಜರಿದ್ದರು.

ಕೆರೆ ಕಟ್ಟೆಗಳಿಗೆ ನೀರು ಹರಿಸಲು ಪ್ರತಿಭಟನೆ


ಕೆರೆ ಕಟ್ಟೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಮಂಡ್ಯ, ಜೂ.29– ಕಾವೇರಿ ಜಲಾಯನ ಪ್ರದೇಶದಲ್ಲಿ ಒಣಗುತ್ತಿರುವ ಬೆಳೆಗಳಿಗೆ ಹಾಗೂ ಕೆರೆ ಕಟ್ಟೆಗಳಿಗೆ ಮತ್ತು ಜಾನುವಾರುಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಸೋಮವಾರ ನಗರದ ಕಾವೇರಿ ನೀರಾವರಿ ಕಚೇರಿ ಬಳಿ ಕರ್ನಾಟಕ ರಾಜ್ಯ ರೈತ ಸಂಘ ಏಕೀಕರಣ ಸಂಘಟನೆಯ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ನಿಗಮಕ್ಕೆ ಮುತ್ತಿಗೆ ಹಾಕಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ರೈತ ಮುಖಂಡರು, ಜಿಲ್ಲೆಯಲ್ಲಿ ಮಳೆ ಕೊರತೆ ಹಾಗೂ ನಾಲೆಗಳಲ್ಲಿ ನೀರು ಇಲ್ಲದ ಪರಿಣಾಮ ಜಿಲ್ಲೆಯಲ್ಲಿ ಬೆಳೆದು ನಿಂತಿರುವ ಕಬ್ಬು, ರೇಷ್ಮೆ, ತೆಂಗು ಇತರೆ ಬೆಳೆಗಳು ಈಗಾಗಲೇ ಒಣಗುತ್ತಿದ್ದು, ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಏಕ ಕಾಲದಲ್ಲಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಲು ಪ್ರಾರಂಭವಾಗಬೇಕಿದ್ದು, ನೀರಿನ ಅವಶ್ಯಕತೆ ಇದೆ ಎಂದರು.

ಜಿಲ್ಲೆಯ ರೈತರು ಸಾಲದ ಸುಳಿಯಲ್ಲಿ ಪರಿತಪಿಸುತ್ತಿದ್ದು, ಬರಗಾಲ ಎದುರಿಸುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಕೂಡಲೇ ಜಿಲ್ಲೆಯ ರೈತರ ನೆರವಿಗೆ ಬರಲು ಕೆಆರ್‌ಎಸ್ ಅಣೆಕಟ್ಟೆಯಿಂದ ಕೂಡಲೇ ನಾಲೆಗಳಲ್ಲಿ ನೀರು ಹರಿಸಲು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಅಧ್ಯಕ್ಷ ಇಂಡುವಾಳು ಚಂದ್ರಶೇಖರ್, ಮುಖಂಡರಾದ ಎಸ್.ಮಂಜೇಶ್‌ಗೌಡ, ಶಿವಳ್ಳಿ ಚಂದ್ರಶೇಖರ್, ಕೀಲಾರ ಸೋಮಶೇಖರ್, ಜವರೇಗೌಡ, ಸುರೇಶ್, ನಾಗರಾಜು, ಕರಿಯಪ್ಪ, ಮಹೇಂದ್ರ, ಕರವೇ ಜಯರಾಂ, ನಾಗಣ್ಣಗೌಡ, ಕುದರಗುಂಡಿ ನಾಗರಾಜು, ದೊರೆಸ್ವಾಮಿ, ಕೆ.ಎಂ. ನಂಜುಂಡಯ್ಯ ಭಾಗವಹಿಸಿದ್ದರು.

ಜಕ್ಕನಹಳ್ಳಿ ಸರ್ಕಲ್‌ನಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ

ಪಾಂಡವಪುರ, ಜೂ.29– ಸಮಾಜದ ಎಲ್ಲಾ ವರ್ಗದ ಜನರು ಸಮಾನತೆ, ಸಹಬಾಳ್ವೆಯಿಂದ ಬದುಕಲಿ ಎಂಬ ಉದ್ದೇಶದಿಂದ ನಾಡಪ್ರಭು ಕೆಂಪೇಗೌಡರು ಬೆಂಗಳೂರು ನಗರ ನಿರ್ಮಾಣ ಮಾಡಿದರು ಎಂದು ಸಿಪಿಐ ಆನಂದ ಗೌಡ ತಿಳಿಸಿದರು.


ಜಕ್ಕನಹಳ್ಳಿ ಸರ್ಕಲ್‌ನಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು.

ತಾಲೂಕಿನ ಜಕ್ಕನಹಳ್ಳಿ ಸರ್ಕಲ್‌ನಲ್ಲಿ ಜಕ್ಕನಹಳ್ಳಿ ಗ್ರಾಪಂ ವ್ಯಾಪ್ತಿಯ ಕೆಂಪೇಗೌಡರ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು 500 ವರ್ಷಗಳ ಹಿಂದೆಯೇ ಬೆಂಗಳೂರು ನಗರ ಕಟ್ಟಿದರು. ಅಲ್ಲದೆ ಎಲ್ಲಾ ವರ್ಗದ ಜನರು ವಹಿವಾಟು ನಡೆಸಿ ಜೀವನ ನಡೆಸಲು ಪೇಟೆಗಳನ್ನು ನಿರ್ಮಾಣ ಮಾಡಿದರು. ಜನರ ಸುರಕ್ಷತೆಗಾಗಿ ಹೆಬ್ಬಾಗಿಲುಗಳನ್ನು ನಿರ್ಮಾಣ ಮಾಡಿ ಅಲ್ಲಿಗೆ ಕಾವಲುಗಾರರನ್ನು ನೇಮಿಸಿದ್ದರು. ಅಲ್ಲದೆ ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಿ ಕೃಷಿ, ಕುಡಿಯುವ ನೀರಿಗೆ ಆದ್ಯತೆ ನೀಡಿದ ಕೆಂಪೇಗೌಡರನ್ನು ನಿತ್ಯ ಸ್ಮರಿಸುವ ಜೊತೆಗೆ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಮುಖಂಡ ಜವರಪ್ಪ ಮಾತನಾಡಿ, ವಿಜಯನಗರ ಸಾಮ್ರಾಜ್ಯದ ಸಾಮಂತರಾಜರಾಗಿದ್ದ ಕೆಂಪೇಗೌಡರು ವಿಜಯನಗರದ ಸಾಮ್ರಾಜ್ಯದ ವೈಭವ ಕಣ್ತುಂಬಿಕೊಂಡು ಇದೇ ರೀತಿ ನಮ್ಮ ಸಾಮ್ರಾಜ್ಯ ನಿರ್ಮಿಸಬೇಕು ಎಂದು ಕನಸು ಕಂಡು ಬೆಂಗಳೂರು ನಗರ ಕಟ್ಟಿದರು. ಇಂದು ಬೆಂಗಳೂರು ನಗರ ಪ್ರಪಂಚದಾದ್ಯಂತ ಹೆಸರು ಗಳಿಸಿದೆ ಎಂದರು.

ಕಾರ್ಯಕ್ರಮದ ಬಳಿಕ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಇದಕ್ಕೂ ಮುನ್ನ ಕೆಂಪೇಗೌಡರ ಭಾವಚಿತ್ರವನ್ನು ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭ ಜಕ್ಕನಹಳ್ಳಿ ಗ್ರಾಪಂ ವ್ಯಾಪ್ತಿಯ ಎಲ್ಲಾ ಕೆಂಪೇಗೌಡರ ಅಭಿಮಾನಿಗಳು, ಸಮುದಾಯ ಮುಖಂಡರು ಭಾಗವಹಿಸಿದ್ದರು.

ಎಸ್‌ಐಆರ್ ಬಗ್ಗೆ ಕಾಂಗ್ರೆಸ್‌ನಿಂದ ಅಪಪ್ರಚಾರ

ಮಾಜಿ ಸಚಿವ ಎನ್.ಮಹೇಶ್ ಆರೋಪ

ಕೆ.ಆರ್.ಪೇಟೆ, ಜೂ.29– ಭಾರತೀಯ ಚುನಾವಣಾ ಆಯೋಗದಿಂದ 1962 ರಿಂದ ಪ್ರತಿ 10 ವರ್ಷಕ್ಕೊಮ್ಮೆ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ನಡೆಯುತ್ತಿದೆ. ಆಗ ಇಲ್ಲದ ವಿರೋಧವನ್ನು ಕಾಂಗ್ರೆಸ್ ಪಕ್ಷ ಈಗ ಮಾಡುತ್ತಿದ್ದು, ಕಳ್ಳ ಮತದಾನದಿಂದ ಗೆಲ್ಲುತ್ತಾ ಬಂದಿದ್ದ ಕಾಂಗ್ರೆಸ್‌ಗೆ ಸೋಲಿನ ಆತಂಕ ಆರಂಭವಾಗಿದೆ. ಹೀಗಾಗಿ ಎಸ್‌ಐಆರ್ ಬಗ್ಗೆ ಅಪಪ್ರಚಾರ ಮಾಡುತ್ತಿದೆ ಎಂದು ಮಾಜಿ ಸಚಿವ ಎನ್.ಮಹೇಶ್ ಆರೋಪಿಸಿದರು.


ಕಾರ್ಯಾಗಾರವನ್ನು ಮಾಜಿ ಶಾಸಕ ಪ್ರೀತಂಗೌಡ ಮತ್ತು ಗಣ್ಯರು ಉದ್ಘಾಟಿಸಿದರು.

ತಾಲೂಕು ಬಿಜೆಪಿ ವತಿಯಿಂದ ಪಟ್ಟಣದ ಶ್ರೀಮತಿ ನಂಜಮ್ಮ ಮುದ್ದೇಗೌಡ ಸಮುದಾಯ ಭವನದಲ್ಲಿ ಎಸ್‌ಐಆರ್ ಕುರಿತು ಬೂತ್ ಮಟ್ಟದ ಪ್ರತಿನಿಧಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮತದಾರರ ಪಟ್ಟಿ ಪರಿಷ್ಕರಣೆಯನ್ನು ಯಾವುದೇ ಪಕ್ಷ ಮಾಡುವುದಿಲ್ಲ. ಬದಲಿಗೆ ಭಾರತೀಯ ಚುನಾವಣಾ ಆಯೋಗ ಮಾಡುತ್ತಾ ಬಂದಿದೆ. ನಮ್ಮ ಬೂತ್ ಮಟ್ಟದ ಏಜೆಂಟ್‌ಗಳು ಮನೆ ಮನೆಗೆ ತೆರಳಿ ಹೊಸ ಮತದಾರರ ಸೇರ್ಪಡೆ, ಸ್ಥಳಾಂತರಗೊಂಡವರ ಹೆಸರು ತೆಗೆಯುವುದು, ಮೃತಪಟ್ಟವರ ಹೆಸರು ಕೈ ಬಿಡುವುದು, ತಿದ್ದುಪಡಿ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡಬೇಕು. ಒಬ್ಬನೇ 2 ಕಡೆ ಮತದಾರರಾಗಿರುವುದು, ನಕಲಿ ಮತದಾರರನ್ನು ಪತ್ತೆ ಹಚ್ಚಿ ತೆಗೆಸಬೇಕು ಎಂದರು.

ಕಾರ್ಯಾಗಾರ ಉದ್ಘಾಟಿಸಿ ಮಾಜಿ ಶಾಸಕ ಪ್ರೀತಂಗೌಡ ಮಾತನಾಡಿ, ಕೆ.ಆರ್.ಪೇಟೆಗೆ ಬಂದು ಯಾರೇ ಏನೇ ಹೇಳಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಯಲ್ಲಿ ನಮ್ಮ ಪಕ್ಷದ ಮೂವರು ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ. ಹೀಗಾಗಿ ಯಾರ ಮಾತಿಗೂ ಕಿವಿಗೊಡಬೇಡಿ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು 2028ರ ಚುನಾವಣೆಗೆ ಮೈತ್ರಿ ಅಭ್ಯರ್ಥಿ ಕೆ.ಸಿ.ನಾರಾಯಣಗೌಡರಿಗೆ ಬಿ.ಫಾರಂ ಕೊಟ್ಟ ನಂತರವೇ ಅವರು ಶಿಕಾರಿಪುರ ಬಿ.ಫಾರಂ ತೆಗೆದುಕೊಂಡು ಹೋಗಿ ಚುನಾವಣೆಗೆ ಸ್ಪರ್ಧೆ ಮಾಡುತ್ತಾರೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಅಲ್ಲದೇ ತಾಲೂಕಿನ ಮಣ್ಣಿನ ಮಗ ಬಿ.ವೈ.ವಿಜಯೇಂದ್ರ ಮುಖ್ಯಮಂತ್ರಿ ಆಗುತ್ತಾರೆ. ಕೆ.ಸಿ.ನಾರಾಯಣಗೌಡ ಶಾಸಕರಾಗಿ, ಸಚಿವರಾಗುತ್ತಾರೆ. ಹೀಗಾಗಿ ಕಾರ್ಯಕರ್ತರು ಮುಂಬರುವ ಗ್ರಾಪಂ, ತಾಪಂ, ಜಿಪಂ ಹಾಗೂ ಪುರಸಭಾ ಚುನಾವಣೆಗೆ ಸಿದ್ದರಾಗಬೇಕು. 20 ದಿನಗಳ ಬಳಿಕ ಮತ್ತೆ ಬರುತ್ತೇನೆ. ತಾಲೂಕಿನಲ್ಲಿ ಒಂದು ಸುತ್ತು ಪ್ರಚಾರ ಮಾಡಿ ಪಕ್ಷ ಸಂಘಟಿಸೋಣ ಎಂದರು.

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿದರು. ಬಿಜೆಪಿ ರಾಜ್ಯ ಸಂಯೋಜಕ ದತ್ತಾತ್ರೇಯ ಎಸ್‌ಐಆರ್ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮಾಜಿ ನಿಗಮ ಮಂಡಳಿ ಅಧ್ಯಕ್ಷ ಶರಣು ತಳ್ಳಿಕೇರಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಇಂದ್ರೇಶ್, ಪ್ರಧಾನ ಕಾರ್ಯದರ್ಶಿ ಆನಂದ್, ಮೈಸೂರು ವಿವಿ ಮಾಜಿ ಸೆನೆಟ್ ಸದಸ್ಯ ಡಾ.ಈ.ಸಿ.ನಿಂಗರಾಜು, ಅಶ್ವಿನಿ, ಸ್ವಾಮಿ, ಮೂಡ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾ ಉಪಾಧ್ಯಕ್ಷ ಕೆ.ಎಸ್.ಪ್ರಭಾಕರ್, ತಾಲೂಕು ಬಿಜೆಪಿ ಅಧ್ಯಕ್ಷ ನಾಗಣ್ಣ, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಶಿಲ್ಪ, ಪುರಸಭಾ ಸದಸ್ಯರಾದ ಬಸ್ ಸಂತೋಷ್ ಕುಮಾರ್, ಹೆಚ್.ಆರ್.ಲೋಕೇಶ್, ಮನ್‌ಮುಲ್ ಮಾಜಿ ನಿರ್ದೇಶಕ ಕೆ.ಜಿ.ತಮ್ಮಣ್ಣ, ಪುಟ್ಟಣ್ಣ, ವಿಶ್ವನಾಥ್, ಪ್ರವೀಣ್, ದಯಾನಂದ್ ಸೇರಿದಂತೆ ಇನ್ನಿತರರಿದ್ದರು.

ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳಿಗೆ ಅರ್ಜಿ ಆಹ್ವಾನ

ಮಂಡ್ಯ, ಜೂ.29– ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳಿಗೆ ನೇಮಕಾತಿ ಮಾಡುವ ಸಂಬಂಧ ಸ್ಪರ್ಧಾತ್ಮಕ ಪರೀಕ್ಷೆ ಆಯೋಜಿಸಲಿದ್ದು ನೇಮಕಾತಿ ಪರೀಕ್ಷೆಗೆ ಆನ್‌ಲೈನ್ ಮುಖಾಂತರ ಅರ್ಜಿಯನ್ನು http://cetonline.karnataka.gov.in/kea/ ವೆಬ್‌ಸೈಟ್‌ನಲ್ಲಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜು.3 ರಂದು ಕೊನೆ ದಿನ. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ದೂ: 08232–220126, 9164642684, 9113500761, 9741939716 ಮತ್ತು 9113875775 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ವಿದ್ಯುತ್ ಖಾಸಗೀಕರಣ ಮಾಡಲ್ಲ

ಪ್ರಶ್ನೆಯೇ ಇಲ್ಲ ಎಂದರು. ಟಾಟಾ ಪವರ್ ಕಂಪನಿ ಕರ್ನಾಟಕ ದಲ್ಲಿ ವಿದ್ಯುತ್ ಸರಬರಾಜು (ವಿತರಣೆ) ಪರವಾನಗಿ ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ಕ್ಕೆ ಅರ್ಜಿ ಸಲ್ಲಿಸಿರುವ ಕುರಿತು ಪ್ರತಿಕ್ರಿಯಿಸಿದ ಸಚಿವರು, ಇಂಧನ ಇಲಾಖೆ ಬಲಿಷ್ಠವಾಗಿದೆ. ನಮ್ಮ ಸರ್ಕಾರ ನೌಕರರ ಪರವಾಗಿದೆ. ಖಾಸಗೀಕರಣ ವಿಚಾರಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನ ನೀಡಲಾಗಿದ್ದು, ಅದರಂತೆ ಎಸ್ಕಾಂಗಳು ಕೆಇಆರ್‌ಸಿ ಮುಂದೆ ಆಕ್ಷೇಪಣೆ ಸಲ್ಲಿಸಿವೆ.

ನಾವು ಯಾವುದೇ ಖಾಸಗಿ ಕಂಪನಿಗೆ ಕಡಿಮೆ ಇಲ್ಲ, ನೌಕರರು ಮತ್ತು ಅಧಿಕಾರಿಗಳ ಬೇಡಿಕೆಗಳಿಗೆ ಸ್ಪಂದಿಸಲಿದ್ದೇವೆ. ಮುಂದಿನ ದಿನಗಳಲ್ಲಿ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಜರುಗಿಸಲಾಗುವುದು. ನಾವೆಲ್ಲಾ ರಾಜ್ಯದ ಸೇವೆ ಮಾಡಲು ಬಂದವರು. ಇಲ್ಲಿ ಖಾಸಗೀಕರಣ ವಿಚಾರ ಬರುವುದಿಲ್ಲ. ಇಂಧನ ಇಲಾಖೆ ಈಗಾಗಲೇ ದೂರದೃಷ್ಟಿ ಯೋಜನೆಗಳನ್ನು ಸಿದ್ಧಪಡಿಸಿದೆ. ಮುಂದಿನ 25 ವರ್ಷಗಳಿಗೆ ವಿದ್ಯುತ್ ಭದ್ರತೆ ಒದಗಿಸಲು ಯೋಜನೆ ಸಿದ್ಧವಾಗಿದೆ. ರೈತರ ಜೊತೆ 10,000 ಎಕರೆಯಲ್ಲಿ ಸೌರ ಪಾರ್ಕ್ ಮಾಡಿದ್ದೇವೆ. ರೈತರು ಇನ್ನೂ 10,000 ಎಕರೆ ಕೊಡಲು ಮುಂದೆ ಬಂದಿದ್ದಾರೆ. ವಿದ್ಯುತ್ ಉತ್ಪಾದನೆ ಅತ್ಯುತ್ತಮವಾಗಿದೆ. ಪೀಕ್ ಅವರ್ ವಿದ್ಯುತ್ ಮಾರಾಟ ಹೆಚ್ಚಿಸಿರುವುದರಿಂದ ಇಲಾಖೆಗೆ ಲಾಭವಾಗಿದೆ. ವಿನಿಮಯ ಆಧಾರದ ಮೇಲೆ ವಿದ್ಯುತ್ ಪಡೆಯುವುದು ಮತ್ತು ದೀರ್ಘಾವಧಿ ಒಪ್ಪಂದಗಳ ಹಾಗೂ ವಿದ್ಯುತ್ ಖರೀದಿ ಮೂಲಕ ಇಂಧನ ಭದ್ರತೆಗೆ ಕ್ರಮ ವಹಿಸಲಾಗಿದೆ.

ಗೃಹಜ್ಯೋತಿ ಮೂಲಕ 1.67 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ಕೊಟ್ಟಿದ್ದೇವೆ. ಇದಕ್ಕೆ ಬಜೆಟ್‌ನಲ್ಲೇ ಅನುದಾನ ನೀಡಲಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಸಲು 21,000 ಕೋಟಿ ರೂ. ಅನುದಾನ ಕೊಡುತ್ತಿದ್ದೇವೆ.

ನಮ್ಮ ಅಧಿಕಾರಿಗಳು, ಇಂಜಿನಿಯರ್ ಮತ್ತು ನೌಕರರು ತಂಡವಾಗಿ ಕೆಲಸ ಮಾಡುತ್ತಿದ್ದಾರೆ. ಯಾವುದೇ ಸಮಸ್ಯೆ ಎದುರಾದರೆ ಶೀಘ್ರವೇ ಪರಿಹಾರ ನೀಡಲಿದ್ದಾರೆ. ಇಂಧನ ಇಲಾಖೆಯ ಮೂಲಸೌಕರ್ಯ ಹೆಚ್ಚಿಸುವ ಕಾರ್ಯ ವೇಗವಾಗಿ ನಡೆಯುತ್ತಿದೆ. 120 ವಿದ್ಯುತ್ ಉಪಕೇಂದ್ರ ಸ್ಥಾಪಿಸಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಯೋಜನೆಗಳು ಜಾರಿಯಾಗಲಿವೆ. ಆ ಮೂಲಕ ವಿದ್ಯುತ್ ಪೂರೈಕೆ ಸಮರ್ಪಕಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದರು.

ನಿತ್ಯಾನಂದ ಹತ್ಯೆ ಪೂರ್ವ ನಿಯೋಜಿತವೇ...!?

ಪೊಲೀಸರು ವಶಪಡಿಸಿಕೊಂಡಿದ್ದಾರೆಂದು ತಿಳಿದುಬಂದಿದೆ.

ಸಿನಿಮೀಯ ಕತೆ ಹೆಣೆದ ಸುಶೀಲಾ: ಭಾನುವಾರ ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ನಿತ್ಯಾನಂದ ಅವರು ಜೊಮೋಟೋದಲ್ಲಿ ಫುಡ್ ಆರ್ಡರ್ ಮಾಡಿದ್ದು, ಅದನ್ನು ಸುಶೀಲಾ ಒಳಗೆ ತೆಗೆದುಕೊಂಡು ಹೋಗಿದ್ದನ್ನು ನೆರೆಹೊರೆಯವರು ಗಮನಿಸಿದ್ದಾರೆ. ಮುಂಜಾನೆ ಸುಮಾರು 5.30ರ ವೇಳೆಗೆ ಈ ಹಿಂದೆ ಎದುರು ಮನೆಯಲ್ಲಿದ್ದ ಸದ್ಯ ಬೇರೆ ಕಡೆಗೆ ಸ್ಥಳಾಂತರಗೊಂಡಿರುವ ಪರಿಚಯಸ್ಥರಿಗೆ ಕರೆ ಮಾಡಿ, ನನ್ನ ಪತಿ ಎಚ್ಚರಗೊಳ್ಳುತ್ತಿಲ್ಲ ಎಂದು ಆತಂಕದಲ್ಲಿ ತಿಳಿಸಿದ್ದಾರೆ. ಕೂಡಲೇ ಪರಿಚಿತ ದಂಪತಿ ಧಾವಿಸಿದ್ದಾರೆ.

ಈ ವೇಳೆ ಏನಾಯಿತು ಎಂದು ವಿಚಾರಿಸಿದಾಗ ಕೆಲ ದಿನಗಳ ಹಿಂದೆ ಎದೆನೋವು ಬಂದಿತ್ತು, ಆಗ ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದೆ. ಇಂದು ಮುಂಜಾನೆ ಸುಮಾರು ಮೂರೂವರೆ ಗಂಟೆ ಸಮಯದಲ್ಲಿ ಎದೆ ನೋವು ಎಂದರು. ಕೂಡಲೇ ನಾನು ಕಾಮಾಕ್ಷಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆದರೆ, ಮದ್ಯಪಾನ ಮಾಡಿರುವುದರಿಂದ ಈಗ ಚಿಕಿತ್ಸೆ ನೀಡಲಾಗದು, ಬೆಳಗ್ಗೆ ಕರೆದುಕೊಂಡು ಬನ್ನಿ ಎಂದರು. ಆದರೆ, ಈಗ ಎಚ್ಚರಗೊಳ್ಳುತ್ತಿಲ್ಲ ಎಂದು ಸುಳ್ಳು ಕತೆ ಹೇಳಿ ನಂಬಿಸಿದ್ದಾಳೆ.

ಕತ್ತಿನವರೆಗೂ ಬಟ್ಟೆ ಮುಚ್ಚಿದ್ದಳು: ವಿಷಯ ತಿಳಿದ ನಿತ್ಯಾನಂದ ಅವರ ಸಹೋದರ ಕೆಸ್‌ಓಯು ಕುಲಸಚಿವ ನವೀನ್‌ಕುಮಾರ್ ಬೆಳಗ್ಗೆ ಸುಮಾರು 8.30ರ ವೇಳೆಗೆ ಆಗಮಿಸಿದ್ದಾರೆ. ಆಗಲೂ ಶಿಕ್ಷಕಿ ಸುಶೀಲಾ ಇದೇ ಕಟ್ಟು ಕತೆ ಹೇಳಿದ್ದಾಳೆ. ನಿತ್ಯಾನಂದ ಅವರ ಕತ್ತು ಪೂರ್ಣ ಮುಚ್ಚುವಂತೆ ಬಟ್ಟೆ ಹೊದಿಸಿದ್ದರಿಂದ ಎಲ್ಲರೂ ಹೃದಯಾಘಾತದ ಕತೆಯನ್ನೇ ನಂಬಿದ್ದರು. ಆದರೆ, ಮೃತದೇಹವನ್ನು ಕೊಠಡಿಯಿಂದ ಹಾಲ್‌ಗೆ ಸ್ಥಳಾಂತರಿಸುವಾಗ ಕೆನ್ನೆಯಲ್ಲಿ ತರಚಿತ ಗಾಯ ಹಾಗೂ ಕತ್ತಿನಲ್ಲಿ ಯಾವುದೋ ವಸ್ತುವಿನಿಂದ ಬಿಗಿದ ಗುರುತು ಕಾಣಿಸಿದೆ. ಇದರೊಂದಿಗೆ ಸುಶೀಲಾಳ ಘನಘೋರ ಕೃತ್ಯ ಬಯಲಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ಆಕೆಯನ್ನು ತೀವ್ರ ವಿಚಾರಣೆ ನಡೆಸಿದಾಗ ಸೀರೆಯಿಂದ ಬಿಗಿದು ಸಾಯಿಸಿದ್ದು, ನನಗೆ ವ್ಯಕ್ತಿಯೊಬ್ಬ ಸಹಾಯ ಮಾಡಿದ ಎಂದು ಹೇಳಿದ್ದಾಳೆ ಎನ್ನಲಾಗಿದೆ. ಆದರೆ, ಇಬ್ಬರು ಮನೆಯೊಳಗೆ ಹೋಗಿರುವುದು ಸಿಸಿಟಿವಿ ದೃಶ್ಯಾವಳಿಯಲ್ಲಿ ಕಂಡು ಬಂದಿದೆ ಎನ್ನಲಾಗಿದೆ. ಒಟ್ಟಾರೆ ಪತಿಯನ್ನು ಹತ್ಯೆ ಮಾಡಿದ ಸುಶೀಲಾಳ ಸಂಚು, ಅದಕ್ಕೆ ನಿಜವಾದ ಕಾರಣವೇನು ಎಂಬುದು ತನಿಖೆಯಲ್ಲಿ ಹೊರಬೀಳಬೇಕಿದೆ.

ಪತಿಯ ಕೊಂದು ಹೃದಯಾಘಾತದ ಕತೆ ಕಟ್ಟಿದ ಶಿಕ್ಷಕಿ!

ಕಾರಣಕ್ಕೆ ಕೊಲೆ ಮಾಡಿದ್ದಾರೆ ಎಂಬುದೇ ತಿಳಿಯುತ್ತಿಲ್ಲ ಎಂದು ನೆರೆಹೊರೆಯವರು ಮಾತನಾಡಿಕೊಳ್ಳುತ್ತಿದ್ದರು.

ಹೃದಯಾಘಾತದ ಕತೆ: ಕಳೆದ ರಾತ್ರಿ ಮದ್ಯಪಾನ ಮಾಡಿ ಬಂದ ನಿತ್ಯಾನಂದ ಮತ್ತು ಸುಶೀಲಾ ನಡುವೆ ಜಗಳವಾಗಿದೆ. ಕೆಲ ಸಮಯದ ನಂತರ ಇಬ್ಬರೂ ಸಮಾಧಾನಗೊಂಡು ಮಲಗಿದ್ದಾರೆ. ಆದರೆ, ಮದ್ಯರಾತ್ರಿ ಬಟ್ಟೆಯಿಂದ ಕತ್ತು ಬಿಗಿದು ಪತಿ ನಿತ್ಯಾನಂದ ಅವರನ್ನು ಸುಶೀಲಾ ಕೊಲೆ ಮಾಡಿದ್ದಾರೆ. ಬಳಿಕ ತನ್ನ ದುಷ್ಕೃತ್ಯವನ್ನು ಮುಚ್ಚಿ ಹಾಕಲು ಹೃದಯಾಘಾತದ ಕತೆ ಹೆಣೆದಿದ್ದಾರೆ. ಮೃತ ನಿತ್ಯಾನಂದ ಅವರ ಸಹೋದರ ನವೀನ್ ಅವರಿಗೆ ಕರೆ ಮಾಡಿದ ಸುಶೀಲಾ, ಮದ್ಯರಾತ್ರಿ 2 ಗಂಟೆಯಲ್ಲಿ ಹೃದಯಾಘಾತವಾಗಿ ನಿಮ್ಮ ತಮ್ಮ ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ. ಬಳಿಕ ಕೆಲ ಸಂಬಂಧಿಕರು ಹಾಗೂ ಸ್ನೇಹಿತರಿಗೂ ಕರೆ ಮಾಡಿ, ಹೀಗೆಯೇ ಹೇಳಿದ್ದಾರೆ. ವಿಷಯ ತಿಳಿದು ಕೆಲ ಆಪ್ತರು ಮುಂಜಾನೆ ನಿತ್ಯಾನಂದ ಅವರ ಮನೆ ಬಳಿ ಧಾವಿಸಿದ್ದಾರೆ. ಅಲ್ಲದೆ, ನೆರೆಹೊರೆಯವರು ಕೂಡ ಹೃದಯಾಘಾತದಿಂದಲೇ ನಿತ್ಯಾನಂದ ಮೃತಪಟ್ಟಿದ್ದಾರೆಂದು ತಿಳಿದು ರೋಧಿಸುತ್ತಿದ್ದ ಸುಶೀಲಾ ಅವರನ್ನು ಸಂತೈಸಿದ್ದಾರೆ.

ಕುತ್ತಿಗೆಯಲ್ಲಿ ಕಲೆ: ಸುದ್ದಿ ತಿಳಿದು ಮನೆ ಬಳಿ ಬಂದ ಸಂಬಂಧಿಕರು, ಸ್ನೇಹಿತರು ದುಃಖಿಸುತ್ತಿದ್ದರು. ಬೆಳಗ್ಗೆ 8.30ರ ವೇಳೆಗೆ ನಿತ್ಯಾನಂದ ಅವರ ಸಹೋದರ, ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಕುಲಸಚಿವ ನವೀನ್‌ಕುಮಾರ್ ಹಾಗೂ ಕೆಲ ಸಂಬಂಧಿಕರು ಆಗ ಮಿಸಿದ್ದಾರೆ. ಆವರೆಗೂ ರೂಮ್‌ನಲ್ಲಿದ್ದ ನಿತ್ಯಾನಂದ ಅವರ ದೇಹವನ್ನು ಮನೆಯ ಹಾಲ್‌ಗೆ ಸ್ಥಳಾಂತರಿಸುವಾಗ ಕತ್ತಲ್ಲಿ ಬಿಗಿದ ಕಲೆ, ಕೆನ್ನೆ ಮೇಲೆ ಗೀರಿದ ಗಾಯ, ರಕ್ತದ ಕಲೆ ಕಂಡು ಬಂದಿದೆ. ಇದರಿಂದ ಅನುಮಾನಗೊಂಡ ಸುಶೀಲಾ ಅವರನ್ನು ವಿಚಾರಿಸಿದ್ದಾರೆ. ಆಗಲೂ ಸುಶೀಲ ಅವರು ಹೃದಯಾಘಾತದ ಕತೆಯನ್ನೇ ಹೇಳಿದ್ದಾರೆ. ಮದ್ಯರಾತ್ರಿ 2 ಗಂಟೆಗೆ ಹೃದಯಾಘಾತವಾಯಿತು, ತಕ್ಷಣವೇ ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ದೆ. ಇವರು ಮದ್ಯಪಾನ ಮಾಡಿದ್ದರಿಂದ ವೈದ್ಯರು ಆಸ್ಪತ್ರೆಗೆ ದಾಖಲಿಸಿಕೊಳ್ಳಲು ನಿರಾಕರಿಸಿದರು. ಆದರೆ ಪರೀಕ್ಷಿಸಿ, ಅದಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದರಿಂದ ವಾಪಸ್ಸಾಗಿದ್ದಾಗಿ ತಿಳಿಸಿದ್ದಾರೆ. ಸುಶೀಲಾ ಅವರ ಮಾತುಗಳು ಅನುಮಾನಾಸ್ಪದವಾಗಿದ್ದ ಕಾರಣ ಸಂಬಂಧಿಕರು ಕುವೆಂಪುನಗರ ಪೊಲೀಸರಿಗೆ ವಿಷಯ ತಿಳಿಸಿದರು.

> **ನಿರಂತರ ಜಗಳದಿಂದ ಬೇಸತ್ತು ಕೊಲೆ**
> ದಂಪತಿ ನಡುವೆ ನಿತ್ಯ ನಡೆಯುತ್ತಿದ್ದ ಜಗಳವೇ ಕೊಲೆಗೆ ಕಾರಣ ಎಂದು ಆರೋಪಿ ಸುಶೀಲಾ ಹೇಳಿದ್ದಾರೆ. ಬೆಡ್‌ಶೀಟ್ ಮಾದರಿ ಬಟ್ಟೆಯಲ್ಲಿ ಕುತ್ತಿಗೆ ಬಿಗಿದು ಕೊಲೆ ಮಾಡಿರುವುದಾಗಿ ತಿಳಿಸಿದ್ದಾರೆ. ಆರೋಪಿಯನ್ನು ಬಂಧಿಸಿ, ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಈ ಕೃತ್ಯದಲ್ಲಿ ಬೇರೆ ಯಾರಾದರೂ ಭಾಗಿಯಾಗಿದ್ದಾರಾ, ಕೊಲೆಗೆ ಬೇರೆ ಯಾವುದಾದರೂ ಕಾರಣ ಇದೆಯಾ, ಹೀಗೆ ವಿವಿಧ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದೆ. -ಡಾ.ಹರ್ಷ ಪ್ರಿಯಂವದ, ಡಿಸಿಪಿ

ಮಹಜರು ನಡೆಸಿದ ಪೊಲೀಸರು: ವಿಷಯ ತಿಳಿದು ಮನೆಗೆ ಧಾವಿಸಿದ ಕುವೆಂಪುನಗರ ಪೊಲೀಸರು, ಮನೆಯಲ್ಲಿದ್ದ ಮೃತದೇಹವನ್ನು ಪರಿಶೀಲಿಸಿದರು. ಈ ವೇಳೆ ನಿತ್ಯಾನಂದ ಕತ್ತಿನ ಕಲೆಯನ್ನು ಗಮನಿಸಿದಾಗ ಹತ್ಯೆ ಶಂಕೆ ವ್ಯಕ್ತವಾಗಿದೆ. ಕೂಡಲೇ ಸುಶೀಲ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಪ್ರಾಥಮಿಕ ವಿಚಾರಣೆ ವೇಳೆ ಸುಶೀಲಾ ಅವರು ತಾನೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡರೆಂದು ಮೂಲಗಳು ತಿಳಿಸಿವೆ.

ಕ್ರೈಮ್ ತಂಡದಿಂದ ಪರಿಶೀಲನೆ: ಅಪರಾಧ ವಿಭಾಗದ ತಂಡ ಮಹಜರು ವೇಳೆ ಕೃತ್ಯದ ಬಗ್ಗೆ ಸುಶೀಲಾಳ ವಿಚಾರಣೆ ನಡೆಸಿದ್ದಾರೆ. ಅಲ್ಲದೆ, ಕೃತ್ಯದ ಮರುಸೃಷ್ಟಿ ಮೂಲಕ ಮಾಹಿತಿ ಸಂಗ್ರಹಿಸಿ, ಸಾಕ್ಷ್ಯ ಸಂಗ್ರಹಿಸಿಕೊಂಡ ಬಳಿಕ ಮೃತದೇಹವನ್ನು ಮೈಸೂರು ಸರ್ಕಾರಿ ವೈದ್ಯಕೀಯ ಕಾಲೇಜಿನ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು.

ಅಂತ್ಯಕ್ರಿಯೆಗೆ ಸಜ್ಜಾಗಿದ್ದರು: ನಿತ್ಯಾನಂದ ಅವರ ಸಾವಿನ ಸುದ್ದಿ ತಿಳಿದು ಮನೆ ಬಳಿ ಆಗಮಿಸಿದ್ದ ಸಂಬಂಧಿಕರು, ಸ್ನೇಹಿತರು, ಹಾಗೂ ಸ್ಥಳೀಯರು ಮೃತದೇಹಕ್ಕೆ ಹಾಕಲೆಂದು ಹೂವು, ಹಾರ ತಂದಿದ್ದರು. ಅಲ್ಲದೆ, ಅಂತ್ಯಕ್ರಿಯೆಗೂ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ, ಪೊಲೀಸರ ಆಗಮನದೊಂದಿಗೆ ಸನ್ನಿವೇಶವೇ ಬದಲಾಯಿತು. ನಿತ್ಯಾನಂದ ಅವರು ಹೃದಯಾಘಾತದಿಂದ ಸಾವನ್ನಪ್ಪಿಲ್ಲ, ಅವರನ್ನು ಪತ್ನಿಯೇ ಹತ್ಯೆ ಮಾಡಿದ್ದಾರೆಂದು ತಿಳಿದು ಆಕೆಗೆ ಹಿಡಿಶಾಪ ಹಾಕಿದರು. ತಂದಿದ್ದ ಹೂವು, ಹಾರವನ್ನೆಲ್ಲಾ ಅವರ ಮನೆಯ ಕಾಂಪೌಂಡ್ ಮೇಲೆ ನೇತು ಹಾಕಿದರು.

ಸ್ಥಳಕ್ಕೆ ಡಿಸಿಪಿಗಳಾದ ಡಾ.ಹರ್ಷ ಪ್ರಿಯಂವದ, ಕೆ.ಎಸ್.ಸುಂದರ್‌ರಾಜ್, ಎಸಿಪಿ ಪ್ರಕಾಶ್, ಇನ್ಸ್‌ಪೆಕ್ಟರ್‌ಗಳಾದ ರೋಹಿತ್, ಧನರಾಜ್ ಹಾಗೂ ಇನ್ನಿತರ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು. ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್ ಉರುಳಿ ಇಬ್ಬರು ಸಾವು

ಬಸ್ಸು ರಸ್ತೆ ಬದಿಯ ಫಲಕಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ಫಲಕದ ಕಬ್ಬಿಣದ ಚೂರು ಟೈರ್‌ಗೆ ಚುಚ್ಚಿ ಅದು ಸ್ಫೋಟಗೊಂಡ ಕಾರಣ ಬಸ್ಸು ಉರುಳಿ ಬಿದ್ದು ಈ ದುರಂತ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಸ್ ಪಲ್ಟಿಯಾದ ಸಂದರ್ಭದಲ್ಲಿ ಪುಟ್ಟನಂಜಮ್ಮ ಮತ್ತು ಮಹೇಶ್ ಅವರುಗಳು ಸ್ಥಳದಲ್ಲಿಯೇ ಸಾವನ್ನಪ್ಪಿ, ಹಲವರು ಗಾಯಗೊಂಡು ಸಹಾಯಕ್ಕಾಗಿ ಚೀರಾಡಲಾರಂಭಿಸಿದರು. ಈ ವೇಳೆ ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಕೊಳ್ಳೆಗಾಲ ಗ್ರಾಮಾಂತರ ಪೊಲೀಸರು ಸಾರ್ವಜನಿಕರ ಸಹಾಯದಿಂದ ಗಾಯಗೊಂಡು ನರಳುತ್ತಿದ್ದವರನ್ನು ಕೊಳ್ಳೆಗಾಲ ಆಸ್ಪತ್ರೆಗೆ ಸಾಗಿಸಿದರು. ಸಣ್ಣ–ಪುಟ್ಟ ಗಾಯಾಳುಗಳಿಗೆ ಕೊಳ್ಳೆಗಾಲ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಗಂಭೀರವಾಗಿ ಗಾಯಗೊಂಡವರನ್ನು ಆಂಬುಲೆನ್ಸ್ ಮೂಲಕ ಚಾಮರಾಜನಗರ ಮತ್ತು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಯಿತು.

ದುರಂತದ ವಿಷಯ ತಿಳಿದು ಸಾರ್ವಜನಿಕರು ಕುತೂಹಲದಿಂದ ಅಪಾರ ಸಂಖ್ಯೆಯಲ್ಲಿ ನೆರೆದಿದ್ದರಿಂದ ರಸ್ತೆ ಸಂಪೂರ್ಣವಾಗಿ ಬಂದ್ ಆಗಿತ್ತು. ಇದರಿಂದ ಎರಡೂ ಕಡೆ ವಾಹನಗಳು ಸಾಲುಗಟ್ಟಿ ನಿಂತು ಸಂಚಾರ ಅಸ್ತವ್ಯಸ್ತಗೊಂಡು ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಪೊಲೀಸರು ಕ್ರೇನ್ ಸಹಾಯದಿಂದ ಉರುಳಿ ಬಿದ್ದ ಬಸ್ಸನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ವಿಷಯ ತಿಳಿದು ತಹಸೀಲ್ದಾರ್ ಬಸವರಾಜು ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್, ಅಪರ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಮೋಹನ್ ಆಸ್ಪತ್ರೆ ಹಾಗೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಎಸ್ಪಿ ಮುತ್ತುರಾಜ್ ಮಾತನಾಡಿ, ಮಹದೇಶ್ವರ ಬೆಟ್ಟದಿಂದ ಕೊಳ್ಳೇಗಾಲಕ್ಕೆ ಬರುತ್ತಿದ್ದ ಬಸ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ಇಬ್ಬರು ಸಾವನ್ನಪ್ಪಿದ್ದು, ಗಾಯಗೊಂಡಿರುವ 50 ಜನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಗಾಯಾಳು ಸುವರ್ಣಾ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಚಾಲಕ ಅತಿವೇಗವಾಗಿ, ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದಲೇ ಘಟನೆ ಸಂಭವಿಸಿದೆ ಎಂದು ತಿಳಿಸಿದ್ದಾರೆ. ದೂರಿನನ್ವಯ ಚಾಲಕ ರಾಜಶೇಖರ್‌ನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ತನಿಖೆ ಕೈಗೊಂಡಿದ್ದಾರೆ.

ಗುಲ್ಬರ್ಗಾ ಮೈಸ್ಟಿಕ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್‌ಗೆ ಭರ್ಜರಿ ಜಯ

ಹುಬ್ಬಳ್ಳಿ, ಜೂ.29– ಮಾಯಾಂಕ್ ಅಗರ್ವಾಲ್, ಮೊಹಮ್ಮದ್ ತಾಹ ಅವರ ಆಕರ್ಷಕ ಅರ್ಧಶತಕ ಹಾಗೂ ವೈಭವ್ ಶರ್ಮಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಗುಲ್ಬರ್ಗಾ ಮೈಸ್ಟಿಕ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 10 ವಿಕೆಟ್‌ಗಳ ಭರ್ಜರಿ ಜಯ ಗಳಿಸಿದೆ.

ಇಲ್ಲಿನ ಕೆಎಸ್‌ಸಿಎ ಹುಬ್ಬಳ್ಳಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ 15 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 139 ರನ್ ಗಳಿಸಿತು. 140 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಹುಬ್ಬಳ್ಳಿ 12.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 143 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮಳೆ ಹಿನ್ನಲೆಯಲ್ಲಿ ಪಂದ್ಯವನ್ನು 15 ಓವರ್‌ಗಳಿಗೆ ನಿಗದಿಗೊಳಿಸಲಾಯಿತು. ಗುಲ್ಬರ್ಗಾ ಪರ ಇನ್ನಿಂಗ್ಸ್ ಆರಂಭಿಸಿದ ಲೋಚನ್ ಗೌಡ 6 ಹಾಗೂ ಶರತ್ ಬಿ.ಆರ್ 2ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ನಂತರ ಬಂದ ಪ್ರಕಾರ್ ಚತುರ್ವೇದಿ 9, ಮ್ಯಾಕ್ನೀಲ್ ನೊರೊನ್ಹಾ 10 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಭರ್ಜರಿ ಬ್ಯಾಟಿಂಗ್ ಮಾಡಿದ ತಿಪ್ಪಾರೆಡ್ಡಿ 34 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಒಳಗೊಂಡ 51 ರನ್ ಗಳಿಸಿ ರನೌಟಾದರು. ಉಳಿದಂತೆ ಮನೀಶ್ ಪಾಂಡೆ 20 ಎಸೆತಗಳಲ್ಲಿ 35, ಕ್ರಾಂತಿ ಕುಮಾರ್ 12 ರನ್ ಗಳಿಸಿದರು. ಹುಬ್ಬಳ್ಳಿ ಪರ ವೈಭವ್ ಶರ್ಮಾ 3, ಹಾರ್ದಿಕ್ ರಾಜ್, ವಿನಾಯಕ್ ಹೊಳ್ಳ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಗೆಲುವಿನ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ ಪರ ಆರಂಭಿಕರಾದ ಮಹಮ್ಮದ್ ತಾಹ ಹಾಗೂ ಮಯಾಂಕ್ ಅಗರ್ವಾಲ್ ಮೊದಲ ವಿಕೆಟ್ 143 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದು ಕೊಟ್ಟರು. ಇನ್ನಿಂಗ್ಸ್ ಆರಂಭ ದಿಂದಲೂ ಬಿರುಸಿನ ಆಟವಾಡಿದ ಮಯಾಂಕ್ ಅಗರ್ವಾಲ್ 38 ಎಸೆತಗಳಲ್ಲಿ 5 ಸಿಕ್ಸರ್, 8 ಬೌಂಡರಿ ಒಳಗೊಂಡ 81 ಹಾಗೂ ಮೊಹಮ್ಮದ್ ತಾಹ 35 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 57 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ವೈಭವ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬೆಂಗಳೂರು ಬ್ಲಾಸ್ಟರ್ಸ್‌ಗೆ 8 ರನ್ ಜಯ

ಹುಬ್ಬಳ್ಳಿ, ಜೂ.29– ಮಳೆಬಾಧಿತ ಪಂದ್ಯದಲ್ಲಿ ಭುವನ್ ಮೋಹನ್ ರಾಜು ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಕೋಸ್ಟಲ್ ಕಿಂಗ್ಸ್ ಮಂಗಳೂರು ವಿರುದ್ಧ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಡಕ್‌ವರ್ತ್ ಲೂಯಿಸ್ ನಿಯಮದ ಅನ್ವಯ 8 ರನ್‌ಗಳ ಅಮೋಘ ಜಯ ಸಾಧಿಸಿದೆ.

ಇಲ್ಲಿನ ಕೆಎಸ್‌ಸಿಎ ಹುಬ್ಬಳ್ಳಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮತ್ತೊಂದು ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಸ್ಟಲ್ ಕಿಂಗ್ಸ್ ಮಂಗಳೂರು ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 179 ರನ್ ಗಳಿಸಿತು. ತಂಡದ ಪರ ಮುರಳೀಧರ ವೆಂಕಟೇಶ್ 10, ನಿಕಿನ್ ಜೋಸ್ 20, ನಾಯಕ ಕರುಣ್ ನಾಯರ್ 43, ಶ್ರೇಯಸ್ ಗೋಪಾಲ್ 35, ಸೂರಜ್ ಅಹುಜಾ 45, ಸಿದ್ಧಾರ್ಥ ಅಖಿಲ್ 11, ಧೀರಜ್ ಜೆ.ಗೌಡ 6 ರನ್ ಗಳಿಸಿದರು. ಬೆಂಗಳೂರು ಪರ ವಿದ್ವತ್ ಕಾವೇರಪ್ಪ, ಸಮಿತ್ ದ್ರಾವಿಡ್, ಶುಭಾಂಗ್ ಹೆಗ್ಡೆ, ಪ್ರವೀಣ್ ದುಬೆ, ರೋಹನ್ ರಾಜು, ಶ್ರೀವತ್ಸ ಆಚಾರ್ಯ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ನಂತರ 180 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 7 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 68 ರನ್ ಗಳಿಸಿದ್ದ ವೇಳೆ ಮಳೆ ಬಂದ ಕಾರಣ ಡಕ್‌ವರ್ತ್ ಲೂಯಿಸ್ ನಿಯಮದ ಅನ್ವಯ ಬೆಂಗಳೂರು 8ರನ್‌ನಿಂದ ಜಯ ಸಾಧಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಭುವನ್ ಮೋಹನ್ ರಾಜು 31 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ ಅಜೇಯ 50, ರೋಹನ್ ಪಾಟೀಲ್ 17 ರನ್ ಗಳಿಸಿ ಅಜೇಯರಾಗಿ ಉಳಿದರು. ಬೆಂಗಳೂರು ತಂಡದ ಭುವನ್ ಮೋಹನ್ ರಾಜು ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಗೃಹಜ್ಯೋತಿ ರಾಜ್ಯದವರ ಮನೆ ಬೆಳಗಬೇಕು...

ಫಲಾನುಭವಿಗಳು ಎಲ್ಲ ವಿವರಗಳನ್ನು ದಾಖಲಿಸಿ ತಮ್ಮ ಫೋಟೋ ಮತ್ತು ಇತರೆ ಮಾಹಿತಿ ಪರಿಶೀಲಿಸಿ ವಾಪಸ್ ನೀಡಬೇಕು ಆನಂತರ ಯೋಜನೆ ಅವರಿಗೆ ಮುಂದುವರೆಸಲಾಗುವುದು ಎಂದು ತಿಳಿಸಿದರು. ಒಬ್ಬನೇ ವ್ಯಕ್ತಿ ರಾಜ್ಯದ ನಾಲ್ಕಾರು ಕಡೆಗಳಲ್ಲಿ ಅರ್ಜಿ ಹಾಕಿ ಯೋಜನೆಯ ಲಾಭ ಪಡೆಯುತ್ತಿರುವ ಬಗ್ಗೆ ಮಾಹಿತಿಗಳು ಬಂದಿವೆ ಇದು ಸಂಪೂರ್ಣವಾಗಿ ದುರುಪಯೋಗ. ಹೀಗಾಗಿ ಇಂತಹ ಸಂಪರ್ಕಗಳನ್ನು ಕಡಿತಗೊಳಿಸಲಾಗುವುದು ಎಂದರು. ಗೃಹ ಜೋತಿ ಸೇರಿದಂತೆ ಎಲ್ಲ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನ ಮತ್ತು ದುರ್ಬಳಕೆ ತಪ್ಪಿಸಲು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿಶೇಷ ಸಮಿತಿ ರಚಿಸಲಾಗುವುದು ಆ ಸಮಿತಿಗಳ ವರದಿ ಆಧರಿಸಿ ಯೋಜನೆಗಳನ್ನು ಫಲಾನುಭವಿಗಳಿಗೆ ಮುಂದುವರಿಸಲಾಗುವುದು ಎಂದು ತಿಳಿಸಿದರು.

ಶಿಷ್ಯ ವೇತನಕ್ಕೆ ಆಗ್ರಹಿಸಿ ಇಂದು ಮೈಸೂರಲ್ಲಿ ವಿವಿಧ ಸಂಘಟನೆಗಳಿಂದ ಪ್ರತಿಭಟನಾ ಮೆರವಣಿಗೆ

ಮೈಸೂರು,ಜೂ.29(ಜಿಎ)–ಮೈಸೂರು ವಿವಿ ಸಂಶೋಧಕರಿಗೆ ಶಿಷ್ಯ ವೇತನ ನೀಡಬೇಕು ಎಂಬ ಬೇಡಿಕೆ ಸೇರಿದಂತೆ ವಿದ್ಯಾರ್ಥಿಗಳ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿವಿಧ ಸಂಘಟನೆಗಳೊಂದಿಗೆ ಜೂ.30ರಂದು ಪುರಭವನದಿಂದ ಕ್ರಾಫರ್ಡ್ ಹಾಲ್‌ವರೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಂಶೋಧನಾ ವಿದ್ಯಾರ್ಥಿ ಮಾದೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿ ಕುಲಪತಿ ಪ್ರೊ. ಲೋಕನಾಥ್ ಅವರು ದಲಿತ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ. ಇದುವರೆಗೆ ಈ ರೀತಿಯ 96 ಅರ್ಜಿ ಬಂದಿದ್ದು, ವಿವಿಯಲ್ಲಿ ಹಣವಿಲ್ಲ, ಹೀಗಾಗಿ ಎಲ್ಲರಿಗೂ ನೀಡಲು ಸಾಧ್ಯವಿಲ್ಲ ಎನ್ನುತ್ತಿದ್ದಾರೆ. ಕೇವಲ 20 ಮಂದಿಗೆ ಮಾತ್ರ ನೀಡಲು ಮುಂದಾಗಿದ್ದಾರೆ. ಇದರಿಂದಾಗಿ ಇತರೆ ಸಂಶೋಧನಾ ವಿದ್ಯಾರ್ಥಿಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದರು.

ಅಂದಿನ ಪ್ರತಿಭಟನ ಮೆರವಣಿಗೆಯಲ್ಲಿ ವಿವಿಧ ಸಂಘಟನೆಗಳ ಸುಮಾರು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ. ಪುರಭವನದಿಂದ ಹೊರಡುವ ಪ್ರತಿಭಟನಾ ಮೆರವಣಿಗೆ ವಿವಿಧ ರಸ್ತೆ ಮೂಲಕ ಸಾಗಿ ಕೊನೆಗೆ ಕ್ರಾಫರ್ಡ್ ಭವನ ತಲುಪಿ ಕುಲಪತಿಗಳಿಗೆ ಹಕ್ಕೊತ್ತಾಯ ಮಂಡಿಸಲಿದೆ. ಕಳೆದ 15 ದಿನಗಳಿಂದ ಕ್ರಾಫರ್ಡ್ ಭವನದ ಎದುರು ಈ ನಿಟ್ಟಿನಲ್ಲಿ ನಡೆಸುತ್ತಿರುವ ಪ್ರತಿಭಟನಾ ಧರಣಿಗೆ ನಿರ್ಲಕ್ಷ್ಯ ತೋರಲಾಗಿದೆ ಎಂದು ಬೇಸರಿಸಿದರು.

ಕೂಡಲೇ ಪರಿಶಿಷ್ಟ ಜಾತಿ, ಪಂಗಡದ ಎಲ್ಲ ಸಂಶೋಧಕರಿಗೂ ಶಿಷ್ಯ ವೇತನ ಮಂಜೂರು ಮಾಡಬೇಕು, ಲ್ಯಾಪ್‌ಟಾಪ್ ನೀಡಬೇಕು, ಮಾಸಿಕ ಕೊಠಡಿ ಬಾಡಿಗೆ ರದ್ದುಗೊಳಿಸಬೇಕು, ಭೋಜನ ವ್ಯವಸ್ಥೆ ಹಿಂದಿನಂತೆ ಮುಂದುವರಿಸಬೇಕು, ಮಹಿಳಾ ಸಂಶೋಧಕರಿಗೆ ಪ್ರತ್ಯೇಕ ಕೊಠಡಿ ಕಲ್ಪಿಸಬೇಕು, ಇವರ ಮೇಲಾಗುತ್ತಿರುವ ದೌರ್ಜನ್ಯ ತಪ್ಪಿಸಬೇಕು ಎಂಬಿವೆ ಮೊದಲಾದವು ಬೇಡಿಕೆಗಳಾಗಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡ ಚೋರನಹಳ್ಳಿ ಶಿವಣ್ಣ, ಅಭಿಷೇಕ್, ಗಿರಿಯಣ್ಣ, ಕುಕ್ಕೂರು ರಾಜು, ಶಿವಕುಮಾರ್ ಉಪಸ್ಥಿತರಿದ್ದರು.

ಅಭಿನಂದನೆ...



ಮೈಸೂರು ನಗರಕ್ಕೆ ಮೊದಲ ಬಾರಿಗೆ ಆಗಮಿಸಿದ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿದರು. ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಡೈರಿ ವೆಂಕಟೇಶ್, ಆಶ್ರಯ ಸಮಿತಿ ಸದಸ್ಯ ಎಂ.ಡಿ.ಫಾರೂಕ್, ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಪೈ.ಸುನೀಲ್, ರೋಹಿತ್ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯ...



ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಎಸ್.ಬಿ.ಎಂ ಮಂಜು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಜೆಡಿಎಸ್ ಮುಖಂಡರು ಅಭಿನಂದಿಸಿ, ಶುಭ ಕೋರಿದರು. ಈ ವೇಳೆ ಮೈಸೂರು ನಗರ ಜೆಡಿಎಸ್ ಉಪಾಧ್ಯಕ್ಷ ಭೋಜರಾಜ ಸಿ.ಆರ್, ನಗರ ಎಸ್ಸಿ ಎಸ್ಟಿ ಅಧ್ಯಕ್ಷ ಪ್ರಕಾಶ್, ಜೆಡಿಎಸ್ ಮುಖಂಡರಾದ ಕೃಷ್ಣಾಚಾರಿ, ಹನುಮೇಗೌಡ, ರಾಮದಾಸ್, ರಾಮಕೃಷ್ಣೇಗೌಡ ಇನ್ನಿತರರಿದ್ದರು.

ನಾಳೆ ಯುವ ಸೌರಭ 2026 ಕಾರ್ಯಕ್ರಮ

ಮೈಸೂರು,ಜೂ.29– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಮೈಸೂರು ಇವರ ಸಹಯೋಗದಲ್ಲಿ ಯುವ ಸೌರಭ 2026 ಕಾರ್ಯಕ್ರಮವನ್ನು ಜು.1ರಂದು ಬೆಳಗ್ಗೆ 10.30 ಗಂಟೆಗೆ ಕೆ.ಎಸ್.ಜಿ.ಎಚ್ ರಂಗಮಂದಿರ, ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವ ವಿದ್ಯಾಲಯ, ಅಶೋಕವೃತ್ತ(ಬಲ್ಲಾಳ್) ಮೈಸೂರು ಇಲ್ಲಿ ಆಯೋಜಿಸಲಾಗಿದೆ.

ಉಕ್ಕು ಮತ್ತು ಕೈಗಾರಿಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ.

ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್ ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್‌ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ & ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಹೆಚ್.ಡಿ.ಗಣೇಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎನ್. ರಂಗಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ.

ಸಮಾರಂಭದ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಕೆ.ವೆಂಕಟೇಶ್, ಕೆ. ಹರೀಶ್‌ಗೌಡ, ಡಾ.ಹೆಚ್.ಸಿ.ಮಹದೇವಪ್ಪ, ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ಕೆ.ಶಿವಕುಮಾರ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತು, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ಯಾರಿಜಾನ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ನಮ್ಮಲ್ಲಿ ಜೆಡಿಎಸ್ ಸಾಹಿತಿಗಳು! ಬಿಜೆಪಿ ಸಾಹಿತಿಗಳು!! ಕಾಂಗ್ರೆಸ್ ಸಾಹಿತಿಗಳಿದ್ದಾರೆ...!!!

● ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ವಿಷಾದ ● ಸಾಂಸ್ಕೃತಿಕ ಸಂಘಟಕರ ಯೋಗ್ಯತಾನುಸಾರ ಸರ್ಕಾರ ನಡೆದುಕೊಳ್ಳುತ್ತಿದೆ

ಮೈಸೂರು, ಜೂ.29(ಎಂಕೆ)– ನಮ್ಮಲ್ಲಿ ಜೆಡಿಎಸ್ ಸಾಹಿತಿಗಳು, ಬಿಜೆಪಿ ಸಾಹಿತಿಗಳು ಹಾಗೂ ಕಾಂಗ್ರೆಸ್ ಸಾಹಿತಿಗಳಿದ್ದಾರೆ. ಆದರೆ, ಪಕ್ಷಾತೀತವಾಗಿ ಯೋಚನೆ ಮಾಡುವ ಸಾಹಿತಿಗಳಿಲ್ಲ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಹೇಳಿದರು.

ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಕರ್ನಾಟಕ ರಂಗ ಪರಿಷತ್ತು ಕೇಂದ್ರ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ವಲಯ ಸಾಂಸ್ಕೃತಿಕ ಸಂಘಟಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಸರ್ಕಾರದಲ್ಲಿಯೂ ಇವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಾಹಿತ್ಯ ಪರಿಷತ್ತು ಎನ್ನುವ ಸಂಸ್ಥೆಯಲ್ಲಿ ನಮ್ಮ ಕಣ್ಣ ಮುಂದೆಯೇ ಹಣ ತಿಂದ ವ್ಯಕ್ತಿಯನ್ನು ಪ್ರಶ್ನೆ ಮಾಡಲು ಹೊರಟಾಗ ಜೊತೆಗೆ ಬಂದವರು ಕಡಿಮೆ. ಅಂದರೆ ಕದ್ದವರೇ ಜಾಸ್ತಿ. ಕೆಲವರು ಆತ ನಮ್ಮ ಮೇಲೆ ಕೇಸ್ ಹಾಕಿ ಬಿಡುತ್ತಾನೆ ಎಂದು ತಪ್ಪಿಸಿಕೊಂಡರೆ, ಮತ್ತೆ ಕೆಲವರು ಸಭೆಗಳಿಗೆ ಬರಲಿಲ್ಲ. ಆತ್ಮಸಾಕ್ಷಿ ಎಂಬುದು ಬೇಡವೆ ಎಂದು ಕಿಡಿಕಾರಿದರು.

ಸಂಘಟಕರಿಗೆ ಗೌರವವೇ ಇಲ್ಲ: ಸಂಘಟಕ ಮಾಡಿಸಿದ ನಾಟಕದಲ್ಲಿ ಪಾತ್ರ ಮಾಡುವ ಓರ್ವ ನಟ ಯಶಸ್ವಿಯಾಗುತ್ತಾನೆ. ಒಬ್ಬ ಮೇಕಪ್ ಮ್ಯಾನ್ ಮೇಕಪ್ ಮಾಡಿ ತನ್ನ ಕೂಲಿ ಪಡೆದುಕೊಳ್ಳುತ್ತಾನೆ. ಆದರೆ, ಬೆಳಗ್ಗೆ 9 ಗಂಟೆಗೆ ಬಂದು ರಾತ್ರಿ 9 ಗಂಟೆಗೆ ಹೋಗುವ ಸಂಘಟಕ ತನ್ನ ಹಲವು ಸಮಸ್ಯೆಗಳ ನಡುವೆಯೂ ಸಾಲ ಮಾಡಿಯಾದರೂ ಸಂಭಾವನೆ ನೀಡುತ್ತಾನೆ. ಇಷ್ಟೆಲ್ಲಾ ಕೆಲಸ ಮಾಡಿದರೂ ಸಂಘಟಕರಿಗೆ ಯಾವುದೇ ಅಭಿನಂದನೆ ಇಲ್ಲ. ಸಾಹಿತ್ಯ ಅಕಾಡೆಮಿ ಹಾಗೂ ನಾಟಕ ಅಕಾಡೆಮಿ ಯಾವ ಪ್ರಶಸ್ತಿಯನ್ನೂ ಇಟ್ಟಿಲ್ಲ. ಅಲ್ಲದೆ ಸಂಘಟಕರಿಗೆ ಗೌರವವೂ ಇಲ್ಲ ಅವರ ಮಾತಿಗೆ ಮನ್ನಣೆಯೂ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಂಘಂ ಶರಣಂ ಗಚ್ಛಾಮಿ: ಒಗ್ಗಟ್ಟಿಲ್ಲದ ಸಂಘಟಕರ ಯೋಗ್ಯತೆಗೆ ತಕ್ಕಂತೆ ಸರ್ಕಾರವೂ ನಡೆದುಕೊಳ್ಳುತ್ತಿದೆ. ಸಂಘಟಕರು ತಮ್ಮನ್ನು ತಾವು ಅರ್ಥ ಮಾಡಿಕೊಳ್ಳದೆ, ಸಂಘಟಿಸಿಕೊಳ್ಳದೆ ಹೋದರೆ ಹಾಗೂ ತಮ್ಮನ್ನು ತಾವು ಸಂತೈಸಿಕೊಳ್ಳದಿದ್ದರೆ ಯಾವ ಸಮಾವೇಶ ಮಾಡಿದರೆ ಏನು ಪ್ರಯೋಜನ. ದಿಟ್ಟ ನಿಲುವು ಬರುವವರೆಗೂ ಸಂಘಟಕರು ಉದ್ದಾರವಾಗಲ್ಲ. ಆದ್ದರಿಂದ 'ಸಂಘಂ ಶರಣಂ ಗಚ್ಛಾಮಿ' ಎಂಬಂತೆ ಸಂಘಟಕರಲ್ಲಿ ಒಗ್ಗಟ್ಟು ಬರಬೇಕು. ಸಂಘಕ್ಕೆ ಶರಣಾಗಬೇಕು. ಸಂಘಟಕರು ಬಲಿಷ್ಠರಾಗದೆ ಹೋದರೆ ಸರ್ಕಾರ ನಮ್ಮ ಮಾತನ್ನು ಕೇಳುವುದಿಲ್ಲ. ಅನ್ಯಾಯ, ಅಸಮಾನತೆಗಳನ್ನು ವಿರೋಧಿಸಿ ಮಾತನಾಡುವ ಶಕ್ತಿ ಬೆಳೆಸಿಕೊಳ್ಳಬೇಕು. ಇಲ್ಲವಾದರೆ ಸರ್ಕಾರ ನಮ್ಮನ್ನು ಗುಲಾಮರಂತೆ ನಡೆಸಿಕೊಳ್ಳುತ್ತದೆ ಎಂದು ಎಚ್ಚರಿಸಿದರು.

ಬರಹ ನಿಲ್ಲಿಸಬೇಕು: ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು ಎಂದು ಹೇಳುತ್ತಲೇ ಇದ್ದೇವೆ. ಆದರೆ, ಇನ್ನೂ ಯಾಕಾಗುತ್ತಿಲ್ಲ. ಒಬ್ಬ ರಾಜೀನಾಮೆ ಕೊಟ್ಟರೆ ಮತ್ತೊಬ್ಬ ಆ ಸ್ಥಾನಕ್ಕೆ ಹೋಗಲು ರೆಡಿಯಾಗಿರುತ್ತಾರೆ. ಕನ್ನಡ ಕಡ್ಡಾಯಗೊಳಿಸಬೇಕೆಂದು ಆಗ್ರಹಿಸಿ ಸಂಘಟಕರು ಸಂಘಟನೆಯನ್ನು ಬಿಟ್ಟು, ಬರಹಗಾರರು ಒಂದು ವರ್ಷಗಳ ಕಾಲ ಬರೆಯುವುದನ್ನು ಮತ್ತು ಸರ್ಕಾರಿ ವೇದಿಕೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ಬಿಟ್ಟರೆ ಸರಿಯಾಗಲಿದೆ ಎಂದು ಸಲಹೆ ನೀಡಿದರು.

ಸಮಾವೇಶದ ಒತ್ತಾಯಗಳು: ಮೈಸೂರು ವಲಯ ಸಾಂಸ್ಕೃತಿಕ ಸಂಘಟಕರ ಸಮಾವೇಶದಲ್ಲಿ ಡಾ.ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಸಿದ್ಧಪಡಿಸಿರುವ ಸಮಗ್ರ 'ಸಾಂಸ್ಕೃತಿಕ ನೀತಿ'ಯನ್ನು ತಕ್ಷಣ ಜಾರಿಗೊಳಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಾರ್ಷಿಕ ಬಜೆಟ್ ಅನ್ನು 1000 ಕೋಟಿ ರೂ.ಗೆ ಹೆಚ್ಚಿಸಬೇಕು. ಹಿರಿಯ ಕಲಾವಿದರಿಗೆ ಕನಿಷ್ಠ 5 ಸಾವಿರ ಮಾಸಾಶನ ನೀಡಬೇಕು. ಅಕಾಡೆಮಿಗಳ ಬಲವರ್ಧನೆಗೆ ವಾರ್ಷಿಕ ಅನುದಾನ 5 ಕೋಟಿ ರೂ.ಗೆ ಹೆಚ್ಚಿಸಬೇಕು. ಸಂಘ–ಸಂಸ್ಥೆಗಳ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅನುದಾನವನ್ನು 50 ಕೋಟಿ ರೂ. ಹೆಚ್ಚಿಸಬೇಕು. ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ 100 ಕೋಟಿ ರೂ. ನೀಡಬೇಕು ಹಾಗೂ ಕೆಟ್ಟಿರುವ ಎಲ್ಲಾ ಜಿಲ್ಲಾ ರಂಗಮಂದಿರಗಳನ್ನು ಸರಿಪಡಿಸಬೇಕು ಎಂದು ಒತ್ತಾಯಿಸಲಾಯಿತು.

ರಂಗ ಸಮಾಜದ ಸದಸ್ಯ ಹೆಚ್.ಎಸ್. ಸುರೇಶ್ ಬಾಬು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ನೇಗೆ ಕರ್ನಾಟಕ ಸಂಘಟಕರ ಸಮಾವೇಶದ ಅಧ್ಯಕ್ಷ ರಾಜಶೇಖರ ಕದಂಬ, ನೂತನ ಸಂಸ್ಥಾಪಕ ಮಂಡ್ಯ ರಮೇಶ್, ನೃತ್ಯಗಿರಿ ಸಂಸ್ಥಾಪಕಿ ಕೃಪಾ ಪಡ್ಕೆ, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಕಾವಾ ಕಾಲೇಜಿನ ಆಡಳಿತಾಧಿಕಾರಿ ನಿರ್ಮಲ ಮಠಪತಿ, ಸಂಚಲನ ಮೈಸೂರು ಅಧ್ಯಕ್ಷ ದೀಪಕ್ ಮೈಸೂರು, ಸಂ.ಸುರೇಶ್ ಇದ್ದರು.



ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಸೋಮವಾರ ನಡೆದ ಮೈಸೂರು ವಲಯ ಸಾಂಸ್ಕೃತಿಕ ಸಂಘಟಕರ ಸಮಾವೇಶವನ್ನು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಉದ್ಘಾಟಿಸಿದರು.

ಶಿವರಾಜ ತಂಗಡಗಿ ತಮ್ಮ ಕಮಿಷನ್ ತೆಗೆದುಕೊಂಡಿದ್ದಾನೆ...!

"ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕೆಲ ಪಟ್ಟಭದ್ರ ಹಿತಾಸಕ್ತಿಗಳಿವೆ. ಅಲ್ಲಿಗೆ ಕೆಲವರಿಗೆ ಮಾತ್ರ ಪ್ರವೇಶವಿದೆ. ಅನುದಾನ ಹಂಚಿಕೆಯನ್ನು ಯಾರೊಬ್ಬರು ಪಶ್ನೆ ಮಾಡಲ್ಲ. ಶಿವರಾಜ ತಂಗಡಗಿ(ಹಿಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ)ಯನ್ನು ಯಾರು ಪ್ರಶ್ನೆ ಮಾಡಿದ್ದಾರೆ. ಪ್ರತಿಯೊಂದಕ್ಕೂ ಕಮಿಷನ್ ನಡೆದು ಹೋಗಿದೆ. ಅವನ ತಮ್ಮ ಒಂದು ಲಕ್ಷ, ಎರಡು ಲಕ್ಷ, ಮೂರು ಲಕ್ಷದಂತೆ ಕಮಿಷನ್ ತೆಗೆದುಕೊಂಡಿದ್ದಾನೆ. ಇದೇ ರೀತಿಯಾದರೆ ಅನುದಾನಕ್ಕಾಗಿ ಭಿಕ್ಷೆ ಬೇಡುತ್ತಾ ನಿಲ್ಲಬೇಕಾಗುತ್ತದೆ. **–ಪ್ರೊ. ಜಯಪ್ರಕಾಶಗೌಡ, ಅಧ್ಯಕ್ಷ, ಕರ್ನಾಟಕ ಸಂಘ, ಮಂಡ್ಯ**

ಅಪರೂಪದ ಐತಿಹಾಸಿಕ ಹಸ್ತಪ್ರತಿಗಳ ದಾಖಲೆಗಳ ರಕ್ಷಣೆಗೆ ಕಾಯ್ದೆ ಜಾರಿ

ಮೈಸೂರು: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ತಾಳೆಗರಿ, ತಾಮ್ರಪಟ ಭೂರ್ಜಪತ್ರ: ಮರದ ತೊಗಟೆ ಮತ್ತು ಬಟ್ಟೆ ಅಥವಾ ಚರ್ಮದ ಮೇಲೆ ಬರೆದ ಬರಹಗಳು ರಾಜ್ಯದ ಇತಿಹಾಸ, ರಾಜವಂಶಗಳು, ಅಥವಾ ಪ್ರಮುಖ ಸಾಮಾಜಿಕ ಬದಲಾವಣೆಗಳ ಬಗ್ಗೆ ಮಾಹಿತಿ ನೀಡುವಂತಹ ಕಾವ್ಯ, ಪುರಾಣ, ವ್ಯಾಕರಣ, ಜ್ಯೋತಿಷ್ಯ, ಶಿಲ್ಪಶಾಸ್ತ್ರ, ವೈದ್ಯ, ಖಗೋಳ ಶಾಸ್ತ್ರ ಅಥವಾ ಅಳಿವಿನಂಚಿನಲ್ಲಿರುವ ಕಲೆ, ಭಾಷೆ ಮತ್ತು ಲೌಕಿಕ ವಿಷಯಗಳನ್ನು ಒಳಗೊಂಡಿರುವ ಅಪರೂಪದ ವೈಜ್ಞಾನಿಕ ಸಾಹಿತ್ಯಿಕ ಅಥವಾ ಐತಿಹಾಸಿಕ ಮೌಲ್ಯವಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯಗೊಳಿಸುವುದನ್ನು ಉಪಬಂಧಿಸುವುದಕ್ಕಾಗಿ ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರವನ್ನು ಸ್ಥಾಪಿಸುವ ಸಲುವಾಗಿ ಕರ್ನಾಟಕ ಜ್ಞಾನ ಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ಅಧಿನಿಯಮ, 2026 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ:25) ಅನ್ನು ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ದಿನಾಂಕ 09.04.2026ರಂದು ಪ್ರಕಟಿಸಲಾಗಿದೆ. ಸದರಿ ಅಧಿನಿಯಮ ದಿನಾಂಕ:24/05/2026ರಿಂದ ಜಾರಿಗೊಳಿಸಲಾಗಿದೆ. ಸದರಿ ಅಧಿನಿಯಮದಲ್ಲಿ ಹಸ್ತಪ್ರತಿಗಳನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿ ಅಥವಾ ಸಂಸ್ಥೆಯು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ 1 ವರ್ಷದೊಳಗಾಗಿ ಕಡ್ಡಾಯವಾಗಿ ಪ್ರಾಧಿಕಾರಕ್ಕೆ ವಿವರಗಳನ್ನು ಒದಗಿಸಬೇಕಾಗಿರುತ್ತದೆ. ಯಾರೇ ವ್ಯಕ್ತಿಯು, ಹಸ್ತಪ್ರತಿಯನ್ನು ಉದ್ದೇಶಪೂರ್ವಕವಾಗಿ ಹಾನಿಗೊಳಿಸುವುದು, ನಾಶಪಡಿಸುವುದು. ರಫ್ತನ್ನು ಮಾಡಿದ್ದಲ್ಲಿ 3 ವರ್ಷಗಳವರೆಗಿನ ಕಾರಾಗೃಹ ವಾಸ ಅಥವಾ 5 ಲಕ್ಷರೂ.ವರೆಗಿನ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡನೀಯವಾಗಲಿದೆ.

'ಕೃತಕ ಬುದ್ಧಿಮತ್ತೆ' ಕುರಿತು ವಿಚಾರಗೋಷ್ಠಿ

ಮೈಸೂರು,ಜೂ.29– ವಿದ್ಯಾರ್ಥಿಗಳಲ್ಲಿ ಜೀವನ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಬೋಧಪ್ರದವಾದ ಕಲಾ ಪ್ರಕಾರಗಳನ್ನು ಶಾಲಾ–ಕಾಲೇಜುಗಳಲ್ಲಿ ಪ್ರದರ್ಶನ ಮಾಡುವ ಅಗತ್ಯವಿದೆ ಎಂದು ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಕರೆ ನೀಡಿದರು.

ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಗ್ಲೋಬಲ್ ಎಜುಕೇಷನ್ ಟ್ರಸ್ಟ್ ವತಿಯಿಂದ ನಗರದ ಹೂಟಗಳ್ಳಿಯಲ್ಲಿರುವ ದಕ್ಷ ಕಾಲೇಜಿನ ಸಭಾಂಗಣದಲ್ಲಿ ನಡೆದ 'ಕೃತಕ ಬುದ್ಧಿಮತ್ತೆ' ಕುರಿತು ವಿಚಾರಗೋಷ್ಠಿ, ಕಿರುಚಿತ್ರ ಪ್ರದರ್ಶನ ಸಮಾರಂಭದಲ್ಲಿ 'ನಾಡಕೀರ್ತಿ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಉತ್ತಮ ಕಿರುಚಿತ್ರಗಳನ್ನು, ಸಾಹಿತ್ಯಕ ವಿಚಾರಗಳನ್ನು ಮುಟ್ಟಿಸುತ್ತಿರುವ ದಕ್ಷ ಕಾಲೇಜಿನ ಕಾರ್ಯ ಅಮೋಘವಾದುದು. ಅದರ ದಕ್ಷತೆ ಮತ್ತಷ್ಟು ಹೆಚ್ಚಲಿ ಎಂದು ಆಶಿಸಿದರು.

ಪ್ರತಿಯೊಂದು ಕ್ಷೇತ್ರದ ಸಾಧಕರೆಲ್ಲ ಗುಣವಂತರು. ಸಂಘಟಕರೆಲ್ಲ ಗುಣಗ್ರಾಹಿಗಳು. ಆದ್ದರಿಂದ ಸಾಧಕ ಗುಣವಂತರನ್ನು ಗುರುತಿಸುವ ಕಾರ್ಯವಾಗಬೇಕು. ಇಂದು ನಾಡಿನ ಉದ್ದಗಲ ಪ್ರಶಸ್ತಿಗಳ ಮತ್ತು ಸನ್ಮಾನಗಳ ಮಹಾಪೂರವೇ ಕಂಡು ಬರುತ್ತಿದೆ. ಸಾಧಕರಿಗೆ ಇವೆಲ್ಲ ಸಾರ್ಥಕ ಗೌರವಗಳು. ಇದು ಒಳ್ಳೆಯ ಬೆಳವಣಿಗೆ ಎಂದು ಹೇಳಿದರು.

ಸಾಹಿತಿ ಟಿ. ಸತೀಶ್ ಜವರೇಗೌಡ ಮಾತನಾಡಿ, ಕಲಾ ಮಾಧ್ಯಮ ರಂಜನೆಗಷ್ಟೇ ಸೀಮಿತವಾಗಬಾರದು. ಅದು ಸಮಾಜಕ್ಕೆ ಬೋಧನೆಯನ್ನೂ ಮಾಡಬೇಕು. ನಾಟಕ, ಚಲನಚಿತ್ರ, ಧಾರವಾಹಿಗಳು ರಂಜನೆಯ ಜೊತೆಗೆ ಸಾಮಾಜಿಕ ಸಂದೇಶವನ್ನೂ ನೀಡಿದಾಗ ಮಾತ್ರ ಕಲಾ ಮಾಧ್ಯಮ ತನ್ನ ಸಾರ್ಥಕತೆ ಪಡೆಯಲು ಸಾಧ್ಯ ಎಂದರು.

ಜಾಗತೀಕರಣ ಪ್ರಕ್ರಿಯೆ ವೇಗ ಪಡೆದ ಮೇಲೆ ತಂತ್ರಜ್ಞಾನದ ಬಳಕೆ ಹೆಚ್ಚಾಗಿದೆ. ಅದರಲ್ಲೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಅಪಾರ ಮನ್ನಣೆ ಪಡೆದಿದೆ. ಇದರಿಂದ ಹಲವು ಕ್ಷೇತ್ರಗಳಲ್ಲಿ ಮಹತ್ತರವಾದ ಬದಲಾವಣೆಗಳಾಗಿವೆ. ಆದರೂ ಕೂಡ ಎಐ ತಂತ್ರಜ್ಞಾನದ ಮೇಲಿನ ವಿಪರೀತ ಅವಲಂಬನೆ ಸಲ್ಲದು. ಇದೇ ಮುಂದೆ ಹಲವು ಅಪಾಯಗಳನ್ನು ತಂದೊಡ್ಡಬಹುದು ಎಂದು ಎಚ್ಚರಿಸಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ನಾಗರಾಜು ವಿ. ಬೈರಿ ಉದ್ಘಾಟಿಸಿದರು. ಹಿರಿಯ ಸಾಹಿತಿ ಎಸ್.ಅಕ್ಬರ್ ಪಾಷ ಅಧ್ಯಕ್ಷತೆ ವಹಿಸಿದ್ದರು. ಅಬಕಾರಿ ಇಲಾಖೆಯ ಮಂಡ್ಯ ಜಿಲ್ಲಾ ಉಪ ಆಯುಕ್ತ ಬಿ.ಆರ್. ಹಿರೇಮಠ ವಿವಿಧ ಪ್ರಶಸ್ತಿಗಳ ಪ್ರದಾನ ಮಾಡಿದರು. ದಕ್ಷ ಕಾಲೇಜಿನ ವಿದ್ಯಾರ್ಥಿಗಳಾದ ಆರ್.ತಾರುಣ್ಯ, ಕೆ.ಎನ್.ದಕ್ಷಂತ, ರಕ್ಷಾ ಹಾಗೂ ಕೆ.ಎಸ್.ವಿಸ್ಮಯ 'ಕೃತಕ ಬುದ್ಧಿಮತ್ತೆ' ಕುರಿತು ವಿಚಾರ ಮಂಡಿಸಿದರು.

ಇದೇ ಸಂದರ್ಭದಲ್ಲಿ ಪಂಪ ಪ್ರಶಸ್ತಿ ಪುರಸ್ಕೃತ ಬಹುಶ್ರುತ ವಿದ್ವಾಂಸ ಡಾ. ಸಿಪಿಕೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ದಕ್ಷ ಕಾಲೇಜಿನ ಅಧ್ಯಕ್ಷ ಡಾ.ಪಿ.ಜಯಚಂದ್ರರಾಜು ಅವರಿಗೆ 'ನಾಡಕೀರ್ತಿ ಪ್ರಶಸ್ತಿ'ಯನ್ನು, ಸಾಹಿತಿ ಟಿ. ಸತೀಶ್ ಜವರೇಗೌಡ ಅವರಿಗೆ 'ಕನ್ನಡ ರತ್ನ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಿಗೆ 'ನಾರಿಶಕ್ತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಮಾರಂಭದ ಬಳಿಕ ಡಾ. ಗುಣವಂತ ಮಂಜು ನಿರ್ದೇಶನದ 'ಅನುರಾಗ' ಕಿರುಚಿತ್ರದ ಪ್ರದರ್ಶನ ನಡೆಯಿತು.

ಈ ವೇಳೆ ವೇದಿಕೆಯಲ್ಲಿ ಕೆ.ಆರ್. ನಗರದ ತಾಲೂಕು ಪಂಚಾಯತ್ ವ್ಯವಸ್ಥಾಪಕ ಕೆ.ಎಸ್. ಸತೀಶ್ ಕುಮಾರ್, ಚಲನಚಿತ್ರ ನಟಿ ಭೂಮಿಕಾ, ಗಾಯಕಿ ಜಯಂತಿ ಭಟ್, ಸಮಾಜ ಸೇವಕ ಎಸ್.ಕಣ್ಣನ್, ಪ್ರಗತಿಪರ ರೈತ ಪುಟ್ಟಸ್ವಾಮಿಗೌಡ, ದಕ್ಷ ಕಾಲೇಜಿನ ಕಾರ್ಯದರ್ಶಿ ಸೋನಿಯಾ ಉಮಾಪತಿ, ಪ್ರಾಂಶುಪಾಲ ಎಂ. ಅಭಿಷೇಕ್, ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಡಾ. ಗುಣವಂತ ಮಂಜು, ನಿವೃತ್ತ ಮುಖ್ಯ ಶಿಕ್ಷಕ ಗೌಡಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.




ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಗ್ಲೋಬಲ್ ಎಜುಕೇಷನ್ ಟ್ರಸ್ಟ್ ವತಿಯಿಂದ ಮೈಸೂರಿನ ಹೂಟಗಳ್ಳಿಯಲ್ಲಿರುವ ದಕ್ಷ ಕಾಲೇಜಿನ ಸಭಾಂಗಣದಲ್ಲಿ ನಡೆದ 'ಕೃತಕ ಬುದ್ಧಿಮತ್ತೆ' ಕುರಿತ ವಿಚಾರಗೋಷ್ಠಿಯಲ್ಲಿ ಪಂಪ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರಿಗೆ 'ನಾಡಕೀರ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ದೇಶ - ವಿದೇಶ


ದೆಹಲಿ–ಡೆಹ್ರಾಡೂನ್ ಎಕ್ಸ್‌ಪ್ರೆಸ್‌ವೇನಲ್ಲಿ ಭೀಕರ ಅಪಘಾತ; ನಾಲ್ವರು ಸಾವು

ದೆಹಲಿ: ರಿವರ್ಸ್ ತೆಗೆಯುತ್ತಿದ್ದ ಕಾರಿಗೆ ಎಸ್‌ಯುವಿ ಕಾರು ಡಿಕ್ಕಿ ಹೊಡೆದ ಪರಿಣಾಮ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿ, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಹರಾನ್‌ಪುರ್ ಬಳಿ ದೆಹಲಿ–ಡೆಹ್ರಾಡೂನ್ ಎಕ್ಸ್‌ಪ್ರೆಸ್ ವೇ ನಲ್ಲಿ ನಡೆದಿದೆ. ಮೃತರನ್ನು ಹರಿಯಾಣದ ಸೋನಿಪತ್ ಜಿಲ್ಲೆಯ ಬಹಾದುರ್‌ಗಢ ನಿವಾಸಿಗಳಾದ ಚರಣ್ ಸಿಂಗ್, ಅವರ ಪತ್ನಿ ಸುದೇಶ್, ಸೊಸೆ ಪ್ರೀತಿ ಹಾಗೂ ಮೊಮ್ಮಗ ಶಿವಾಂಶ್ ಎಂದು ಗುರುತಿಸಲಾಗಿದೆ. ಆಸ್ಪತ್ರೆಗೆ ದಾಖಲಿಸಿರುವ ಪ್ರವೀಣ್, ಸಾಹದೇವ್ ಹಾಗೂ ಮತ್ತೊಬ್ಬರ ಸ್ಥಿತಿಯೂ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಚರಣ್ ಸಿಂಗ್ ಕುಟುಂಬ ಹರಿದ್ವಾರಕ್ಕೆ ಪ್ರಯಾಣಿಸುತ್ತಿದ್ದ ವೇಳೆ ಹಲ್ಗೋಯಾ ಗ್ರಾಮದ ಸಮೀಪ ಅಪಘಾತ ಸಂಭವಿಸಿದೆ. ಹೆದ್ದಾರಿ ಪಕ್ಕದ ಪರ್ಯಾಯ ರಸ್ತೆಯಲ್ಲಿ ತೆರಳಲು ಕಾರನ್ನು ರಿವರ್ಸ್ ತೆಗೆಯುವಾಗ ವೇಗವಾಗಿ ಬಂದ ಎಸ್‌ಯುವಿ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದು ಮತ್ತೊಂದು ಬದಿ ರಸ್ತೆಯ ಡಿವೈಡರ್‌ಗೆ ಡಿಕ್ಕಿ ಹೊಡೆದು ಸಂಪೂರ್ಣ ನಜ್ಜುಗುಜ್ಜಾಗಿದೆ. ಅಪಘಾತದ ತೀವ್ರತೆಗೆ ಎಸ್‌ಯುವಿಯೂ ಪಲ್ಟಿಯಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಶ್ರೀಲಂಕಾದಲ್ಲಿ ಡೆಂಗ್ಯೂ ಜ್ವರದ ಅಬ್ಬರ; ಆಸ್ಪತ್ರೆಗಳು ಭರ್ತಿ

ಶ್ರೀಲಂಕಾ: ನೆರೆ ರಾಷ್ಟ್ರ ಶ್ರೀಲಂಕಾದಲ್ಲಿ ಡೆಂಗ್ಯೂ ಜ್ವರದ ಅಬ್ಬರ ಮಿತಿಮೀರಿದ್ದು, ಅಲ್ಲಿನ ಆಸ್ಪತ್ರೆಗಳು ಡೆಂಗ್ಯೂ ರೋಗಿಗಳಿಂದ ಭರ್ತಿಯಾಗುತ್ತಿವೆ.




ಶ್ರೀಲಂಕಾದ ಈ ಪ್ರಸ್ತುತ ಬಿಕ್ಕಟ್ಟು ಭೌಗೋಳಿಕ ಸಾಮೀಪ್ಯ ಮತ್ತು ನಿರಂತರ ಪ್ರಯಾಣದ ಹಿನ್ನೆಲೆಯಲ್ಲಿ ಭಾರತದಲ್ಲೂ ಆತಂಕ ಮೂಡಿಸಿದೆ. ಈ ಸಾಂಕ್ರಾಮಿಕ ರೋಗ ದೇಶದ ಗಡಿ ದಾಟದಂತೆ ತಡೆಯಲು ಭಾರತ ಸರ್ಕಾರ ಹಾಗೂ ಆರೋಗ್ಯ ಇಲಾಖೆ ಈಗಿನಿಂದಲೇ ಮುನ್ನೆಚ್ಚರಿಕಾ ಕ್ರಮಗಳಿಗೆ ಮುಂದಾಗಿದೆ.

ಜೂನ್ ಕೊನೆಯ ವಾರದ ವರದಿಯ ಪ್ರಕಾರ ಶ್ರೀಲಂಕಾದಲ್ಲಿ ಪ್ರಸಕ್ತ ವರ್ಷ ಡೆಂಗ್ಯೂ ಪ್ರಕರಣಗಳ ಸಂಖ್ಯೆ 50 ಸಾವಿರ ಗಡಿ ದಾಟಿದ್ದು, 29 ಮಂದಿ ಸಾವನ್ನಪ್ಪಿದ್ದಾರೆ. ಪ್ರಸ್ತುತ ಪ್ರತಿದಿನ 600 ರಿಂದ 700 ಹೊಸ ಡೆಂಗ್ಯೂ ಪ್ರಕರಣಗಳು ವರದಿಯಾಗುತ್ತಿವೆ. ರಾಜಧಾನಿ ಕೊಲೊಂಬೊ , ಗಂಪಹಾ, ಕಲುತಾರಾ ಜಿಲ್ಲೆ ಸೇರಿದಂತೆ ಪಶ್ಚಿಮ ರಾಜ್ಯಗಳ ಜಿಲ್ಲೆಗಳಲ್ಲೇ ಶೇ.50ರಷ್ಟು ಪ್ರಕರಣ ವರದಿಯಾಗಿವೆ. 2025ರ ನವೆಂಬರ್‌ನಲ್ಲಿ ಅಪ್ಪಳಿಸಿದ ದಿತ್ವಾ ಚಂಡಮಾರುತ ಕರಾವಳಿ ಮತ್ತು ಒಳನಾಡಿನ ಜಿಲ್ಲೆಗಳಲ್ಲಿ ಭಾರಿ ಹಾನಿ ಉಂಟು ಮಾಡಿದ್ದು, ಇದರಿಂದಾಗಿ ಅಲ್ಲಿನ ಒಳಚರಂಡಿ ವ್ಯವಸ್ಥೆ ಹದಗೆಟ್ಟು, ನೂರಾರು ಕಡೆಗಳಲ್ಲಿ ಕೃತಕ ಸರೋವರಗಳು ಹಾಗೂ ನೀರು ನಿಲ್ಲುವ ತಾಣಗಳು ಸೃಷ್ಟಿಯಾಗಿವೆ. ಪರಿಣಾಮ ಸೊಳ್ಳೆಗಳ ಸಂತತಿ ಹೆಚ್ಚಾಗಿ, ರೋಗ ವ್ಯಾಪಿಸಿದೆ ಎನ್ನಲಾಗಿದೆ.

ಭಾರತಕ್ಕೆ ಅಕ್ರಮ ಪ್ರವೇಶ; ದಂಪತಿ, ಇಬ್ಬರು ಮಕ್ಕಳು ವಶಕ್ಕೆ


ಬಿಹಾರ: ಇಲ್ಲಿನ ಬಂಕಾದ ಪ್ರಸಿದ್ಧ ರಾಧಾ–ಕೃಷ್ಣ ದೇವಸ್ಥಾನದ ಆವರಣದಲ್ಲಿ ಕಳೆದ ಮೂರು ದಿನಗಳಿಂದ ನೆಲೆಸಿದ್ದ ಬಾಂಗ್ಲಾದೇಶದ ದಂಪತಿ ಮತ್ತು ಅವರ ಇಬ್ಬರು ಮಕ್ಕಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಇವರ ಬಗ್ಗೆ ಅನುಮಾನಗೊಂಡು ದೇವಾಲಯದ ಆಡಳಿತಾಧಿಕಾರಿ ವಿಜಯ್ ರೈ ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಸ್ಥಳಕ್ಕೆ ಧಾವಿಸಿ ವಿಚಾರಣೆ ನಡೆಸಿದಾಗ ಅವರು ಬಾಂಗ್ಲಾದೇಶಿ ಪ್ರಜೆಗಳು ಎಂದು ತಿಳಿದುಬಂದಿದೆ. ಮಿಲ್ಟನ್ ಹಲ್ದಾರ್, ಜುಮರಾಣಿ ದಾಸ್ ಹಾಗೂ ಇಬ್ಬರು ಮಕ್ಕಳು ಭಾರತ ಪ್ರವೇಶಿಸಲು ಅಥವಾ ವಾಸಿಸಲು ಯಾವುದೇ ಮಾನ್ಯ ದಾಖಲೆಗಳನ್ನು ಹೊಂದಿರದ ಕಾರಣ ಅವರನ್ನು ವಶಕ್ಕೆ ಪಡೆದು, ದಂಪತಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯದಿಂದ ಕುಟುಂಬ ಸದಸ್ಯರು ಕಾಣೆಯಾದ ಬಳಿಕ ತಮ್ಮ ಮಕ್ಕಳ ಸುರಕ್ಷತೆಗಾಗಿ ಭಾರತಕ್ಕೆ ಬಂದಿದ್ದೇವೆ. ಎರಡೂವರೆ ತಿಂಗಳ ಹಿಂದೆ ದಲ್ಲಾಳಿಗೆ 20 ಸಾವಿರ ನೀಡಿ, ಅಕ್ರಮವಾಗಿ ಗಡಿ ದಾಟಿದ್ದಾಗಿ ಪೊಲೀಸರಿಗೆ ತಿಳಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಿ, ಬಾಂಗ್ಲಾದೇಶ ರಾಯಭಾರ ಕಚೇರಿಗೆ ಮಾಹಿತಿ ನೀಡಲಾಗಿದೆ.

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದ ಇಬ್ಬರು ಪ್ರತಿನಿಧಿಗಳು ಭಾಗಿ


ಟೆಹ್ರಾನ್: ಇರಾನ್‌ನ ಸುಪ್ರೀಂ ಲೀಡರ್ ಆಗಿದ್ದ ಖಮೇನಿಯ ಅಂತ್ಯಕ್ರಿಯೆಯಲ್ಲಿ ಭಾರತದ ಪರವಾಗಿ ಬಿಹಾರ ರಾಜ್ಯಪಾಲ, ನಿವೃತ್ತ ಲೆಫ್ಟಿನೆಂಟ್ ಜನರಲ್ ಸೈಯದ್ ಅತಾ ಹಸ್ನೈನ್ ಹಾಗೂ ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪಬಿತ್ರಾ ಮಾರ್ಗರಿಟಾ ಭಾಗಿಯಾಗಲಿದ್ದಾರೆ ಎಂದು ಇರಾನ್ ಮೂಲಗಳು ತಿಳಿಸಿವೆ.



ಫೆ.28ರಂದು ಟೆಹ್ರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಖಮೇನಿ ಸಾವನ್ನಪ್ಪಿದ್ದರು. ಅದಾದ ಬಳಿಕ ಸಂಘರ್ಷದಿಂದಾಗಿ ಮಾರ್ಚ್ ತಿಂಗಳಲ್ಲಿ ನಡೆಯಬೇಕಿದ್ದ ಅಂತ್ಯಕ್ರಿಯೆಯನ್ನು ಮುಂದೂಡಲಾಗಿತ್ತು. ಇದೀಗ ಜುಲೈ 4ರಿಂದ ಅಂತ್ಯಕ್ರಿಯೆಯ ವಿಧಿವಿಧಾನಗಳು ಆರಂಭವಾಗಲಿದ್ದು, ಇರಾನ್ ಸೇರಿದಂತೆ ವಿವಿಧ ನಗರಗಳಲ್ಲಿ ಬೃಹತ್ ಮೆರವಣಿಗೆ ನಡೆಯಲಿದೆ. ಈ ವೇಳೆ 1 ಕೋಟಿಗೂ ಅಧಿಕ ಜನರು ಭಾಗಿಯಾಗುವ ನಿರೀಕ್ಷೆಯಿದೆ. ಇತ್ತೀಚಿಗೆ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು ಖಮೇನಿಯ ಸರ್ಕಾರಿ ಅಂತ್ಯಕ್ರಿಯೆಯಲ್ಲಿ ಭಾಗಿಯಾಗುವಂತೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಿದ್ದರು. ಆದರೆ ಪೂರ್ವ ನಿಗದಿತ ವಿದೇಶಿ ಪ್ರವಾಸಗಳ ಹಿನ್ನೆಲೆ ಪ್ರಧಾನಿ ಮೋದಿ ಭಾಗಿಯಾಗಲು ಸಾಧ್ಯವಿಲ್ಲದ ಕಾರಣ ಸೈಯದ್ ಅತಾ ಹಸ್ನೈನ್ ಹಾಗೂ ಪಬಿತ್ರಾ ಮಾರ್ಗರಿಟಾ ಭಾರತದ ಅಧಿಕೃತ ಪ್ರತಿನಿಧಿಗಳಾಗಿ ಭಾಗವಹಿಸಲಿದ್ದಾರೆ.

ನಿಗೂಢ ಕಾಯಿಲೆಯಿಂದ ಒಂದೇ ಕುಟುಂಬದ ಐವರ ಸಾವು!

ಜಾರ್ಖಂಡ್: ಇಲ್ಲಿನ ಪಲಮು ಪದ್ವಾ ಬ್ಲಾಕ್‌ನ ಸಿಕ್ಕಾ ಗ್ರಾಮದಲ್ಲಿ ಕಳೆದ 10 ದಿನಗಳಲ್ಲಿ ಒಂದೇ ಕುಟುಂಬದ ಐವರು ನಿಗೂಢ ಕಾಯಿಲೆಯಿಂದ ಮೃತಪಟ್ಟಿದ್ದಾರೆ.



ಕುಲದೀಪ್ ಮಹಾತೋ ಜೂ.19ರಂದು ಸಾವನ್ನಪ್ಪಿದ್ದು, ಮರುದಿನ ಅವರ ಮಗಳು ಬಬಿತಾ ಕುಮಾರಿ ನಿಧನರಾದರು. ಅವರ ಎರಡನೇ ಮಗಳು ಇಂದು ಕುಮಾರಿ ಜೂ.26 ರಂದು ಹಾಗೂ ಅವರ ಸೊಸೆ ಶ್ವೇತಾ ಕುಮಾರಿ ಜೂ.28 ರಂದು ಮತ್ತು ಅವರ ಮಗ ನಕುಲ್ ಮಹತೋ ಇಂದು(ಜೂ.29) ಸಾವನ್ನಪ್ಪಿದ್ದಾರೆ.

ಇಡೀ ಕುಟುಂಬ ನಿಗೂಢ ಕಾಯಿಲೆಯಿಂದ ಬಳಲುತ್ತಿತ್ತು. ಎಲ್ಲರೂ ಊಟದ ನಂತರ ಸಾವನ್ನಪ್ಪಿದ್ದಾರೆ ಎನ್ನಲಾಗಿದ್ದು, ಅಂಗಾಂಗಗಳ ಮಾದರಿಗಳನ್ನು ಎಫ್‌ಎಸ್‌ಎಲ್ ಪರೀಕ್ಷೆಗೆ ಕಳುಹಿಸಲು ತೀರ್ಮಾನಿಸಲಾಗಿದೆ.

ಆರೋಗ್ಯ ಇಲಾಖೆಯ ತಜ್ಞರನ್ನೊಳಗೊಂಡ ಎರಡು ತಂಡಗಳು ಪರಿಶೀಲನೆ ನಡೆಸಿದ ವೇಳೆ ಹಲವಾರು ಆಘಾತಕಾರಿ ಸಂಗತಿಗಳು ಬೆಳಕಿಗೆ ಬಂದಿವೆ. ಇಡೀ ಕುಟುಂಬ ಅನಾರೋಗ್ಯಕ್ಕೆ ಒಳಗಾದ ನಂತರ ಭೂತೋಚ್ಚಾಟನೆ ಆಶ್ರಯಿಸಿ, ಬಹಳ ಸಮಯದಿಂದ ಚಿತಾಭಸ್ಮವನ್ನು ಸೇವಿಸುತ್ತಿತ್ತು ಎಂದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಆ ಚಿತಾಭಸ್ಮದ ಮಾದರಿ, ಬಳಸುತ್ತಿದ್ದ ಸಾಸಿವೆ ಎಣ್ಣೆ ಮಾದರಿಯನ್ನೂ ಸಂಗ್ರಹಿಸಲಾಗಿದೆ. ಸಂಪೂರ್ಣ ತನಿಖೆ ಬಳಿಕ ಸಾವಿನ ನಿಖರ ಕಾರಣ ತಿಳಿಯಬೇಕಿದೆ.

ಮೈಸೂರು ಮಿತ್ರ ಮಂಗಳವಾರ 30 ಜೂನ್ 2026

ವಿರಾಜಪೇಟೆ ಬಳಿ 45 ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ಕ್ರೀಡಾ ಸಂಕೀರ್ಣ ನಿರ್ಮಾಣ

ಶಾಸಕ ಎ.ಎಸ್.ಪೊನ್ನಣ್ಣರಿಂದ ಕಾಮಗಾರಿ ಪರಿಶೀಲನೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ರಾಷ್ಟ್ರ ಮಟ್ಟದ ಕ್ರೀಡಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ವಿ ಬಾಡಗ ಗ್ರಾಮದಲ್ಲಿ 45 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣ ಕೈಗೆತ್ತಿಕೊಂಡಿದ್ದು, ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

ಸುಮಾರು 11.5 ಎಕರೆ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಲಾಗುತ್ತಿರುವ ಈ ಕ್ರೀಡಾ ಸಂಕೀರ್ಣವು ಅಂತರರಾಷ್ಟ್ರೀಯ ಮಟ್ಟದ ಈಜುಕೊಳ, ಕೃತಕ ಹುಲ್ಲಿನ ಹಾಕಿ ಮೈದಾನ, ಬ್ಯಾಡ್ಮಿಂಟನ್ ಕೋರ್ಟ್, ಟೆನಿಸ್ ಕೋರ್ಟ್, ಶೂಟಿಂಗ್ ರೇಂಜ್, ಫುಟ್ಬಾಲ್ ಮೈದಾನ, ಕ್ರಿಕೆಟ್ ಕ್ರೀಡಾಂಗಣ, ಸುಸಜ್ಜಿತ ಜಿಮ್ ಮತ್ತು ವಿವಿಧ ಒಳಾಂಗಣ ಕ್ರೀಡೆಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಹೊಂದಿರಲಿದೆ.

ಕಾಮಗಾರಿಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪೊನ್ನಣ್ಣ ಕ್ರೀಡೆಗಳ ತವರು ಎಂದು ಕರೆಯಲ್ಪಡುವ



ಸ್ಥಳ ಪರಿಶೀಲನೆ ನಡೆಸಿ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿರುವ ಶಾಸಕ ಪೊನ್ನಣ್ಣ.

ಕೊಡಗು ಜಿಲ್ಲೆಗೆ ಇದು ಬಹಳ ಮುಖ್ಯವಾದ ಯೋಜನೆಯಾಗಿದೆ. ಯುವ ಪ್ರತಿಭೆಗಳಿಗೆ ಅಗತ್ಯವಾದ ಮೂಲಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಲಾಗಿದೆ. ಸಾವಿರಾರು ಕ್ರೀಡಾ ಪಟುಗಳು ಈ ಕೇಂದ್ರದಲ್ಲಿ ತರಬೇತಿ ಪಡೆಯಲು ಯೋಜಿಸುತ್ತಿದ್ದಾರೆ.

ರಾಜ್ಯಸಭಾ ಸದಸ್ಯ ಅಜಯ್ ಮಾಕನ್ ತಮ್ಮ ಅರು ವರ್ಷಗಳ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಈ ಯೋಜನೆಗೆ ವಿನಿಯೋಗಿಸಲು ನಿರ್ಧರಿಸಿದ್ದು, ಇದನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು ಎಂದು ಅವರು ಹೇಳಿದರು.

ಇದಲ್ಲದೆ, ಕರ್ನಾಟಕ ಸರ್ಕಾರವು ಬಜೆಟ್‌ನಲ್ಲಿ ಹಣವನ್ನು ಮಂಜೂರು ಮಾಡಿದೆ. ಮೊದಲ ಹಂತದ ಕಾಮಗಾರಿ 2028ರ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಮತ್ತು ಭವಿಷ್ಯದಲ್ಲಿ ಈ ಸಂಕೀರ್ಣವನ್ನು ರಾಷ್ಟ್ರೀಯ ಮಟ್ಟದ ತರಬೇತಿ ಕೇಂದ್ರವಾಗಿ ಅಭಿವೃದ್ಧಿ ಪಡಿಸುವುದು ಗುರಿಯಾಗಿದೆ ಎಂದು ಶಾಸಕರು ಹೇಳಿದರು.

ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ವ್ಯವಸ್ಥೆಯ ಜೊತೆಗೆ, ಯುವಕರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುವುದು ಎಂದು ಅವರು ತಿಳಿಸಿದರು. ಸಂಕೀರ್ಣ ನಿರ್ಮಾಣಕ್ಕೆ ಅಗತ್ಯವಾದ ಭೂಮಿಯನ್ನು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಹೆಸರಿಗೆ ವರ್ಗಾಯಿಸಲಾಗಿದೆ ಎಂದು ಅವರು ಹೇಳಿದರು.

ಮತಾಂತರ, ಮಹಿಳಾ ದೌರ್ಜನ್ಯ ಆರೋಪ ಖಂಡಿಸಿ

ನಿಸರ್ಗಧಾಮ ಬಂದ್ ಮಾಡಿ ಪ್ರತಿಭಟನೆ



ನಿಸರ್ಗಧಾಮ ಟೂರಿಸ್ಟ್ ಸೆಂಟರ್‌ನಲ್ಲಿ ಮತಾಂತರ ಹಾಗೂ ದೌರ್ಜನ್ಯ ನಡೆಯುತ್ತಿರುವ ಎಂಬ ಆರೋಪವನ್ನು ಖಂಡಿಸಿ ಪ್ರತಿಭಟನೆ ನಡೆಸಿದರು.

ಕುಶಾಲನಗರ: ನಿಸರ್ಗಧಾಮ ಟೂರಿಸ್ಟ್ ಸೆಂಟರ್‌ನಲ್ಲಿ ಮತಾಂತರ ಹಾಗೂ ದೌರ್ಜನ್ಯ ನಡೆಯುತ್ತಿದೆ ಎಂದು ಮಾಡುತ್ತಿರುವ ಆರೋಪವನ್ನು ಖಂಡಿಸಿ ಸೋಮವಾರ ಎಲ್ಲಾ ಅಂಗಡಿ,ಹೋಟೆಲ್, ಮನರಂಜನಾ ಕೇಂದ್ರಗಳನ್ನು ವರ್ತಕರು, ಕಾರ್ಮಿಕರು ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ಮಹಿಳಾ ಕಾರ್ಮಿಕರಾದ ರೂಪ ಮಾತನಾಡಿ, ನಾವು ಬಡ ಕುಟುಂಬದಿಂದ ಬಂದ ಮಹಿಳೆಯರಾಗಿದ್ದು, ಈ ಕೇಂದ್ರ ಕೆಲಸ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದೇವೆ. ನಾವು ಅನ್ಯೋನ್ಯತೆ, ಪರಸ್ಪರ ಸಹಭಾಳ್ವೆಯಿಂದ ಕೆಲಸ ನಿರ್ವಹಿಸುತ್ತಿದ್ದು, ಈ ಕೇಂದ್ರ ಭಾವೈಕ್ಯತೆ ಕೇಂದ್ರವಾಗಿದೆ ಎಂದು ಹೇಳಿದರು.

ಕಾರ್ಮಿಕ ಮಹಿಳೆ ಸುನೀತಾ ಮಾತನಾಡಿ, ಎನ್ಜಿಒ ಕೇಂದ್ರದಲ್ಲಿ ಮಹಿಳೆಯರು ಸುರಕ್ಷಿತ ಹಾಗೂ ರಕ್ಷಣೆ ಇದೆ.ಇಲ್ಲಿನ ಎಲ್ಲಾ ಅಂಗಡಿ ಮಾಲೀಕರು ಕಾರ್ಮಿಕ ಮಹಿಳೆಯರಿಗೆ ಯಾವುದೇ ತೊಂದರೆ ನೀಡುತ್ತಿಲ್ಲ. ನಾವೆಲ್ಲ ಕಾರ್ಮಿಕರು ಒಟ್ಟಾಗಿ ಕೆಲಸ ಮಾಡಿ ಕೊಂಡು ಹೋಗುತ್ತಿದ್ದೇವೆ ಎಂದರು.

ಅಂಗಡಿ ಮಾಲೀಕ ರಜಾಕ್ ಹೊಸಕೋಟೆ ಮಾತನಾಡಿ, ಇಲ್ಲಿ ಎಲ್ಲ ಜಾತಿ, ಧರ್ಮ ಜನರು ಕೆಲಸ ಮಾಡುವ ಮೂಲಕ ನೆಲ ಕಂಡು ಕೊಂಡಿದ್ದಾರೆ. ಪ್ರತಿ ವರ್ಷ ರಾಷ್ಟ್ರೀಯ ಹಬ್ಬಗಳು, ಎಲ್ಲ ಧರ್ಮದ ಹಬ್ಬಗಳನ್ನು ಎಲ್ಲರೂ ಒಟ್ಟಾಗಿ ಸೇರಿ ಆಚರಿಸಿಕೊಂಡು ಬರುತ್ತಿದ್ದೇವೆ. ಎನ್ಜಿಒ ಕೇಂದ್ರ ಆರಂಭಗೊಂಡು ಎರಡು ದಶಕಗಳು ಕಳೆದಿವೆ ಆದರೆ ಇಲ್ಲಿಯವರೆಗೆ ಯಾವುದೇ ರೀತಿಯ ಒಂದೂ ಮತ್ತು ಗಲಾಟೆ ನಡೆದಿಲ್ಲ.ಯಾವುದೇ ಪ್ರಕರಣ ದಾಖಲಾಗಿಲ್ಲ.ಎಲ್ಲಾ ಕಾರ್ಮಿಕರು ಸೌಹಾರ್ದತೆ, ಸಹಬಾಳ್ವೆ ಜೀವನ ಬದುಕು ಸಾಗಿಸುತ್ತಿದ್ದಾರೆ ಎಂದರು. ಸಿಎನ್ಜಿಒ ವ್ಯವಸ್ಥಾಪಕ ಆಶಾ ಸಲಾಂ, ಸಿಎನ್ಜಿಒ ಕೇಂದ್ರ ವ್ಯವಸ್ಥಾಪಕ ನಿರ್ದೇಶಕ ಅಬ್ದುಲ್ ಸಲಾಂ ಮಾತನಾಡಿದರು. ಈ ಸಂದರ್ಭ ಸಿಎನ್ಜಿಒ ಮುಖಂಡರಾದ ಶಾಂತಿ, ಯಜ್ಞತ ಹುಸೇನ್, ಜಸ್ವಿನ್, ಸತೀಶ್, ರಫೀಕ್ ಹಾಗೂ ಮಹಿಳಾ, ಕಾರ್ಮಿಕರು ಮತ್ತಿತರರು ಭಾಗವಹಿಸಿದ್ದರು.

ಕಟ್ಟಡ ಕಾರ್ಮಿಕರು ಸಂಘದ ಸದಸ್ಯರಾಗಿ, ಸೌಲಭ್ಯ ಪಡೆದುಕೊಳ್ಳಿ



ಸಭೆಯಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷ ಎಸ್.ಸೇದು ಮಾತನಾಡುತ್ತಿರುವುದು.

ವಿರಾಜಪೇಟೆ: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸದಸ್ಯತ್ವ ನೋಂದಣಿ ಮಾಡಿಕೊಳ್ಳುವುದರೊಂದಿಗೆ ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಓಂ ಶಕ್ತಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘದ ಅಧ್ಯಕ್ಷ ಎಸ್.ಸೇದು ತಿಳಿಸಿದರು.

ಓಂ ಶಕ್ತಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹಾಗೂ ಅಸಂಘಟಿತ ವಲಯದ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಟ್ಟಣದ ಪುರಭವನದಲ್ಲಿ ನಡೆದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸೌಲಭ್ಯಗಳು ಮೊದಲಿಗೆ ತ್ರಿಪುರ, ತಮಿಳುನಾಡು ಮತ್ತು ಕೇರಳರಾಜ್ಯದಲ್ಲಿದ್ದು, ನಂತರ 2007 ರಲ್ಲಿ ಹೋರಾಟದ ನಂತರ ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕರಿಗೆ ಸೌಲಭ್ಯಗಳು ದೊರಕುತ್ತಿದೆ ಎಂದರು.

ಓಂ ಶಕ್ತಿ ಸಂಘಟನೆಯ ಸಂಚಾಲಕರಾದ ಅನಿವರ್, ಖಜಾಂಚಿ ರಾಧಾ ಕೃಷ್ಣ, ಕಾರ್ಯದರ್ಶಿ ಕುಮಾರ್, ಸಹಕಾರ್ಯದರ್ಶಿ ಸುಬ್ರಹ್ಮಣ್ಯ ಅವರುಗಳು ಮಾತನಾಡಿದರು.

ಮಡಿಕೇರಿ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಮೋಹನ್ ಕುಮಾರ್ ಅಧಿಕಾರ ಸ್ವೀಕಾರ

ಮಡಿಕೇರಿ: ಮಡಿಕೇರಿ ಲಯನ್ಸ್ ಕ್ಲಬ್‌ನ 2026–27ನೇ ಸಾಲಿನ ನೂತನ ಅಧ್ಯಕ್ಷರಾಗಿ ಎಲ್.ಮೋಹನ್ ಕುಮಾರ್, ಕಾರ್ಯದರ್ಶಿಯಾಗಿ ಕೆ.ಮಧುಕರ್, ಖಜಾಂಚಿಯಾಗಿ ಅಂಬೆಕಲ್ ನವೀನ್ ಹಾಗೂ ಇತರ ಪದಾಧಿಕಾರಿಗಳು ಅಧಿಕಾರ ವಹಿಸಿಕೊಂಡರು.

ನಗರದ ಕಾವೇರಿ ಹಾಲ್‌ನಲ್ಲಿ ನಡೆದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಲಯನ್ಸ್ ಉಪ ರಾಜ್ಯಪಾಲ ಹಾಗೂ ಶಿಕ್ಷಣ ತಜ್ಞ ಹರಿಪ್ರಸಾದ್ ರೈ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಅವರು, ಲಯನ್ಸ್ ಸಂಸ್ಥೆ ಮಡಿಕೇರಿಯಲ್ಲಿ 61 ವಸಂತಗಳನ್ನು ಪೂರೈಸಿದ್ದು, ಸಾವಿರಾರು ಸಮಾಜಮುಖಿ ಸೇವೆಯ ಮೂಲಕ ತನ್ನದೇ ಛಾಪು ಮೂಡಿಸಿದೆ. ಸಂಸ್ಥೆಯ ನಿಯಮಗಳು, ಹಿರಿಯರ ಮಾರ್ಗದರ್ಶನ, ಸಂಸ್ಥೆಯ ಸಾಮಾಜಿಕ, ಶೈಕ್ಷಣಿಕ ಕಳಕಳಿ ಹಾಗೂ ಮಾನವೀಯ ಗುಣಗಳಿಂದ ಇದು ಸಾಧ್ಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಡಿಕೇರಿ ಲಯನ್ಸ್ ಸಂಸ್ಥೆ ಮತ್ತಷ್ಟು ಸಮಾಜ ಸೇವೆಯ ಮೂಲಕ



ಲಯನ್ಸ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಎಲ್.ಮೋಹನ್ ಕುಮಾರ್ ಅಧಿಕಾರ ಸ್ವೀಕರಿಸಿದರು.

ಜನರ ಹೃದಯವನ್ನು ಗೆಲ್ಲುವಂತಾಗಬೇಕು. ಆ ನಿಟ್ಟಿನಲ್ಲಿ ನೂತನ ಆಡಳಿತ ಮಂಡಳಿ ಹೆಜ್ಜೆ ಇರಿಸಬೇಕು ಎಂದು ಸಲಹೆ ನೀಡಿದರು.

ಮಡಿಕೇರಿ ಲಯನ್ಸ್ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಮಾತನಾಡಿದ ಎಲ್.ಮೋಹನ್‌ಕುಮಾರ್, ಎಲ್ಲರೂ ವಿಶ್ವಾಸಕ್ಕೆ ಪಡೆದು ಸಂಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗುತ್ತದೆ. ಮಾನವೀಯ ಮೌಲ್ಯ ಮತ್ತು ಸಮಾಜಸೇವೆಯ ಮೂಲಕ ಹಿರಿಯರು ಕಟ್ಟಿದ ಈ ಸಂಸ್ಥೆಯ ಧ್ಯೇಯ, ಉದ್ದೇಶಗಳನ್ನು ಎಲ್ಲರ ಸಹಕಾರದ ಮೂಲಕ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಸೇವಾ ಕಾರ್ಯಕ್ಕೆ ಆದ್ಯತೆ ನೀಡುವ ಮೂಲಕ ಎಲ್ಲರೂ ಸಮಾಜದ ಅಭಿವೃದ್ಧಿಗೆ ಸಂಕಲ್ಪ ತೊಡೋಣ ಎಂದು ಅಭಿಲಾಷೆ ವ್ಯಕ್ತಪಡಿಸಿದರು.

ಮಡಿಕೇರಿ ಲಯನ್ಸ್ ನಿರ್ಗಮಿತ ಅಧ್ಯಕ್ಷ ಮದನ್ ಮಾದಯ್ಯ, ಲಯನ್ಸ್ ಸಂಸ್ಥೆಯ ಪ್ರಾಂತೀಯ ಅಧ್ಯಕ್ಷ ಡಾ.ಪಂಚಮ್ ತಿಮ್ಮಯ್ಯ ಮಾತನಾಡಿದರು.

ಪ್ರತಿಭಾ ಪ್ರೋತ್ಸಾಹ: ಶೈಕ್ಷಣಿಕ ಸಾಧನೆ ಮಾಡಿದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಮೊದಲ ರ್‍ಯಾಂಕ್ ಪಡೆದ ಲಿನ್ಸಿ ದೇಚಮ್ಮ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಸಿಂಚನಾ ಪ್ರಸನ್ನ ಅವರನ್ನು ಸನ್ಮಾನಿಸಿದರು.

ಶಿಕ್ಷಕ ಟಿ.ಜಿ. ಪ್ರೇಮಕುಮಾರ್‌ಗೆ ವಿಜ್ಞಾನಿ ಡಾ. ಡಾರ್ವಿನ್ ಪ್ರಶಸ್ತಿ



ಟಿ.ಜಿ.ಪ್ರೇಮ ಕುಮಾರ್ ಅವರಿಗೆ ರಾಜ್ಯಮಟ್ಟದ ಡಾರ್ವಿನ್ ವಿಜ್ಞಾನ ಶಿಕ್ಷಕ ಪ್ರಶಸ್ತಿ ಲಭಿಸಿದೆ.

ಕುಶಾಲನಗರ: ಚಿತ್ರದುರ್ಗದ ತಾರಾ ಮಂಡಲ ಮತ್ತು ಪುಟಾಣಿ ವಿಜ್ಞಾನದ ಸಂಸ್ಥೆಯ ವತಿಯಿಂದ ಬೆಂಗಳೂರಿನ ಗಾಂಧಿ ಭವನದಲ್ಲಿ ಭಾನುವಾರ ವಿಜ್ಞಾನಿ ಚಾರ್ಲ್ ಡಾರ್ವಿನ್ ದ್ವಿ ಶತಮಾನೋತ್ಸವದ ಸಂದರ್ಭದಲ್ಲಿ ನಡೆದ ಸಮಾರಂಭದಲ್ಲಿ ಕುಶಾಲನಗರ ತಾಲ್ಲೂಕಿನ ಕೂಡುಮಂಗಳೂರು (ಕೂಡ್ಲೂರು)ಸರ್ಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಟಿ.ಜಿ.ಪ್ರೇಮಕುಮಾರ್ ಅವರಿಗೆ ರಾಜ್ಯಮಟ್ಟದ ಡಾರ್ವಿನ್ ವಿಜ್ಞಾನ ಶಿಕ್ಷಕ ಪ್ರಶಸ್ತಿ ಲಭಿಸಿದೆ.


ಶಾಲಾ ವಿಜ್ಞಾನ ಕಾರ್ಯಕ್ರಮಗಳ ಯಶಸ್ಸಿನ ಕ್ರಿಯಾಶೀಲ ಶಿಕ್ಷಕರಿಗೆ ಕೊಡಮಾಡುವ ಈ ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ಖ್ಯಾತಿ ಹಿರಿಯ ವಿಜ್ಞಾನಿ ಡಾ.ರಾಮಕೃಷ್ಣ ಅವರು ಪ್ರೇಮಕುಮಾರ್‌ಗೆ ನೀಡಿ ಗೌರವಿಸಿದರು.

ಮಕ್ಕಳಲ್ಲಿ ವಿಜ್ಞಾನ ವಿಷಯ ಕಲಿಕೆಯಲ್ಲಿ ಆಸಕ್ತಿ ಬೆಳೆಸುವುದು ಸೇರಿದಂತೆ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಮೂಲಕ ವಿದ್ಯಾರ್ಥಿಗಳ ಭವಿಷ್ಯದ ವಿಜ್ಞಾನಿಗಳಾಗಿ ರೂಪುಗೊಳ್ಳುವ ದಿಸೆಯಲ್ಲಿ ಜಿಲ್ಲೆಯಲ್ಲಿ ವಿವಿಧ ವಿಜ್ಞಾನ/ವ್ಯಜ್ಞಾನಿಕ ಮನೋಭಾವ ಬೆಳೆಸುವಲ್ಲಿ ಪ್ರೇಮಕುಮಾರ್ ತಮ್ಮನ್ನು 3 ದಶಕಗಳಿಂದ ತೊಡಗಿಸಿಕೊಂಡಿದ್ದಾರೆ.

ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಸಂಘಟಿಸುವ ಮೂಲಕ ಪ್ರತಿ ವರ್ಷ ಜಿಲ್ಲೆಯಿಂದ 2–3 ಬಾಲ ವಿಜ್ಞಾನಿಗಳು ರಾಷ್ಟ್ರಮಟ್ಟದಲ್ಲಿ ವೈಜ್ಞಾನಿಕ ಯೋಜನಾ ಪ್ರಬಂಧಮಂಡಿಸಲು ಆಯ್ಕೆಯಾಗುತ್ತಿರುವುದು ಇವರ ವಿಜ್ಞಾನ ಸಂಘಟನೆಗೆ ಸಿಕ್ಕ ಪ್ರತಿಫಲವಾಗಿದೆ. ಸಮಾರಂಭದಲ್ಲಿ ಡಾ ಎಚ್.ಎಸ್.ನಿರಂಜನ ಆರಾಧ್ಯ ಇತರರಿದ್ದರು.

ಚಾ.ನಗರ ಜಿಲ್ಲಾ ನ್ಯಾಯಾಲಯಕ್ಕೆ 3ನೇ ಬಾರಿ ಬಾಂಬ್ ಬೆದರಿಕೆ

ಚಾಮರಾಜನಗರ: ಜಿಲ್ಲಾ ನ್ಯಾಯಾಲಯಕ್ಕೆ 3ನೇ ಬಾರಿ ಕಿಡಿಗೇಡಿಗಳು ಹುಸಿ ಬಾಂಬ್ ಬೆದರಿಕೆ ಇ–ಮೇಲ್ ಸಂದೇಶವನ್ನು ಕಳುಹಿಸಿದ್ದು, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದಾರೆ.



ಜಿಲ್ಲಾ ನ್ಯಾಯಾಲಯವನ್ನು ಶೋಧ ನಡೆಸುತ್ತಿರುವ ಪೊಲೀಸರು.

ಚಾಮರಾಜನಗರ ಜಿಲ್ಲಾ ಸತ್ರ ಮತ್ತು ಪ್ರಧಾನ ನ್ಯಾಯಾಲಯಕ್ಕೆ ಡಾರ್ಕ್‌ವೆಬ್ ಮೂಲಕ ಅಂಬುಜಾಥನ್ ಅರಿಯಪ್ಪನ್ ಎಂಬಾತನ ಹೆಸರಿನಲ್ಲಿ ಇ–ಮೇಲ್ ಕಳುಹಿಸಲಾಗಿದ್ದು, ಬೆಂಗಳೂರಿನ ಇಸ್ರೇಲ್ ರಾಯಭಾರಿ ಕಚೇರಿ ಮತ್ತು ಚಾಮರಾಜನಗರ ನ್ಯಾಯಾಲಯದಲ್ಲಿ ಕೆಮಿಕಲ್ ಬಾಂಬ್ ಇಡಲಾಗಿದೆ. ಮಧ್ಯಾಹ್ನ 1ಕ್ಕೆ ಸ್ಫೋಟಗೊಳ್ಳಲಿದೆ ಎಂದು ಮೇಲ್‌ನಲ್ಲಿ ಸಂದೇಶ ಬಂದಿದೆ.

ಮತ್ತೆ ಬಾಂಬ್ ಬೆದರಿಕೆ: ಸೋಮವಾರ ಬೆಳಗ್ಗೆ ಮೂರನೇ ಬಾರಿ ಬಾಂಬ್ ಬೆದರಿಕೆ ಮೇಲ್ ಬಂದಿದ್ದು, ಕಳೆದ ಜೂ. 27ರಂದು ತಮಿಳುನಾಡು ಮಾಜಿ ಸಿಎಂ ಸ್ಟಾಲಿನ್ ಪತ್ನಿ, ದುರ್ಗಾ ಸ್ಟಾಲಿನ್ ಪ್ರವಾದಿ ಮಹಮ್ಮದ್‌ಗೆ ಅಪಮಾನ ಮಾಡಿದ್ದು, ಚಾಮರಾಜನಗರ ಕೋರ್ಟ್ ರಸ್ತೆಯಲ್ಲಿ 3 ಸಿಲಿಕಾನ್ ಬಾಂಬ್, ನ್ಯಾಯಲಯದ ರೆಕಾರ್ಡ್ ರೂಂನಲ್ಲಿ 3 ಹಾಗೂ ಇ–ಸೇವಾ ಕೇಂದ್ರದಲ್ಲಿ 2 ಬಾಂಬ್ ಇಡಲಾಗಿದ್ದು, ಮಧ್ಯಾಹ್ನ 2.25ಕ್ಕೆ ಸ್ಫೋಟಗೊಳ್ಳಲಿದೆ ಎಂದು ಮೇಲ್ ಬಂದಿತ್ತು. ಅದಕ್ಕೂ ಮೊದಲು ಜೂ. 24ರಂದು ಅಜ್ಮಲ್ ಕಸಬ್ ಎಂಬಾತನ ಹೆಸರಿನಲ್ಲಿ ಮೇಲ್ ಕಳುಹಿಸಿ ಬಾಂಬ್ ಬೆದರಿಕೆ ಹಾಕಲಾಗಿತ್ತು.

ಕೋರ್ಟ್ ಸಮಯ ವ್ಯರ್ಥ: ಹುಸಿ ಬಾಂಬ್ ಬೆದರಿಕೆಯಿಂದಾಗಿ ನ್ಯಾಯಾಲಯದ ಸಮಯ ವ್ಯರ್ಥವಾಗಿದೆ. ಬೆಳಗ್ಗೆ 11 ಗಂಟೆಗೆ ಆರಂಭವಾಗಬೇಕಿದ್ದ ಕಾರ್ಯಕಲಾಪ ಮಧ್ಯಾಹ್ನ 12ರ ತನಕವೂ ಬಾಂಬ್ ಪತ್ತೆದಳ ಶೋಧನೆ ನಡೆಸಿದ್ದರಿಂದ ಒಂದು ಗಂಟೆಗಳ ವಿಳಂಬವಾಯಿತು. ಹೀಗಾಗಿ ಸಾರ್ವಜನಿಕರು, ವಕೀಲರು ನ್ಯಾಯಾಲಯದ ಆವರಣದಲ್ಲಿ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.

ಜಿಲ್ಲಾ ವಕೀಲರ ಸಂಘದಿಂದ ಕಳವಳ: ಈ ಕುರಿತು ಚಾಮರಾಜನಗರ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ ಮಾತನಾಡಿ, ಬೆದರಿಕೆ ಹಾಕುತ್ತಿರುವ ಕಿಡಿಗೇಡಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಬಾಂಬ್ ಬೆದರಿಕೆ ಬಂದಾಗಿನಿಂದ ವಕೀಲರು ಮತ್ತು ಕಕ್ಷಿದಾರರಲ್ಲಿ ಗೊಂದಲಮಯವಾಗಿದೆ. ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ವಸತಿ ಶಾಲೆಗಳಲ್ಲಿ ಇಂಗ್ಲೀಷ್, ಹಿಂದಿ, ದೈಹಿಕ ಶಿಕ್ಷಣ ಅತಿಥಿ ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಜಿಲ್ಲೆಯ ವಸತಿ ಶಾಲೆಗಳಲ್ಲಿ ಇಂಗ್ಲೀಷ್, ಹಿಂದಿ ಮತ್ತು ದೈಹಿಕ ಶಿಕ್ಷಣ ಅತಿಥಿ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ವಸತಿ ಶಾಲೆಗಳಲ್ಲಿ ಇಂಗ್ಲೀಷ್–ಹಿಂದಿ ವಿಷಯದಲ್ಲಿ ತಲಾ 2, ದೈಹಿಕ ಶಿಕ್ಷಣ ವಿಷಯದಲ್ಲಿ 5 ಅತಿಥಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇಂಗ್ಲೀಷ್ ಮತ್ತು ಹಿಂದಿ ವಿಷಯಗಳಿಗೆ ಬಿ.ಎ, ಬಿ.ಇಡಿ ಜೊತೆಗೆ ಟಿ.ಇ.ಟಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ದೈಹಿಕ ಶಿಕ್ಷಾ ಶಿಕ್ಷರಿಗೆ ಬಿ.ಎ, ಬಿ.ಪಿ.ಇಡಿ ಅರ್ಹತೆ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು ಸ್ವವಿವರಗಳನ್ನು ಒಳಗೊಂಡ ಮತ್ತು ಶೈಕ್ಷಣಿಕ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಜು.4ರೊಳಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಹಾಗೂ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾದಕ ವಸ್ತು ವಿರುದ್ಧ ಜಾಗೃತಿ ಜಾಥಾ



ಯಳಂದೂರಿನಲ್ಲಿ ಮಾದಕ ವಸ್ತು ಬಳಕೆ ವಿರುದ್ಧ ಜಾಗೃತಿ ಜಾಥಾ ಕಾರ್ಯಕ್ರಮ ನಡೆಯಿತು.

ಯಳಂದೂರು, ಜೂ.29– ಯಳಂದೂರು ಪಟ್ಟಣದಲ್ಲಿ ಮಾದಕ ವಸ್ತು ಬಳಕೆ ವಿರುದ್ಧ ಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅಂತಾರಾಷ್ಟ್ರೀಯ ಮಾದಕ ದ್ರವ್ಯ ಬಳಕೆ ಹಾಗೂ ಕಳ್ಳ ಸಾಗಣೆ ವಿರೋಧಿ ದಿನದ ಅಂಗವಾಗಿ ಯಳಂದೂರು ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಜಾಗೃತಿ ಜಾಥಾ ನಡೆಯಿತು.

ಯಳಂದೂರು ಪೊಲೀಸ್ ಠಾಣೆ ಆಶ್ರಯದಲ್ಲಿ ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆ ಮುಂಭಾಗ ಜಾಗೃತಿ ಆಂದೋಲನ ಜಾಥಾ ಕಾರ್ಯಕ್ರಮದಲ್ಲಿ 350ಕ್ಕೂ ಹೆಚ್ಚು ವಿವಿಧ ಶಾಲಾ ಮಕ್ಕಳು, ಪೊಲೀಸರು ಪಾಲ್ಗೊಂಡಿದ್ದರು.

ಈ ಜಾಥಾಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಸುಬ್ರಹ್ಮಣ್ಯ ಚಾಲನೆ ನೀಡಿದರು. ಮಾದಕ ವಸ್ತುಗಳ ಕುರಿತು ಮಾಹಿತಿ ನೀಡುವ ಜತೆಗೆ ಅದರಿಂದ ಆಗುವ ಪರಿಣಾಮದ ವಿವರ ನೀಡಿದ ಫಲಕಗಳು ಹಾಗೂ ಘೋಷ ವಾಕ್ಯದ ಫಲಕ ಹಿಡಿದು ವಿದ್ಯಾರ್ಥಿಗಳು ಪಟ್ಟಣದ ಪ್ರಮುಖ ರಸ್ತೆಯಲ್ಲಿ ಹೆಜ್ಜೆ ಹಾಕಿ ಜಾಗೃತಿ ಮೂಡಿಸಿದರು.

ಈ ವೇಳೆ ಸಿಪಿಐ ಸುಬ್ರಮಣ್ಯ ಅವರು ಮಾತನಾಡಿ ಇತ್ತೀಚಿನ ವರ್ಷಗಳಲ್ಲಿ ಯುವ ಪೀಳಿಗೆ ಮಾದಕ ವ್ಯಸನಿಗಳಾಗುತ್ತಿದ್ದು ಇದನ್ನು ದುರುಪಯೋಗ ಮಾಡಿಕೊಂಡ ಮಾದಕ ವಸ್ತು ಸಾಗಣೆದಾರರು ಮಾದಕ ವಸ್ತುಗಳನ್ನು ಕಳ್ಳ ಸಾಗಣೆ ಮಾಡಿ ದೇಶದ ಯುವ ಶಕ್ತಿಗೆ ಮಾರಕವಾಗುತ್ತಿದ್ದಾರೆ ಎಂದು ವಿಷಾದಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ಹಾಗೂ ವಿವಿಧ ಶಾಲೆಯ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ವಿವಿಧ ಶಾಲೆಯ ಶಿಕ್ಷಕರು, ಪೊಲೀಸ್ ಸಿಬ್ಬಂದಿ ಮತ್ತಿತರರು ಹಾಜರಿದ್ದರು.

ಮನೆ ನಿರ್ಮಾಣಕ್ಕೆ ಭೂಮಿ ಪೂಜೆ



ಗುಂಡ್ಲುಪೇಟೆ, ಜೂ.29– ತಾಲೂಕಿನ ಕಗ್ಗಳ ಹಾಗೂ ಬಸವಪುರದಲ್ಲಿ ನಿರ್ಗತಿಕರಿಗೆ ಮನೆ ಕಟ್ಟಿಕೊಡಲು ಮಾತೃ ಶ್ರೀ ಹೇಮಾವತಿ ಅಮ್ಮನವರ ಆಶಯದಂತೆ 2 ಮನೆಗೂ ಭೂಮಿ ಪೂಜೆ ಮಾಡಲಾಯಿತು

ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಎಸ್‌ಕೆಡಿಆರ್‌ಡಿಪಿ ಸಂಸ್ಥೆಯ ಜಿಲ್ಲಾ ನಿರ್ದೇಶಕ ದಿನೇಶ್ ಮಾತನಾಡಿ ಕಟ್ಟ ಕಡೆಯ ನಿರ್ಗತಿಕರಿಗೆ ಯಾರು ಇಲ್ಲ ಅನ್ನೋ ಮನೋಭಾವದ ನಿರಾಶ್ರಿತರಿಗೆ ನಾವಿದ್ದೇವೆ ಎಂಬ ಆತ್ಮಸ್ಥೈರ್ಯವನ್ನು ತುಂಬಿ ಅವರಿಗೇ ಸಮಾಜದಲ್ಲಿ ಗೌರವಯುತವಾಗಿ ಬದುಕಲು ಧರ್ಮಸ್ಥಳ ಸಂಸ್ಥೆ ಶ್ರಮಿಸುತ್ತಿದೆ ಹಾಗೂ ತಿಂಗಳಿಗೆ 1000 ದಂತೆ ಮಾಸಾಶನ ಮೊತ್ತ ಹಾಗೂ ಪೌಷ್ಟಿಕ ಆಹಾರ ಕಿಟ್ ವಾತ್ಸಲ್ಯ ಮಿಕ್ಸ್ (ಫ್ರೆಶ್) ಹಾಗೂ ವಾತ್ಸಲ್ಯ ಕಿಟ್‌ನ್ನು ನೀಡುತ್ತಿದ್ದೇವೆ ಹಾಗೂ ವಾತ್ಸಲ್ಯ ಫಲಾನುಭವಿಗಳಿಗೆ ಶೌಚಾಲಯ ಕಟ್ಟಿಕೊಡುವುದು, ಮನೆ ರಿಪೇರಿ, ಸೋಲಾರ್ ಅಳವಡಿಕೆ ಮಾಡಿಕೊಡಲಾಗಿದೆ ಎಂದರು. ಊರಿನ ಮುಖಂಡರು ಧರ್ಮಸ್ಥಳ ಸಂಸ್ಥೆ ಮಾಡುತ್ತಿರುವ ಜನ ಉಪಯೋಗಿ ಕೆಲಸಗಳ ಬಗ್ಗೆ ಪ್ರಶಂಸೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ಚಂದ್ರಶೇಖರ್, ಜನಜಾಗೃತಿ ವೇದಿಕೆ ಯೋಜನಾಧಿಕಾರಿ ಮುಖೇಶ್, ತಾಲೂಕು ಸಮನ್ವಯಾಧಿಕಾರಿ ಚೈತ್ರ, ಊರಿನ ಮುಖಂಡರಾದಂತಹ ಸಿದ್ದಶೆಟ್ಟಿ, ಸಿದ್ದರಾಜು, ಮಾಜಿ ಪಂ ಅಧ್ಯಕ್ಷರು ನಾಗೇಶ್, ಅರ್ಚಕ ನಾಗೇಂದ್ರ, ಮೇಸ್ತ್ರಿ ರಂಗಸ್ವಾಮಿ, ಸೇವಾ ಪ್ರತಿನಿಧಿ ಸುನಿತಾ ಮತ್ತು ಮಹಾದೇವಮ್ಮ ಹಾಗೂ ಮೇಲ್ವಿಚಾರಕಿ ರಾಜೇಶ್ವರಿ ಗ್ರಾಮಸ್ಥರು, ಮುಖಂಡರು ಉಪಸ್ಥಿತರಿದ್ದರು.

ನೂತನ ಜಿಲ್ಲಾ ಕೇಂದ್ರ ಗ್ರಂಥಾಲಯ ಕಟ್ಟಡ ಲೋಕಾರ್ಪಣೆ

ಚಾಮರಾಜನಗರ: ಶಾಸಕ ಪುಟ್ಟರಂಗ ಶೆಟ್ಟಿ ನಗರದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಜಿಲ್ಲಾ ಕೇಂದ್ರ ಗ್ರಂಥಾಲಯ ಕಟ್ಟಡವನ್ನು ಲೋಕಾರ್ಪಣೆ ಮಾಡಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯ ಸಂಯುಕ್ತಾಶ್ರಯದಲ್ಲಿ ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿಂದು ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 3 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ನೂತನ ಗ್ರಂಥಾಲಯ ಕಟ್ಟಡವನ್ನು ಉದ್ಘಾಟಿಸಿದರು.

ಜಿಲ್ಲಾ ಕೇಂದ್ರ ಗ್ರಂಥಾಲಯ ಕಟ್ಟಡದಲ್ಲಿರುವ ದೈನಂದಿನ ದಿನಪತ್ರಿಕೆ ಓದುವ ಕೊಠಡಿ, ಗ್ರಂಥಾಲಯದಲ್ಲಿರುವ ಪುಸ್ತಕ ಭಂಡಾರ, ಕಟ್ಟಡದ ಮೊದಲ ಮಹಡಿಗೆ ಹೋಗುವ ಲಿಫ್ಟ್ ಹಾಗೂ ಸಭಾಂಗಣ ವೀಕ್ಷಿಸಿದರು. ಬಳಿಕ ನೂತನ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಜಿಲ್ಲಾಕೇಂದ್ರದಲ್ಲಿ ಪುಸ್ತಕ ಪ್ರೇಮಿಗಳ ಬಹುದಿನಗಳ ಬೇಡಿಕೆಯಾಗಿದ್ದ ಸುಸಜ್ಜಿತ ಗ್ರಂಥಾಲಯವನ್ನು ಓದುಗರಿಗೆ ಮುಕ್ತಗೊಳಿಸಲಾಗಿದೆ. ಗ್ರಂಥಾಲಯ ಇಲಾಖೆಯಿಂದ 1 ಕೋಟಿ



ಶಾಸಕ ಪುಟ್ಟರಂಗ ಶೆಟ್ಟಿ ಚಾಮರಾಜನಗರದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಜಿಲ್ಲಾ ಕೇಂದ್ರ ಗ್ರಂಥಾಲಯ ಕಟ್ಟಡವನ್ನು ಲೋಕಾರ್ಪಣೆ ಮಾಡಿದರು.

ಹಾಗೂ ಜಿಲ್ಲೆಯ ನಗರ, ಸ್ಥಳೀಯ ಸಂಸ್ಥೆಗಳ 2 ಕೋಟಿ ವಿಶೇಷ ಅನುದಾನ (ಶೇ.6) ಸೇರಿದಂತೆ ಒಟ್ಟು 3 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಸಾರ್ವಜನಿಕರು, ವಿದ್ಯಾರ್ಥಿಗಳು ಗ್ರಂಥಾಲಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ನೂತನ ಗ್ರಂಥಾಲಯ ಕಟ್ಟಡದಲ್ಲಿ 6080 ಪುಸ್ತಕಗಳ ಸಂಗ್ರಹವಿದ್ದು, ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಪುಸ್ತಕಪ್ರೇಮಿಗಳು ಸೇರಿದಂತೆ ಎಲ್ಲರಿಗೂ ಅನುಕೂಲವಾಗುವಂತೆ ನಗರದ ಹೃದಯಭಾಗದಲ್ಲಿ ನೂತನ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ. ಶೇ. 95ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಸುತ್ತುಗೋಡೆ, ಇತರೆ ಮೂಲಸೌಲಭ್ಯ ಕಾಮಗಾರಿಗಳಿಗಾಗಿ ಹೆಚ್ಚುವರಿ ಅನುದಾನ ಅಗತ್ಯವಾಗಿದೆ. ಮುಂದಿನ ದಿನಗಳಲ್ಲಿ ಸಿ.ಎಸ್.ಆರ್. ಫಂಡ್ ಹಾಗೂ ಎಂ.ಎಸ್.ಐ.ಎಲ್‌ನಿಂದ ಅವಶ್ಯ ಅನುದಾನ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷರಾದ ಎಚ್.ವಿ. ಚಂದ್ರು, ನಗರಸಭೆ ಪೌರಾಯುಕ್ತರಾದ ಪರಶುರಾಮ್ ಛಲವಾದಿ, ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ ಶಿವಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇಂದು ನಾಡಪ್ರಭು ಕೆಂಪೇಗೌಡ ಜಯಂತಿ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಜೂ.30ರಂದು ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಶಾಸಕ ಪುಟ್ಟರಂಗಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ.ವಿವೇಕಾನಂದ, ಪಿ. ಮರಿಸ್ವಾಮಿ, ಹೆಚ್.ವಿ. ಚಂದ್ರು, ಮಹಮದ್ ಅಸ್ಗರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಸಾಹಿತಿ ಟಿ.ಸತೀಶ್ ಜವರೇ ಗೌಡ ಮುಖ್ಯ ಭಾಷಣ ಮಾಡುವರು.

ಬಂಗಾರು ನಿಧನ



ಚಾಮರಾಜನಗರ: ನಗರದ ವಿವೇಕನಗರ ಬಡಾವಣೆ ನಿವಾಸಿ, ಕೆ. ಬಸವನಪುರದ ಬಂಗಾರು (48) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 2 ಗಂಟೆಗೆ ಕೆ.ಬಸವನಪುರದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಮಂಗಳವಾರ 30 ಜೂನ್ 2026

ಬೃಹತ್ ಕಟೌಟ್‌ಗಳ ಮಾರ್ಗವಾದ ಮೈಸೂರು ಪ್ರತಿಷ್ಠಿತ ವಾಣಿಜ್ಯ ಮಾರ್ಗ ದೇವರಾಜ ಅರಸು ರಸ್ತೆ

●ರಾರಾಜಿಸುವ ಕಟೌಟ್‌ಗಳಿಂದ ಸಂಚಾರ, ಸಾರ್ವಜನಿಕರ ಸುರಕ್ಷತೆ ಆತಂಕ ●ಮಳಿಗೆ ಎತ್ತರ ಮೀರಿಸುವಷ್ಟು ಬೃಹತ್ ಕಟೌಟ್ ನೋಡಲು ಇಲ್ಲಿಗೆ ಭೇಟಿ ನೀಡಿ! ●ಇದು ಮೈಸೂರು ಮಹಾನಗರ ಪಾಲಿಕೆ ಆಡಳಿತ ವೈಖರಿ ಚಮತ್ಕಾರ!!



ಮೈಸೂರು,ಜೂ.29(ಪಿಎಂ)– ಮೈಸೂರು ನಗರದ ಪಾರಂಪರಿಕ ಹಾಗೂ ಸಹಜ ಸೌಂದರ್ಯಕ್ಕೆ ಬ್ಯಾನರ್, ಕಟೌಟ್ ಹಾವಳಿ ಧಕ್ಕೆ ಉಂಟು ಮಾಡುತ್ತಿದ್ದು, ಅದರಲ್ಲಿಯೂ ಮೈಸೂರಿನ ಪ್ರತಿಷ್ಠಿತ ವಾಣಿಜ್ಯ ಮಾರ್ಗ ಡಿ.ದೇವರಾಜ ಅರಸು ರಸ್ತೆಯು ಇಕ್ಕೆಲುಗಳು ಬೃಹತ್ ಕಟೌಟ್ ಅಳವಡಿಕೆಯ ತಾಣವಾಗಿ ಪರಿಣಮಿಸಿದೆ.

ಇಲ್ಲಿ ರಾಜಕೀಯ ನಾಯಕರ ಆಗಮನ, ಜನ್ಮದಿನ, ಸ್ಥಳೀಯ ರಾಜಕಾರಣಿಗಳ ಜನ್ಮದಿನ, ವಿವಿಧ ಪದವಿಗಳಿಗೆ ನೇಮಕ ಮೊದಲಾದ ಕಾರಣಗಳಿಗೆ ಶುಭ ಕೋರಲು ಆಗಾಗ್ಗೆ ಬೃಹತ್ ಕಟೌಟ್‌ಗಳು ಅಳವಡಿಕೆ ಎಗ್ಗಿಲ್ಲದೆ ಸಾಗಿದೆ. ಈ ರಸ್ತೆಯಲ್ಲಿ ಕೆಆರ್ ವೃತ್ತದಿಂದ ಮಹಾರಾಣಿ ಕಾಲೇಜು ಜಂಕ್ಷನ್ (ದೇವರಾಜ ಅರಸು ರಸ್ತೆ ಹಾಗೂ ಜೆಎಲ್‌ಬಿ ರಸ್ತೆ ಜಂಕ್ಷನ್)ವರೆಗೂ ಸೋಮವಾರ 10ಕ್ಕೂ ಹೆಚ್ಚು ಸ್ಥಳಗಳಲ್ಲಿ ಕಟೌಟ್ ಅಳವಡಿಸಲು ವ್ಯವಸ್ಥೆಗೊಳಿಸುವ ಕಬ್ಬಿಣದ ಪಿಲ್ಲರ್‌ಗಳು ನೆಲೆಗೊಂಡಿವೆ. ಇವುಗಳನ್ನು ಹಾಕಿದವರ್ಯಾರು? ಇವುಗಳಿಗೆ ಪಾಲಿಕೆ ಅನುಮತಿ ನೀಡಿದೆಯೇ? ನೀಡಿದ್ದರೆ ಯಾವ ಮಾನದಂಡ ಅನುಸರಿಸಲಾಗಿದೆ? ವಾಹನ ಹಾಗೂ ಜನದಟ್ಟಣೆ ನಡುವೆ ಇದಕ್ಕೆ ಅನುಮತಿ ನೀಡಲು ಪಾಲಿಕೆಗೇನು ಬಂತು? ಹೀಗೆ ಜನ ಪ್ರಶ್ನೆಗಳ ಮಳೆ ಸುರಿಸುತ್ತಿದ್ದಾರೆ.

ಈ ಕಬ್ಬಿಣದ ಸಲಾಕೆಗೆ (ಪಿಲ್ಲರ್) ಅಳವಡಿಸಿದ್ದ ಬ್ಯಾನರ್, ಕಟೌಟ್ ತೆರವು ಮಾಡಿದ್ದರೂ ಮತ್ತೊಬ್ಬರ ಪ್ರಚಾರಕ್ಕೆ ಸಜ್ಜುಗೊಳಿಸಿರಲೂಬಹುದು. ಕಟೌಟ್ ಇದ್ದಾಗ, ಅವಲಕ್ಷಣ ಹೇಳತೀರದು, ಇನ್ನು ಕಟೌಟ್ ತೆರವು ಮಾಡಿದ ಬಳಿಕ ಎತ್ತರಕ್ಕೆ ಗಗನ ಚುಂಬಿಸುವಂತೆ ನಿಂತಿರುವ ಕಬ್ಬಿಣ ಸಲಾಕೆಗಳು ರಸ್ತೆ ಉದ್ದಕ್ಕೂ ಕಂಡುಬರುವುದನ್ನು ನೋಡಿದರೆ ಇಲ್ಲಿ ಯಾವುದೂ ಕಟ್ಟಡ ನಿರ್ಮಾಣ ಮಾಡುತ್ತಿರಬೇಕು ಎಂದುಕೊಂಡರೂ ಅಚ್ಚರಿ ಇಲ್ಲ.

ಕಟೌಟ್ ಅಳವಡಿಸಲು ಮಾಡಿಕೊಂಡಿರುವ ಕಬ್ಬಿಣ ಸಲಾಕೆಗಳ ವ್ಯವಸ್ಥೆಯು ಇಲ್ಲಿರುವ ಮಳಿಗೆಗಳ ಎತ್ತರವನ್ನೂ ಮೀರಿಸುವಂತಿವೆ. ಸುಮಾರು 50 ಅಡಿ ಎತ್ತರ ಹಾಗೂ ಭಾರೀ ಅಗಲವಾಗಿರುವ ಕಟೌಟ್ ಅಳವಡಿಕೆಯಿಂದ ಸಂಚಾರಕ್ಕೂ ಅಡಚಣೆ ಉಂಟು ಮಾಡುವುದಲ್ಲದೆ, ರಾತ್ರಿ ವೇಳೆ ಬೀದಿದೀಪದ ಬೆಳಕು ಸೂಸಲೂ ಅಡೆತಡೆ ಮಾಡಲಾಗುತ್ತಿದೆ. ಇಂತಹ ಅವ್ಯವಸ್ಥೆಗೆ ಕಾರಣವಾಗುವ ಈ ವ್ಯವಸ್ಥೆ ಮಾಡಿಕೊಟ್ಟು ಪ್ರಚಾರದ ಗೀಳಿಗೆ ಏಕೆ ಉತ್ತೇಜನ ನೀಡಬೇಕು ಎಂಬ ಪ್ರಶ್ನೆ ಸಾರ್ವಜನಿಕ ವಲಯದಿಂದ ಕೇಳಿಬಂದಿದೆ.

ಪ್ರಮುಖ ವಾಣಿಜ್ಯ ಪ್ರದೇಶ: ದೇವರಾಜ ಅರಸು ರಸ್ತೆಯು ಮೈಸೂರು ನಗರದ ಪ್ರಮುಖ ವಾಣಿಜ್ಯ ವಹಿವಾಟು ಪ್ರದೇಶವಾಗಿದೆ. ಕೆಆರ್ ವೃತ್ತದಿಂದ ಹಿಡಿದು ಜೆಎಲ್‌ಬಿ ರಸ್ತೆಯವರೆಗೆ ಸುಮಾರು ಒಂದು ಕಿ.ಮೀ. ವಿಸ್ತರಣೆ ಹೊಂದಿರುವ ಈ ರಸ್ತೆಯಲ್ಲಿ ಮೊಬೈಲ್, ಬಟ್ಟೆ ತಿಂಡಿ ತಿನಿಸು, ಚಿನ್ನಾಭರಣ ಸೇರಿದಂತೆ ವೈವಿಧ್ಯಮಯ ಸಾಮಗ್ರಿಗಳ ಮಾರಾಟ ಮಳಿಗೆಗಳು ಇಲ್ಲಿದ್ದು, ನಿತ್ಯ ಇಲ್ಲಿ ಜನ ದಟ್ಟಣೆ ಸಾಮಾನ್ಯ. ಇಂತಹ ಸನ್ನಿವೇಶದಲ್ಲಿ ಈ ರೀತಿಯ ತಾತ್ಕಾಲಿಕ ಸಲಾಕೆಗಳ ಅಳವಡಿಕೆ ಮಾಡುವುದು ಅಪಾಯಕಾರಿ ಅಲ್ಲವೇ ಎಂದು ನಾಗರಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ರಸ್ತೆಯಲ್ಲಿ ಬಹುತೇಕ ಸಂದರ್ಭದಲ್ಲಿ ರಾಜಕೀಯ ನಾಯಕರಿಗೆ ವಿವಿಧ ಕಾರಣಕ್ಕೆ ಶುಭ ಕೋರುವ ಕಟೌಟ್ ನಿಲ್ಲಿಸುವುದೇ ಹೆಚ್ಚು ಎನ್ನುತ್ತಾರೆ ಸಾರ್ವಜನಿಕರು. ಪಾಲಿಕೆಯಿಂದಲೇ ಹೀಗೆ ಪ್ರಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದರೆ ಅದು ನಿಜಕ್ಕೂ ದುರ್ದೈವ. ಅಲ್ಲದೆ, ಇದು ಪಾಲಿಕೆ ಆಡಳಿತ ವೈಖರಿಗೆ ಹಿಡಿದಿರುವ ಬುದ್ಧಿಗೇಡಿತನ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಬಹುತೇಕ ಭಾಗಗಳಲ್ಲಿ ಫುಟ್‌ಪಾತ್ ಅತಿಕ್ರಮಿಸಿ ಮಳಿಗೆಗಳ ಜಾಹೀರಾತು ಫಲಕ ಪ್ರದರ್ಶಿಸುವ ಖಯಾಲಿಗೂ ಕಡಿವಾಣ ಹಾಕುವಲ್ಲಿ ಪಾಲಿಕೆ ವಿಫಲವಾಗಿದೆ. ಇದರ ಪರಿಣಾಮ ಪಾದಚಾರಿಗಳು ರಸ್ತೆಯಲ್ಲಿ ಸಂಚರಿಸುವ ಅನಿವಾರ್ಯತೆ ಎದುರಾಗಿದೆ. ವಾಹನಗಳು ಚಲಿಸುವ ರಸ್ತೆಯಲ್ಲಿ ಪಾದಚಾರಿಗಳು ಸಾಗುವುದು ಅಪಾಯವಲ್ಲವೇ ಎಂಬುದು ಪ್ರಜ್ಞಾವಂತ ನಾಗರಿಕರ ಪ್ರಶ್ನೆಯಾಗಿದೆ.

ಇನ್ನು ಬಿಡಾಡಿ ಹಸುಗಳು ರಸ್ತೆಯಲ್ಲಿ ಸಂಚರಿಸುವುದಕ್ಕೂ ತಡೆಯೊಡ್ಡಲು ಪಾಲಿಕೆಯಿಂದ ಸಾಧ್ಯವಾಗಿಲ್ಲ. ಅಡ್ಡಾದಿಡ್ಡಿಯಾಗಿ ಸಂಚರಿಸುವ ಈ ಹಸುಗಳ ನಡುವೆ ವಾಹನ ಸವಾರರು ಸಾಗುವುದು ಅಪಾಯಕಾರಿಯಾಗಿದ್ದು, ಪಾಲಿಕೆಯಂತೂ ಈ ಬಗ್ಗೆ ತಲೆ ಕೆಡಿಸಿಕೊಂಡಂತೆಯೇ ಕಾಣುತ್ತಿಲ್ಲ ಎನ್ನುತ್ತಾರೆ ನಾಗರಿಕರು. ಈ ನಡುವೆ ನಗರದಲ್ಲಿ ಆಗಾಗ್ಗೆ ರಾರಾಜಿಸುವ ಬ್ಯಾನರ್, ಕಟೌಟ್ ಸೇರಿದಂತೆ ಪ್ರಚಾರ ಸಾಮಗ್ರಿಗಳ ಭರಾಟೆ ಮೈಸೂರಿನ ಅಂದಗೆಡಿಸುತ್ತಿದೆ.



ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ಕಟೌಟ್ ಅಳವಡಿಸಲು ನಿಲ್ಲಿಸಿರುವ ಬೃಹತ್ ಕಬ್ಬಿಣದ ಪಿಲ್ಲರ್‌ಗಳನ್ನು ಚಿತ್ರಗಳಲ್ಲಿ ಕಾಣಬಹುದು.

"ಇಡೀ ಮೈಸೂರಿನಲ್ಲಿ ಎಲ್ಲಿಯಾದರೂ ಅನುಮತಿ ಇಲ್ಲದೆ, ಆ ರೀತಿಯ ಕಟೌಟ್, ಬ್ಯಾನರ್ ಅಳವಡಿಕೆಗೆ ಅವಕಾಶ ಇಲ್ಲ. ಪಾಲಿಕೆ ಆಯುಕ್ತರ ಅನುಮತಿ ಅಗತ್ಯವಾಗುತ್ತದೆ. ಪಾಲಿಕೆ ಆಯುಕ್ತರು ರಜೆಯಲ್ಲಿದ್ದು, ಅವರು ಇದಕ್ಕೆ ಅನುಮತಿ ಕೊಟ್ಟಿದ್ದಾರೆಯೇ? ಅಥವಾ ಇಲ್ಲವೇ? ಎಂದು ನನಗೆ ಸದ್ಯಕ್ಕೆ ಮಾಹಿತಿ ಇಲ್ಲ. ಪರಿಶೀಲಿಸಿ ಸೂಕ್ತ ಕ್ರಮ ವಹಿಸಲಾಗುವುದು.

-ನಿತೇಶ್ ಪಾಟೀಲ್, ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿಗಳು ಹಾಗೂ ಮೈಸೂರು ಪ್ರಾದೇಶಿಕ ಆಯುಕ್ತರು.

ಪಾಲಿಕೆ ವಲಯ 6ರ ವಲಯ ಆಯುಕ್ತರಾದ ಪ್ರತಿಭಾ ಅವರನ್ನು ಸದರಿ ರಸ್ತೆಯಲ್ಲಿ ಕಬ್ಬಿಣದ ಸಲಾಕೆ ನಿಲ್ಲಿಸಿ ಕಟೌಟ್ ಅಳವಡಿಸುವ ಬಗ್ಗೆ ದೂರವಾಣಿ ಮೂಲಕ ಕೇಳಲಾಗಿ, ಬ್ಯಾನರ್, ಬಂಟಿಂಗ್ಸ್‌ಗಳನ್ನು ತೆರವು ಮಾಡಿಸುತ್ತಿದ್ದು, ಅಂತೆಯೇ ಅವುಗಳನ್ನು ತೆರವು ಮಾಡಿಸುತ್ತೇವೆ ಎಂದರು. ಅವುಗಳಿಗೆ (ದೇವರಾಜ ಅರಸು ರಸ್ತೆ ಕಟೌಟ್) ಪಾಲಿಕೆಯಿಂದ ಅನುಮತಿ ನೀಡಲಾಗಿದೆಯೇ ಎಂದು ಮುಂದಿನ ಪ್ರಶ್ನೆ ಕೇಳುವಷ್ಟರಲ್ಲಿ ಅವರು ಕರೆ ಸ್ಥಗಿತಗೊಳಿಸಿದರು.

ಕಟ್ಟಡ ನಿರ್ಮಾಣದ ತಾಂತ್ರಿಕತೆ ಬಳಕೆ!; ಮಳೆ–ಗಾಳಿಗೆ ನೆಲಕ್ಕುರುಳಿದರೆ ಹೊಣೆ ಯಾರು?

ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಬಳಸುವ ಕಲಾವಧಿ ಮಾದರಿಯಲ್ಲಿ ಕಬ್ಬಿಣದ ಸಲಾಕೆಗಳು ಹಾಗೂ ಮರದ ಕಂಬಗಳನ್ನು ಬಳಸಿ ನಿಲ್ಲಿಸಿ ಬಳಿಕ ಕಟೌಟ್ ಅಳವಡಿಸುವ ತಂತ್ರಗಾರಿಕೆ ಇಲ್ಲಿ ಪ್ರಯೋಗಿಸಲಾಗಿದೆ. ಆದರೆ ತಳದಲ್ಲಿ ಕಬ್ಬಿಣಕ್ಕೆ ಕೆಲವಡೆ ಕಲ್ಲುಗಳು, ಟೈಲ್ಸ್ ಚೂರುಗಳನ್ನು ಇಟ್ಟು ಸಮತೋಲನ ಮಾಡಿರುವುದು ಕಂಡುಬಂದಿದೆ. ಇಂತಹ ತಾತ್ಕಾಲಿಕ ಅಳವಡಿಕೆ ಏನಾದರೂ ಮಳೆ ಗಾಳಿಗೆ ನೆಲಕ್ಕುರಳಿ ಸಾವು ನೋವು ಸಂಭವಿಸಿದರೆ ಯಾರು ಹೊಣೆ ಎಂಬ ಪ್ರಶ್ನೆ ಕೂಡ ಎದುರಾಗಿದೆ. ಅಲ್ಲದೆ, ಈ ಪರಿಯ ಪ್ರಚಾರದ ಹುಚ್ಚಿಗೆ ಕಡಿವಾಣ ಹಾಕಬೇಕಾದ ಪಾಲಿಕೆ ಮೈಮರೆತು ಕುಳಿತಿರುವುದು ಎಷ್ಟು ಸರಿ ಎಂಬ ಅಸಮಾಧಾನ ಸಾರ್ವಜನಿಕರಿಂದ ವ್ಯಕ್ತವಾಗಿದೆ.

"ಪಾಲಿಕೆ ಆಡಳಿತ ಇಷ್ಟರ ಮಟ್ಟಿಗೆ ಹಾಳಾಗಿದ್ದನ್ನು ನಾನು ಕಾಣೆ. ಇಲ್ಲಿ ಹೇಳುವವರು, ಕೇಳುವವರು ಇಲ್ಲದಂತಾಗಿದೆ. ಕಂಡ ಕಂಡವರು ತಮಗೆ ಬೇಕಾದಂತೆ ಅರಸು ರಸ್ತೆಯಲ್ಲಿ ಬ್ಯಾನರ್, ಕಟೌಟ್ ಹಾಕುತ್ತಿದ್ದಾರೆ. ನಾವಂತೂ ಕಂಡು ಕಾಣದಂತೆ ಇದ್ದೇವೆ. ಏನಾದರೂ ಪ್ರಶ್ನಿಸಿದರೆ ಏನಾಗುತ್ತೋ ಎಂಬ ಭಯ ಕಾಡುತ್ತಿದೆ. ಏನಾದರೂ ಆಗಲಿ ಹೋಗಿ ಸರ್...!

–ದೇವರಾಜ ಅರಸು ರಸ್ತೆಯ ಪ್ರತಿಷ್ಠಿತ ಮಳಿಗೆ ಮಾಲೀಕರ ಹತಾಶ ನುಡಿ


ಬೇಕಾಬಿಟ್ಟಿ ಪ್ರಚಾರಕ್ಕೆ ಬ್ರೇಕ್ ಯಾವಾಗ: ನಗರದಾದ್ಯಂತ ಬೇಕಾಬಿಟ್ಟಿ ಪ್ರಚಾರಕ್ಕಾಗಿ ವೃತ್ತ ಹಾಗೂ ರಸ್ತೆ ಬದಿಗಳು ಬಳಕೆಯಾಗುತ್ತಿದ್ದು, ಬ್ಯಾನರ್, ಕಟೌಟ್, ಫ್ಲೆಕ್ಸ್‌ಗಳು ಆಗಾಗ್ಗೆ ರಾರಾಜಿಸುವಂತಹ ಸನ್ನಿವೇಶ ಕಂಡು ಬರುತ್ತಿವೆ. ಈ ರೀತಿಯ ಬೇಕಾಬಿಟ್ಟಿ ಪ್ರಚಾರಕ್ಕೆ ಸ್ಥಳೀಯ ಆಡಳಿತ ಉತ್ತೇಜನ ನೀಡುವುದು ಸರಿಯಲ್ಲ. ನಗರದಲ್ಲಿ ಕಟೌಟ್, ಬ್ಯಾನರ್ ಅಳವಡಿಕೆಗೆ ಅವಕಾಶವನ್ನೇ ನೀಡಬಾರದು. ಒಂದು ವೇಳೆ ನೀಡಿದರೂ ಸೀಮಿತ ಪ್ರದೇಶದಲ್ಲಿ ಮಾತ್ರ ಅವಕಾಶ ಕಲ್ಪಿಸಬೇಕು. ಜೊತೆಗೆ ಸೀಮಿತ ಅಳತೆಯನ್ನೂ ನಿಗದಿಪಡಿಸಬೇಕು. ಫ್ಲೆಕ್ಸ್, ಬ್ಯಾನರ್‌ಗಳು ನಗರದ ಅಂದಗೇಡಿಸುವ ಜೊತೆಗೆ ಜನತೆಯ ಸಂಚಾರಕ್ಕೂ ತೊಡಕು. ಅವುಗಳತ್ತ ಜನರ ಗಮನ ಕೇಂದ್ರೀಕರಿಸಿದರೆ ಅನಾಹುತವೂ ಸಂಭವಿಸುತ್ತವೆ. ಇನ್ನಾದರೂ ಇಂತಹ ಬೇಕಾಬಿಟ್ಟಿ ಪ್ರಚಾರಕ್ಕೆ ಕಡಿವಾಣ ಹಾಕಲು ಸೂಕ್ತ ನಿಯಮಾವಳಿ ರೂಪಿಸಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

ಡಾ.ಕೆ.ಮೋಹನ್ ಮೈಸೂರಿನ ನೂತನ ಡಿಹೆಚ್‌ಓ

●ಉಪನಿರ್ದೇಶಕ ಹುದ್ದೆಗೆ ಡಾ.ಪಿ.ಸಿ.ಕುಮಾರಸ್ವಾಮಿ ವರ್ಗಾವಣೆ
●ಚಾ.ನಗರ ಡಿಹೆಚ್‌ಓ ಡಾ.ಚಿದಂಬರ ಮೈಸೂರು ಜಿಲ್ಲಾ ಶಸ್ತ್ರಚಿಕಿತ್ಸಕರು



ಡಾ.ಕೆ.ಮೋಹನ್



ಡಾ.ಕುಮಾರಸ್ವಾಮಿ



ಡಾ. ಚಿದಂಬರ

ಮೈಸೂರು, ಜೂ.29– ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಹೆಚ್‌ಓ) ಡಾ.ಪಿ.ಸಿ.ಕುಮಾರಸ್ವಾಮಿ ವರ್ಗಾವಣೆಗೊಂಡಿದ್ದು, ಈ ಸ್ಥಾನಕ್ಕೆ ಮಂಡ್ಯ ಡಿಹೆಚ್‌ಓ ಆಗಿದ್ದ ಡಾ.ಕೆ.ಮೋಹನ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಡಾ.ಪಿ.ಸಿ.ಕುಮಾರಸ್ವಾಮಿ ಅವರನ್ನು ಮೈಸೂರು ವಿಭಾಗೀಯ ಸಹ ನಿರ್ದೇಶಕರ ಕಚೇರಿಯ ಉಪನಿರ್ದೇಶಕ ಹುದ್ದೆಗೆ ನಿಯೋಜಿಸಲಾಗಿದ್ದು, ಮಂಡ್ಯ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಯಾಗಿದ್ದ ಡಾ.ಜಿ.ಸಿ.ಬೆಟ್ಟಸ್ವಾಮಿ ಅವರನ್ನು ಇದೇ ಜಿಲ್ಲೆಯ ಡಿಹೆಚ್‌ಓ ಹುದ್ದೆಗೆ ವರ್ಗಾಯಿಸಲಾಗಿದೆ.

ಚಾಮರಾಜನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಯಾಗಿದ್ದ ಡಾ.ಎಸ್.ಚಿದಂಬರ ಅವರನ್ನು ಮೈಸೂರು ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಾಗಿ ವರ್ಗಾವಣೆ ಮಾಡಲಾಗಿದೆ. ಕೊಡಗಿನ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಬಿ.ಎಲ್.ಶ್ರೀನಿವಾಸ ಅವರು ಮೈಸೂರಿಗೆ ವರ್ಗಾವಣೆಗೊಂಡಿದ್ದಾರೆ.

ಹಾಗೆಯೇ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನ ಕಬ್ಬಳ್ಳಿ ಸಮುದಾಯ ಆರೋಗ್ಯ ಕೇಂದ್ರದ ಡಾ.ಜಿ.ಗಿರಿದಾಸ್ ಅವರನ್ನು ಹುಣಸೂರು ತಾಲೂಕು ಆರೋಗ್ಯಾಧಿಕಾರಿಯಾಗಿ, ಮೈಸೂರು ಕೇಂದ್ರ ಕಾರಾಗೃಹದಲ್ಲಿ ಮನೋರೋಗ ತಜ್ಞರಾಗಿದ್ದ ಡಾ.ವಿ.ಸಂತೋಷ್ ಅವರನ್ನು ಮೈಸೂರು ತಾಲೂಕು ಆರೋಗ್ಯಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮೇಜರ್ ಸರ್ಜರಿ ನಡೆದಿದ್ದು 10 ಡಿಹೆಚ್‌ಓ, 6 ಜಿಲ್ಲಾ ಶಸ್ತ್ರಚಿಕಿತ್ಸಕರು, 10 ಉಪ ನಿರ್ದೇಶಕರು, ವಿವಿಧ ತರಬೇತಿ ಕೇಂದ್ರಗಳ ಐವರು ಪ್ರಾಂಶುಪಾಲರು, 26 ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು, 7 ತಾಲೂಕು ಆರೋಗ್ಯಾಧಿಕಾರಿಗಳು, ಓರ್ವ ವೈದ್ಯಕೀಯ ಅಧೀಕ್ಷಕರು ಸೇರಿದಂತೆ ಒಟ್ಟು 65ಕ್ಕೂ ಹೆಚ್ಚು ಹಿರಿಯ ವೈದ್ಯಾಧಿಕಾರಿಗಳಿಗೆ ಹೊಸ ಜವಾಬ್ದಾರಿಗಳನ್ನು ನೀಡಲಾಗಿದೆ.

ವರ್ಗಾವಣೆಗೊಂಡ ಅಧಿಕಾರಿಗಳು ಕೂಡಲೇ ತಮ್ಮ ಹೊಸ ಹುದ್ದೆಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿ ಪ್ರಭಾರ ವರ್ಗಾವಣಾ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಬಿ.ಎಸ್.ಪ್ರದೀಪ್ ಕುಮಾರ್ ಹೊರಡಿಸಿರುವ ಅಧಿಸೂಚನೆಯಲ್ಲಿ ಸೂಚಿಸಲಾಗಿದೆ.

ಟೀಂ ಮೈಸೂರಿನ ಪ್ರಸಕ್ತ ಸಾಲಿನ 'ಹಸಿರು ಮೈಸೂರು ಅಭಿಯಾನ'ಕ್ಕೆ ಚಾಲನೆ



'ಟೀಂ ಮೈಸೂರು' ವತಿಯಿಂದ ನಗರದ ಐಶ್ವರ್ಯ ಬಡಾವಣೆಯಲ್ಲಿ ಗಿಡ ನೆಡಲಾಯಿತು.

ಮೈಸೂರು, ಜೂ.29– 'ಟೀಂ ಮೈಸೂರು' ಸಂಘಟನೆಯ 'ಹಸಿರು ಮೈಸೂರು ಅಭಿಯಾನದ' ಪ್ರಸಕ್ತ ವರ್ಷದ ಗಿಡ ನೆಡುವ ಕಾರ್ಯಕ್ಕೆ ಚಾಲನೆ ದೊರಕಿತು.

ನಗರದ ಐಶ್ವರ್ಯ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದೊಂದಿಗೆ ವಿವಿಧ ತಳಿಯ 32 ಗಿಡಗಳನ್ನು ನೆಟ್ಟು, ಅವುಗಳ ಸುರಕ್ಷತೆ ಟ್ರೀ ಗಾರ್ಡ್ ಅಳವಡಿಸಿ, ಅಭಿಯಾನಕ್ಕೆಂದೇ ಖರೀದಿಸಿರುವ ಟ್ಯಾಂಕರ್ ಮೂಲಕ ನೀರುಣಿಸುವ ಮೂಲಕ 2026–27ನೇ ಸಾಲಿನ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಜಿಎಸ್‌ಎಸ್ ಯೋಗಿಕ್ ರೀಸರ್ಚ್ ಫೌಂಡೇಷನ್ ಸ್ಥಾಪಕ ಶ್ರೀಹರಿ ದ್ವಾರಕನಾಥ್ ಮಾತನಾಡಿ, ಹಸಿರು ಮೈಸೂರು ಆಶಯದೊಂದಿಗೆ ಟೀಂ ಮೈಸೂರು, ಕಳೆದ 13 ವರ್ಷಗಳಿಂದ ನಿರಂತರವಾಗಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿರುವುದು ಮಾದರಿಯಾಗಿದೆ ಎಂದು ಬಣ್ಣಿಸಿದರು. ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಮೇಶ್ ಅವರೂ ತಂಡದ ಕಾರ್ಯವನ್ನು ಶ್ಲಾಘಿಸಿದರು.

ತಂಡದ ಸಂಚಾಲಕ ಗೋಕುಲ್ ಗೋವರ್ಧನ್, ಹಸಿರೀಕರಣ ಪ್ರಸ್ತುತದ ಅತ್ಯವಶ್ಯವಾಗಿದ್ದು ಗಿಡಗಳನ್ನು ನಮ್ಮ ಮನೆಯ ಮಕ್ಕಳಂತೆ ಜೋಪಾನಮಾಡಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಸ್ಥಳೀಯರಲ್ಲಿ ಮನವಿ ಮಾಡಿದರು. ತಂಡದ ಕಿರಣ್ ಜೈರಾಮ್ ಗೌಡ, ಅನಿಲ್, ಮನೋಹರ್, ಬಳ್ಳಾರಿ ಬಸವರಾಜು, ಹರೀಶ್ ಶೆಟ್ಟಿ, ಹಿರಿಯಣ್ಣ, ರಾಮಪ್ರಸಾದ್, ಬಾಲಕೃಷ್ಣ, ಹರೀಶ್ ಗೋಕುಲಂ, ಮಂಜು ಹುಣಸೂರು, ರಮೇಶ್, ಕೃಷ್ಣ ಹರೀಶ್ ಫಾರ್ಮ, ರವಿ, ಸಹನ, ಶಾಂತ ಕುಮಾರಿ, ಕುಮಾರಿ ಕಲ್ಯಾಣಿ, ಪುಟಾಣಿಗಳಾದ ನಯನಿತಾ, ಅದ್ವಿಕಾ ಭಾಗವಹಿಸಿದ್ದರು.

ಈ ವೇಳೆ ಕ್ಷೇಮಾಭಿವೃದ್ಧಿ ಸಂಘದ ಮಹೇಶ್, ರಾಘವೇಂದ್ರ, ಸ್ಥಳೀಯ ನಿವಾಸಿಗಳಾದ ರಾಮಚಂದ್ರ, ಚಿಕ್ಕಮ್ಮ, ನಿರ್ಮಲ, ಲಕ್ಷ್ಮೀ, ರಮೇಶ್, ದೇವರಾಜ್, ಜಗದೀಶ್, ಮಿಥುನ್, ಪರಮೇಶ್, ಆರಾಧ್ಯ, ನವೀನ್, ನಾಗರಾಜ್, ಹರ್ಷ, ಯು.ಎಸ್.ಮಹೇಶ್ ಉಪಸ್ಥಿತರಿದ್ದರು.


ಮತ್ತೆ ರಾಜ್ಯಸಭೆ ವಿರೋಧ ಪಕ್ಷದ ನಾಯಕರಾಗಿ ಮಲ್ಲಿಕಾರ್ಜುನ ಖರ್ಗೆ ಪ್ರಮಾಣವಚನ ಸ್ವೀಕಾರ



ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮತ್ತೊಮ್ಮೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅವರ ರಾಜ್ಯಸಭೆಯ ಅವಧಿ ಜೂನ್ 25, 2026 ರಂದು ಕೊನೆಗೊಂಡಿತು. ಇದಾದ ನಂತರ, ಅವರು ತಾಂತ್ರಿಕವಾಗಿ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಹುದ್ದೆಯನ್ನು ಅಲಂಕರಿಸುವುದನ್ನು ನಿಲ್ಲಿಸಿದರು. ಆದಾಗ್ಯೂ, ಸೋಮವಾರ ಹೊರಡಿಸಲಾದ ಅಧಿಕೃತ ಸಂಸದೀಯ ಬುಲೆಟಿನ್‌ನಲ್ಲಿ ಖರ್ಗೆ ಅವರು ರಾಜ್ಯಸಭೆಗೆ ಆಯ್ಕೆಯಾದ ನಂತರ, ಅವರನ್ನು ಸದನದಲ್ಲಿ ವಿರೋಧ ಪಕ್ಷದ ನಾಯಕ ಎಂದು ಆಯ್ಕೆ ಮಾಡಲಾಗಿದ್ದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ರಾಜ್ಯಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಮಲ್ಲಿಕಾರ್ಜುನ ಖರ್ಗೆ ಸತತ ಎರಡನೇ ಬಾರಿಗೆ ಕರ್ನಾಟಕದಿಂದ ಮೇಲ್ಮನೆಗೆ ಆಯ್ಕೆಯಾಗಿದ್ದಾರೆ. ರಾಜ್ಯಸಭಾ ಅಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ಅವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರಮಾಣ ವಚನ ಬೋಧಿಸಿದರು. ರಾಜ್ಯಸಭಾ ಉಪಸಭಾಪತಿ ಹರಿವಂಶ್, ಸಭಾನಾಯಕ ಜೆ.ಪಿ.ನಡ್ಡಾ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಉಪಸ್ಥಿತರಿದ್ದರು.

ಇಂದು ಪ್ರೊ.ಸಿ.ಕೆ.ಪಿಯವರಿಗೆ ಅಭಿನಂದನೆ



ಮೈಸೂರು,ಜೂ.29(ಪಿಎಂ)– ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಸಿ.ಕೆ. ಪುಟ್ಟಸ್ವಾಮಿ (ಪ್ರೊ.ಸಿ.ಕೆ.ಪಿ) ಅವರ ಅಭಿನಂದನಾ ಸಮಾರಂಭವನ್ನು ಜೂ.30ರಂದು ಆಯೋಜಿಸಲಾಗಿದೆ.

ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಬೆಳಗ್ಗೆ 10.30ಕ್ಕೆ ನಡೆಯುವ ಸಮಾರಂಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರು ಪ್ರೊ.ಸಿ.ಕೆ.ಪುಟ್ಟಸ್ವಾಮಿ ಅವರನ್ನು ಅಭಿನಂದಿಸಲಿದ್ದಾರೆ. ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷೆ ಪ್ರೊ.ಎನ್.ಮಮತಾ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪತ್ರಿಕೋದ್ಯಮ ವಿಭಾಗದ ವಿಶ್ರಾಂತ ಪ್ರಾಧ್ಯಾಪಕಿ ಪ್ರೊ.ಎನ್.ಉಷಾರಾಣಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪಾಲ್ಗೊಳ್ಳಲಿದ್ದಾರೆ.

ಪ್ರೊ.ಸಿ.ಕೆ.ಪಿ ಅವರ ಕುರಿತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಪ್ರೊ.ನಿರಂಜನ ವಾನಳ್ಳಿ ಹಾಗೂ ಪ್ರೊ.ಎಂ.ಎಸ್.ಸಪ್ನ ಮಾತನಾಡಲಿದ್ದಾರೆ. ಪ್ರೊ.ಸಿ.ಕೆ.ಪಿ ಅವರು 3 ದಶಕಗಳಿಗೂ ಹೆಚ್ಚು ಕಾಲ ಪತ್ರಿಕೋದ್ಯಮ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದು, ನಿವೃತ್ತಿ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಲಾಗುತ್ತಿದೆ ಎಂದು ಪ್ರೊ.ಸಿ.ಕೆ.ಪುಟ್ಟಸ್ವಾಮಿ ಅವರ ಅಭಿನಂದನಾ ಸಮಿತಿ ತಿಳಿಸಿದೆ.

ಕೆಎಸ್‌ಎಫ್ ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿಯಲ್ಲಿ ಓರಿಯೆಂಟೇಷನ್ ಕಾರ್ಯಕ್ರಮ



ಮೈಸೂರಿನ ಕೃಷಿಕ್ ಸರ್ವೋದಯ ಫೌಂಡೇಶನ್(ಕೆಎಸ್‌ಎಫ್) ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿ ವತಿಯಿಂದ ನೂತನ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಓರಿಯೆಂಟೇಷನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು.

ಮೈಸೂರು, ಜೂ.29– ಕೃಷಿಕ್ ಸರ್ವೋದಯ ಫೌಂಡೇಶನ್(ಕೆಎಸ್‌ಎಫ್) ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿ ವತಿಯಿಂದ 2026–27ನೇ ಶೈಕ್ಷಣಿಕ ಸಾಲಿನ ಬಿ.ಕಾಂ ಹಾಗೂ ಬಿಸಿಎ ಪದವಿಗೆ ಪ್ರವೇಶ ಪಡೆದ ನೂತನ ವಿದ್ಯಾರ್ಥಿಗಳಿಗಾಗಿ ಸೋಮವಾರ ಕಾಲೇಜಿನ ಸಭಾಂಗಣದಲ್ಲಿ ಓರಿಯೆಂಟೇಷನ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್. ರಾಮೇಗೌಡ ಮಾತನಾಡಿ, ಕೃಷಿಕ್ ಸರ್ವೋದಯ ಫೌಂಡೇಶನ್‌ನ ಆರಂಭಿಕ ದಿನಗಳನ್ನು ಸ್ಮರಿಸಿ, ಸಂಸ್ಥೆಯು ವರ್ಷಗಳಿಂದ ಸಾಧಿಸಿರುವ ಗಮನಾರ್ಹ ಬೆಳವಣಿಗೆಯನ್ನು ಶ್ಲಾಘಿಸಿದರು.

ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣದ ಅವಧಿಯಲ್ಲಿ ದೊರೆಯುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು, ತಮ್ಮಲ್ಲಿರುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅನಾವರಣಗೊಳಿಸುವುದರೊಂದಿಗೆ ಶಿಸ್ತು, ಬದ್ಧತೆ ಹಾಗೂ ಶ್ರದ್ಧಾಪೂರ್ವಕ ಕಲಿಕೆಯ ಮೂಲಕ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆಎಸ್‌ಎಫ್ ಮೈಸೂರು ಘಟಕದ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು, ಸ್ವಾವಲಂಬನೆ ಹಾಗೂ ಸವಾಲುಗಳನ್ನು ಎದುರಿಸುವ ಮನೋಬಲ ಅತ್ಯಂತ ಅಗತ್ಯ. ಈ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಶೈಕ್ಷಣಿಕ ಸಾಧನೆ, ಜವಾಬ್ದಾರಿಯುತ ನಾಗರಿಕರಾಗಿ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಮಹಾರಾಣಿ ವಿಜ್ಞಾನ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಜೀವನದ ಪ್ರತಿಯೊಂದು ಅನುಭವವೂ ಕಲಿಕೆಯ ಭಾಗ. ಶಿಕ್ಷಣವು ತರಗತಿಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿಲ್ಲ. ವಿವಿಧ ಮೂಲಗಳಿಂದ ಜ್ಞಾನವನ್ನು ಸಂಪಾದಿಸಿ ಅರ್ಥಪೂರ್ಣ ವೃತ್ತಿಜೀವನವನ್ನು ರೂಪಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಚಿದಾನಂದಗೌಡ ಮಾತನಾಡಿ, ಶೈಕ್ಷಣಿಕ ಅರ್ಹತೆಯ ಜೊತೆಗೆ ಕೈಗಾರಿಕಾ ಕ್ಷೇತ್ರಕ್ಕೆ ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ಪದವಿ ಶೈಕ್ಷಣಿಕ ಭದ್ರ ಬುನಾದಿಯನ್ನು ಒದಗಿಸಿದರೆ, ಹೆಚ್ಚುವರಿ ಕೌಶಲಗಳು ವೇಗವಾಗಿ ಬದಲಾಗುತ್ತಿರುವ ಉದ್ಯೋಗ ಕ್ಷೇತ್ರದ ಬೇಡಿಕೆಗಳು ಹಾಗೂ ಸವಾಲುಗಳಿಗೆ ಆತ್ಮವಿಶ್ವಾಸದಿಂದ ಹೊಂದಿಕೊಳ್ಳಲು ನೆರವಾಗುತ್ತವೆ ಎಂದು ಕಿವಿಮಾತು ಹೇಳಿದರು.

ಇದಕ್ಕೂ ಮುನ್ನ ಕೆಎಸ್‌ಎಫ್ ಮೈಸೂರು ಘಟಕದ ಕಾರ್ಯದರ್ಶಿ ಕಿಶೋರ್ ಚಂದ್ರ, ವಿದ್ಯಾರ್ಥಿಗಳಿಗೆ ಕಾಲೇಜಿನ ಶೈಕ್ಷಣಿಕ ವಾತಾವರಣ, ಸಂಸ್ಥೆಯ ಮೌಲ್ಯ ಹಾಗೂ ಮುಂದಿನ ಮೂರು ವರ್ಷಗಳ ಪದವಿ ಜೀವನವನ್ನು ರೂಪಿಸುವ ವಿವಿಧ ಅವಕಾಶಗಳನ್ನು ಪರಿಚಯಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಿದ್ದಾಗಿ ತಿಳಿಸಿದರು.

ಇದೇ ವೇಳೆ ಸಿಟಿಸಿ ಸಂಸ್ಥೆಯ ಸಂಜಯ್ ಆಹುಜಾ ಅವರು ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಬಳಕೆ, ತಂತ್ರಜ್ಞಾನದಲ್ಲಿನ ಬದಲಾವಣೆಗಳ ಬಗ್ಗೆ ಉಪನ್ಯಾಸ ನೀಡಿದರು. 92.7 ಬಿಗ್ ಎಫ್‌ಎಂನ ಆರ್‌ಜೆ ಆಂಟೋ ಚಿಂಟಿರೆ ಅವರು ವ್ಯಕ್ತಿತ್ವ ವಿಕಸನ, ಸಂವಹನ ಕೌಶಲ ಹಾಗೂ ಆತ್ಮವಿಶ್ವಾಸ ಕುರಿತು ವಿಶೇಷ ಸಂವಾದ ನಡೆಸಿದರು.

ಕಾರ್ಯಕ್ರಮದಲ್ಲಿ ಕೆಎಸ್‌ಎಫ್ ಮೈಸೂರು ಘಟಕದ ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮತದಾನದ ಹಕ್ಕನ್ನು ದುರ್ಬಲಗೊಳಿಸಬಾರದು

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯ



ಕಾರ್ಯಕ್ರಮವನ್ನು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ತಿ.ನರಸೀಪುರ, ಜೂ.29– ಪ್ರಜಾಪ್ರಭುತ್ವದ ಅಡಿಪಾಯವೇ ಮತದಾನದ ಹಕ್ಕಾಗಿದ್ದು, ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ನೀಡಿರುವ ಈ ಮೂಲಭೂತ ಹಕ್ಕನ್ನು ಯಾವುದೇ ಕಾರಣಕ್ಕೂ ದುರ್ಬಲಗೊಳಿಸಬಾರದು ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಸೋಮವಾರ ನಡೆದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ತಿ.ನರಸೀಪುರ ವಿಭಾಗ ಮಟ್ಟದ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಬೂತ್ ಲೆವೆಲ್ ಏಜೆಂಟರ (ಬಿಎಲ್‌ಎ) ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಹೆಸರಿನಲ್ಲಿ ದೇಶದ ವಿವಿಧ ಭಾಗಗಳಲ್ಲಿ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ಕೈ ಬಿಡಲಾಗುತ್ತಿದೆ ಎಂಬ ಆತಂಕ ವ್ಯಕ್ತವಾಗುತ್ತಿದ್ದು, ಚುನಾವಣಾ ಆಯೋಗ ಈ ಬಗ್ಗೆ ಗಂಭೀರವಾಗಿ ಗಮನ ಹರಿಸಬೇಕಿದೆ. ಮತದಾರರ ಪಟ್ಟಿ ಶುದ್ಧೀಕರಣ ಹೆಸರಲ್ಲಿ ನಿಜವಾದ ಮತದಾರರ ಹಕ್ಕಿಗೆ ಧಕ್ಕೆಯಾದರೆ ಅದು ಪ್ರಜಾಪ್ರಭುತ್ವದ ಆತ್ಮಕ್ಕೆ ಹೊಡೆತ ನೀಡಿದಂತಾಗುತ್ತದೆ ಎಂದು ಹೇಳಿದರು.

ಗ್ರಾಮೀಣ ಜನರು, ರೈತರು, ಕಾರ್ಮಿಕರು, ಪ.ಜಾತಿ, ಪ.ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಹಿರಿಯ ನಾಗರಿಕರು ಹಾಗೂ ಅಗತ್ಯ ದಾಖಲೆ ತಕ್ಷಣ ಸಲ್ಲಿಸಲು ಸಾಧ್ಯವಾಗದ ಕುಟುಂಬಗಳ ಮತದಾನದ ಹಕ್ಕು ಯಾವುದೇ ಕಾರಣಕ್ಕೂ ಕಸಿದುಕೊಳ್ಳಬಾರದು. ಅರ್ಹರ ಹೆಸರನ್ನು ಪಟ್ಟಿಯಲ್ಲಿ ಉಳಿಸುವುದು ಚುನಾವಣಾ ಆಯೋಗದ ಸಂವಿಧಾನಬದ್ಧ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಇತ್ತೀಚಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಶೇ.64 ರಷ್ಟು ಮತಗಳು ಬಂದಿದ್ದು, ಬಿಜೆಪಿಗೆ ಶೇ.34ರಷ್ಟು ಮತಗಳು ಲಭಿಸಿವೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಬೆಂಬಲಿಗರ ಶೇ.10ರಷ್ಟು ಮತಗಳನ್ನು ಕಳೆದುಕೊಂಡರೆ ಅದರ ಪರಿಣಾಮ ಏನಾಗಬಹುದು ಎಂಬುದನ್ನು ಕಾರ್ಯಕರ್ತರು ಗಂಭೀರವಾಗಿ ಯೋಚಿಸಬೇಕು ಎಂದು ಹೇಳಿದರು.

ಮತದಾರರು ಚುನಾವಣಾ ಆಯೋಗ ಕೇಳಿರುವ ಅಗತ್ಯ ದಾಖಲೆಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸಬೇಕು. ಸರಿಯಾದ ಮಾಹಿತಿ ಒದಗಿಸದ ಕಾರಣದಿಂದ ಹೆಸರು ಮತದಾರರ ಪಟ್ಟಿಯಿಂದ ಅಳಿಸಲ್ಪಟ್ಟರೆ ಮುಂದಿನ ದಿನಗಳಲ್ಲಿ ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯುವಲ್ಲಿ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಸುನೀತಾ ವೀರಪ್ಪಗೌಡ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು, ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಎಸ್‌ಎನ್ ಸಿದ್ದಾರ್ಥ, ಪಾರುಪತ್ತೇದಾರ್ ಎಂ.ಬಿ.ಸಾಗರ್, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಮಹದೇವಪ್ಪ ಅಭಿಮಾನಿ ಬಳಗ ಜಿಲ್ಲಾಧ್ಯಕ್ಷ ಕೆ.ಎಂ.ಮಧುಕುಮಾರ್, ಗ್ರಾಪಂ ಮಾಜಿ ಸದಸ್ಯ ಯಾಚೇನಹಳ್ಳಿ ಅಶೋಕ್, ಹ್ಯಾಕನೂರು ಉಮೇಶ್, ಪುರಸಭೆ ಮಾಜಿ ಸದಸ್ಯ ರಾಘವೇಂದ್ರ, ಸಬಿಲ್ ಖಾನ್, ಸಹಕಾರ ಸಂಘದ ಅಧ್ಯಕ್ಷ ಎಂ.ಕುಮಾರಸ್ವಾಮಿ, ಭೂ ನ್ಯಾಯ ಮಂಡಳಿ ಸದಸ್ಯ ಕುಕ್ಕೂರು ಗಣೇಶ್, ನರಸಿಂಹಮಾದ ನಾಯಕ, ಪುರಸಭಾ ಮಾಜಿ ಅಧ್ಯಕ್ಷ ಮುನ್ನಾವರ್ ಪಾಷ, ಉಕ್ಕಲಗೆರೆ ಬಸವಣ್ಣ, ಚೆಟ್ಟಹಳ್ಳಿ ಮಲ್ಲಾಜಮ್ಮ, ವೀಣಾ ಶಿವಕುಮಾರ್, ಅಪ್ತ ಸಹಾಯಕ ಬಸವರಾಜು, ಕೇತಹಳ್ಳಿ ಸಿದ್ದಶೆಟ್ಟಿ ಸೇರಿದಂತೆ ಮತ್ತಿತರರಿದ್ದರು.

> ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಯಾರೊಬ್ಬರ ಮತದಾನದ ಹಕ್ಕಿಗೆ ಧಕ್ಕೆಯಾಗಬಾರದು. ಇದು ಕೇವಲ ರಾಜಕೀಯ ವಿಚಾರವಲ್ಲ. ದೇಶದ ಪ್ರಜಾಪ್ರಭುತ್ವದ ಭವಿಷ್ಯಕ್ಕೆ ಸಂಬಂಧಿಸಿದ ಮಹತ್ವದ ವಿಷಯವಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ರೈತರು, ಹಿಂದುಳಿದ ವರ್ಗಗಳು, ದಲಿತರು, ಅಲ್ಪ ಸಂಖ್ಯಾತರು ಸೇರಿದಂತೆ ವಿವಿಧ ಸಮುದಾಯಗಳ ಬೆಂಬಲ ಹೆಚ್ಚಾಗಿದೆ. ಇದೇ ವರ್ಗಗಳನ್ನು ಗುರಿಯಾಗಿಸಿಕೊಂಡು ಬಿಜೆಪಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಬೆಂಬಲಿಗರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈ ಬಿಡಿಸುವ ಪ್ರಯತ್ನ ನಡೆಸುತ್ತಿದೆ ಎಂಬ ಅನುಮಾನಗಳಿವೆ. ಆದ್ದರಿಂದ ಪ್ರತಿಯೊಬ್ಬ ಬೂತ್ ಲೆವೆಲ್ ಏಜೆಂಟ್ ಮೈಯೆಲ್ಲಾ ಕಣ್ಣಾಗಿ ಕೆಲಸ ಮಾಡಬೇಕು.
> – ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ.

ಬೆಣ್ಣೆಗೆರೆಯಲ್ಲಿ ಅರಣ್ಯ ರಕ್ಷಕನ ಮೇಲೆ ಹುಲಿ ದಾಳಿ



ಗಾಯಗೊಂಡ ಅರಣ್ಯ ರಕ್ಷಕ ಕುಮಾರ್ ಚಿಕಿತ್ಸೆ ಪಡೆಯುತ್ತಿರುವುದು.

ಸರಗೂರು, ಜೂ.29– ಹುಲಿ ಸೆರೆಗೆ ಅರಣ್ಯ ಇಲಾಖೆ ಕೂಂಬಿಂಗ್ ಕಾರ್ಯಾಚರಣೆ ನಡೆಸುವ ವೇಳೆ ಅರಣ್ಯ ರಕ್ಷಕನ ಮೇಲೆ ಹುಲಿ ದಾಳಿ ನಡೆಸಿರುವ ಘಟನೆ ತಾಲೂಕಿನ ಬೆಣ್ಣೆಗೆರೆ ಗ್ರಾಮದಲ್ಲಿ ನಡೆದಿದೆ.

ಮೂಲತಃ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ನಿವಾಸಿ, ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯ ನುಗು ವನ್ಯಜೀವಿ ವಲಯದ ಅರಣ್ಯ ರಕ್ಷಕ ಕುಮಾರ್ ಹುಲಿ ದಾಳಿಗೆ ಒಳಗಾದವರು.

ಜೂ.27ರಂದು ಬೆಣ್ಣೆಗೆರೆ ಗ್ರಾಮದ ರವಿ ಎಂಬುವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕ ಕಿರಣ್ ಮೇಲೆ ದಾಳಿ ನಡೆಸಿದ್ದ ಸ್ಥಳದಲ್ಲಿ ಸೋಮವಾರ ಬೆಳಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಹುಲಿ ಚಲನವಲನ ಪರಿಶೀಲಿಸುವ ವೇಳೆ ಪೊದೆಯಿಂದ ಹೊರಬಂದ ಹುಲಿ ಏಕಾಏಕಿ ಕುಮಾರ್ ಅವರ ಮೇಲೆ ದಾಳಿ ನಡೆಸಿ ಇದರಿಂದ ಗಾಬರಿಗೊಂಡ ಸಿಬ್ಬಂದಿ ಜೋರಾಗಿ ಚೀರಾಟ ನಡೆಸಿದ ಹಿನ್ನೆಲೆಯಲ್ಲಿ ಹುಲಿ ಕುಮಾರ್ ಅವರನ್ನು ಬಿಟ್ಟು ಮತ್ತೆ ಪೊದೆಯತ್ತ ಪರಾರಿಯಾಗಿದೆ. ಘಟನೆಯಲ್ಲಿ ಕುಮಾರ್ ಅವರ ಬೆನ್ನು, ಹೊಟ್ಟೆ ಸೇರಿದಂತೆ ವಿವಿಧೆಡೆ ಗಾಯವಾಗಿದ್ದು, ತಕ್ಷಣ ಅವರನ್ನು ಸರಗೂರಿನ ವಿವೇಕಾನಂದ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ.

ಈ ವೇಳೆ ಬಂಡೀಪುರ ಸಿಎಫ್ ನಂದೀಶ್, ಎಸಿಎಫ್ ಪರಮೇಶ್, ಆರ್‌ಎಫ್‌ಒ ಅನಿತ್‌ರಾಜ್, ಸಿಬ್ಬಂದಿ ಹಾಜರಿದ್ದರು.

ಮೊಪೆಡ್‌ಗೆ ಟ್ರಾಕ್ಟರ್ ಡಿಕ್ಕಿ: ದಂಪತಿಗೆ ತೀವ್ರ ಗಾಯ



ಕಲಾವತಿ

ಹುಣಸೂರು, ಜೂ.29– ಟಿವಿಎಸ್ ಮೊಪೆಡ್‌ಗೆ ಟ್ರಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ದಂಪತಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಭಾನುವಾರ ಸಂಜೆ ತಾಲೂಕಿನ ಆಜಾದ್ ನಗರದ ಬಳಿ ನಡೆದಿದೆ.

ನಗರದ ದಾವಣೆ ಬೀದಿ ನಿವಾಸಿ ಸಿದ್ದಶೆಟ್ಟಿ ಮತ್ತು ಕಲಾವತಿ ದಂಪತಿ ತೀವ್ರವಾಗಿ ಗಾಯಗೊಂಡವರು. ಹುಂಡಿಮಾಳ ಗ್ರಾಮದ ನಿವಾಸಿ ಚಿನ್ನಯ್ಯ ಅವರ ಪುತ್ರ ಲಕ್ಷ್ಮಣ ಟ್ರಾಕ್ಟರ್‌ನಿಂದ ಮೊಪೆಡ್‌ಗೆ ಡಿಕ್ಕಿ ಹೊಡೆದ ಆರೋಪ.

ವಿವರ: ಸಿದ್ದಶೆಟ್ಟಿ ಮತ್ತು ಕಲಾವತಿ ದಂಪತಿ ಆಜಾದ್ ನಗರದ ಬಳಿಯ ತಮ್ಮ ಜಮೀನಿಗೆ ತೆರಳಿ ಹಸುಗಳಿಗೆ ಹಾಲು ಕರೆದು ಬಳಿಕ ವಾಪಸ್ ತಮ್ಮ ಟಿವಿಎಸ್ ಮೊಪೆಡ್‌ನಲ್ಲಿ ಬರುತ್ತಿದ್ದ ವೇಳೆ ಟ್ರಾಕ್ಟರ್ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಸಿದ್ದಶೆಟ್ಟಿಯನ್ನು ಹುಣಸೂರಿನ ಖಾಸಗಿ ಆಸ್ಪತ್ರೆಗೆ ಹಾಗೂ ಕಲಾವತಿಯನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಮಾದಯ್ಯ ಪರಿಶೀಲನೆ ನಡೆಸಿ ಟ್ರಾಕ್ಟರ್ ಹಾಗೂ ಟಿವಿಎಸ್ ಮೊಪೆಡ್ ಅನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅರ್ಹರು ಮತದಾನದಿಂದ ವಂಚಿತರಾಗದಂತೆ ಎಚ್ಚರ ವಹಿಸಿ

ಶಾಸಕ ದರ್ಶನ್ ಧ್ರುವನಾರಾಯಣ್ ಸೂಚನೆ



ಕಾರ್ಯಾಗಾರದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು.

ನಂಜನಗೂಡು, ಜೂ.29– ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಬೂತ್ ಮಟ್ಟದ ಏಜೆಂಟ್‌ಗಳು ಪ್ರಜಾಪ್ರಭುತ್ವ ಬಲಪಡಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಅರ್ಹ ಮತದಾರರು ಮತದಾನದ ಅವಕಾಶದಿಂದ ವಂಚಿತರಾಗದಂತೆ ಎಚ್ಚರಿಕೆ ವಹಿಸಿ ಕೆಲಸ ನಿರ್ವಹಿಸಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಸೂಚಿಸಿದರು.

ನಗರದ ಮಹದೇಶ್ವರ ಪ್ಯಾಲೇಸ್‌ನಲ್ಲಿ ಕಾಂಗ್ರೆಸ್ ಪಕ್ಷದಿಂದ ನಡೆದ ಬೂತ್ ಮಟ್ಟದ ಏಜೆಂಟರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಜೂ.30ರಿಂದ ಜು.29ರವರೆಗೆ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ನಡೆಯಲಿದ್ದು, ಈ ವೇಳೆ ಬೂತ್ ಮಟ್ಟದ ಏಜೆಂಟ್‌ಗಳು ಹೊಸದಾಗಿ ಮತದಾರರನ್ನು ಸೇರ್ಪಡೆಗೊಳಿಸುವುದು ಹಾಗೂ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಟ್ಟಿದ್ದರೆ ಅದನ್ನು ಪತ್ತೆ ಮಾಡುವ ಮೂಲಕ ಅರ್ಹ ಮತದಾರರ ಹಕ್ಕು ಸಂರಕ್ಷಿಸುವ ಸಂಕಲ್ಪದೊಂದಿಗೆ ಕಾರ್ಯ ನಿರ್ವಹಿಸಬೇಕು. ಪ್ರಮುಖವಾಗಿ ನೇರವಾಗಿ ಮತದಾರರನ್ನು ಭೇಟಿ ಮಾಡಲು ಇದೊಂದು ಸದಾವಕಾಶ. ಆದ್ದರಿಂದ ಬೂತ್ ಮಟ್ಟದ ಏಜೆಂಟ್‌ಗಳು ಬೂತ್ ಮಟ್ಟದ ಅಧಿಕಾರಿಗಳೊಂದಿಗೆ ನೇರ ಸಂಪರ್ಕದಲ್ಲಿದ್ದು ಅವರ ಜೊತೆಗೆ ಮನೆ ಮನೆಗೆ ತೆರಳಿ ಮತದಾರರ ಅರ್ಜಿಗಳನ್ನು ಭರ್ತಿ ಮಾಡಿ ಅಧಿಕಾರಿಗಳಿಗೆ ತಲುಪಿಸುವ ಕೆಲಸ ಮಾಡಬೇಕು. ಇಲ್ಲದಿದ್ದರೆ ಅರ್ಹ ಮತದಾರರ ಮತ ಕಳೆದುಕೊಳ್ಳುವ ಸಂಭವವಿರುತ್ತದೆ. ಆದ್ದರಿಂದ ಎಚ್ಚರಿಕೆಯಿಂದ ಕೆಲಸ ನಿರ್ವಹಿಸಿ ಅರ್ಹ ಮತದಾರರ ಹಕ್ಕುಗಳನ್ನು ಸಂರಕ್ಷಿಸುವ ಮೂಲಕ ಪ್ರಜಾಪ್ರಭುತ್ವ ಬಲಪಡಿಸಬೇಕು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಮಹೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಕೆ.ಮಾರುತಿ, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಕಾಂಗ್ರೆಸ್ ಎಸ್‌ಸಿ ವಿಭಾಗ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಪ್ರಕಾಶ್, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಮುಖಂಡರಾದ ಎನ್.ಎಂ.ಮಂಜುನಾಥ್, ಅಕ್ಬರ್ ಅಲೀಮ್, ದೊರೆಸ್ವಾಮಿ ನಾಯಕ, ಅಬ್ದುಲ್ ಖಾದರ್, ಗಾಯತ್ರಿ, ಶ್ರೀಧರ್, ಮುದ್ದುಮಾದ ಶೆಟ್ಟಿ, ಶಿವಪ್ಪ ದೇವರು, ಗೋವಿಂದ ರಾಜ್, ಮಹೇಶ್ ಸೇರಿದಂತೆ ಹಲವರಿದ್ದರು.

ಹುಣಸೂರಲ್ಲಿ ಪೋಲಿಯೋ ಲಸಿಕೆ ಅಭಿಯಾನ



ಹುಣಸೂರಲ್ಲಿ ಪೋಲಿಯೋ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಹುಣಸೂರು, ಜೂ.29– ಐದು ವರ್ಷದೊಳಗಿನ ಮಕ್ಕಳಿಗೆ 2 ಹನಿ ಲಸಿಕೆ ಹಾಕಿಸಿದರೇ ಜೀವನಪೂರ್ತಿ ಆರೋಗ್ಯವಾಗಿರಬಹುದು. ಆದ್ದರಿಂದ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ನಗರಸಭೆ ಆಯುಕ್ತೆ ಮಾನಸ ತಿಳಿಸಿದರು.

ನಗರದ ಡಿ.ದೇವರಾಜ ಅರಸು ಸಾರ್ವಜನಿಕ ಆಸ್ಪತ್ರೆಯಲ್ಲಿ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇದು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಆರೋಗ್ಯ ಇಲಾಖೆ, ನಗರಸಭೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ನಡೆಯುತ್ತಿರುವ ಈ ಕಾರ್ಯಕ್ರಮಕ್ಕೆ ಸಂಘ ಸಂಸ್ಥೆಗಳು ಸೇರಿದಂತೆ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ಆಸ್ಪತ್ರೆ ಆಡಳಿತಾಧಿಕಾರಿ ಡಾ.ಶಿವಶಂಕರ್, ಟಿಹೆಚ್‌ಓ ಡಾ.ರವಿಕುಮಾರ್, ಡಾ.ಪಿ. ಮಾಧವ್, ಡಾ.ಸುಜಾತಲಕ್ಷ್ಮಿ, ತಾಲೂಕು ಆರೋಗ್ಯ ಹಿರಿಯ ಶಿಕ್ಷಣಾಧಿಕಾರಿ ರಾಜೇಶ್ವರಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಪ್ರಭಾಕರ್ ಮಾತನಾಡಿದರು.

ಈ ವೇಳೆ ನಗರಸಭೆ ಪರಿಸರ ಇಂಜಿನಿಯರ್ ಸೌಮ್ಯ, ಡಾ.ಅನಿಲ್, ಡಾ.ಬಾನು, ಡಾ.ಮಲ್ಲಿಕಾಚಂದ್ರ, ಡಾ.ಕೌಶಿಕ್, ಡಾ.ಸುರೇಶ್, ಡಾ.ಪರಮೇಶ್, ಡಾ.ಶ್ರೀಕಾಂತ್, ಡಾ.ಪೂರ್ಣಿಮಾ ಶುಶ್ರೂಷಕ ಅಧಿಕಾರಿ ಕಣ್ಣಮ್ಮ, ಹಿರಿಯ ಪ್ರಾಥಮಿಕ ಸಂರಕ್ಷಣಾಧಿಕಾರಿ ಅನುತಿ, ಅಂಗನವಾಡಿ ಮೇಲ್ವಿಚಾರಕಿ ಶೋಭಾ, ಕೃಷ್ಣ ಸಂತೋಷ್, ರವಿರೆಡ್ಡಿ ಮತ್ತಿತರರಿದ್ದರು.

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ಅಧಿಕಾರಿಗಳಿಗೆ ಶಾಸಕ ಕೆ.ವೆಂಕಟೇಶ್ ತಾಕೀತು



ಕಾರ್ಯಕ್ರಮದಲ್ಲಿ ಶಾಸಕ ಕೆ.ವೆಂಕಟೇಶ್ ಮಾತನಾಡಿದರು.

ಬೆಟ್ಟದಪುರ, ಜೂ.29– ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದರೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸಬೇಕು ಎಂದು ಶಾಸಕ ಕೆ.ವೆಂಕಟೇಶ್ ತಾಕೀತು ಮಾಡಿದರು.

ತಾಲೂಕಿನ ಹಲಗನಹಳ್ಳಿ, ರಾಜನಬೆಳಗುಲಿ, ದೊಡ್ಡ ಕಮರಹಳ್ಳಿ, ಸೂಳೆಕೋಟೆ, ಶಾನುಭೋಗನಹಳ್ಳಿಯಲ್ಲಿ 9 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ, ರಾಜನಬೆಳಗುಲಿ ಗ್ರಾಮದಲ್ಲಿ ಸಾರ್ವಜನಿಕರ ಅಹವಾಲು ಆಲಿಸಿ ಮಾತನಾಡಿದ ಅವರು, 3 ದಿನಗಳಿಗೊಮ್ಮೆ ನೀರು ಪೂರೈಕೆ ಮಾಡುವುದರಿಂದ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ ಪ್ರತಿದಿನ ಕುಡಿಯುವ ನೀರು ಪೂರೈಕೆಯಾಗುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಅಗತ್ಯವಿದ್ದಲ್ಲಿ ಟ್ಯಾಂಕರ್ ವ್ಯವಸ್ಥೆ, ಖಾಸಗಿ ಬೋರ್‌ವೆಲ್‌ಗಳ ಬಳಕೆ ಅಥವಾ ಹೆಚ್ಚುವರಿ ಬೋರ್‌ವೆಲ್‌ಗಳನ್ನು ಕೊರೆಸುವ ಮೂಲಕ ಸಾರ್ವಜನಿಕರಿಗೆ ನೀರಿನ ಕೊರತೆ ಉಂಟಾಗದಂತೆ ನೋಡಿಕೊಳ್ಳಬೇಕು ಎಂದರು.

ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮರುಕಳಿಸದಂತೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಿ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು.

ಈ ವೇಳೆ ತಾಲೂಕು ಗ್ಯಾರಂಟಿ ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಮುಖಂಡರಾದ ರಹಮದ್ ಜಾನ್ ಬಾಬು, ಡಿ.ಟಿ.ಸ್ವಾಮಿ, ಪುಟ್ಟರಾಜು, ಪ್ರಕಾಶ್, ಶಂಕರೇಗೌಡ, ದೊಡ್ಡಕಮನಹಳ್ಳಿ ಕಲ್ಯಾಣಪ್ಪ, ಶಾನ್‌ಭೋಗನಹಳ್ಳಿ ಲಕ್ಷ್ಮಿನಾರಾಯಣ್, ದೇವೇಂದ್ರಪ್ಪ, ಸುಹೇಲ್, ಶೇಕ್ ಉಲ್ಲಾ, ಸುಭಾನ್, ಪಿಡಬ್ಲ್ಯೂಡಿ ಎಇಇ ಯೋಗಾನಂದ, ಎ.ಇ.ದಿನೇಶ್, ಹಾರಂಗಿ ಇಲಾಖೆ ಎಇಇ ಗೋಕುಲ್, ಎ.ಇ.ಶಿವಕುಮಾರ್, ನಿರ್ಮಿತಿ ಇಲಾಖೆಯ ರಕ್ಷಿತ್, ಅಹಮದ್ ಸೇರಿದಂತೆ ಕಾರ್ಯಕರ್ತರು ಇದ್ದರು.

ಹಳೇ ಕೆಂಪಯ್ಯನಹುಂಡಿಯಲ್ಲಿ ಕೆಂಪೇಗೌಡ ಜಯಂತಿ



ಹಳೇ ಕೆಂಪಯ್ಯನಹುಂಡಿಯಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ನಡೆಯಿತು.

ತಿ.ನರಸೀಪುರ, ಜೂ.29– ತಾಲೂಕಿನ ಹಳೇ ಕೆಂಪಯ್ಯನ ಹುಂಡಿಯಲ್ಲಿ ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಯುವಸೇನೆ ವತಿಯಿಂದ ಕೆಂಪೇಗೌಡರ 517ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕೆಂಪೇಗೌಡ ಜಯಂತಿ ಅಂಗವಾಗಿ ಗ್ರಾಮದಲ್ಲಿ ಕೆಂಪೇಗೌಡರ ಭಾವಚಿತ್ರ ಮೆರವಣಿಗೆ ಮಾಡಲಾಯಿತು. ಅಲ್ಲದೇ ಅನ್ನ ಸಂತರ್ಪಣೆ, ಶಾಲಾ ಮಕ್ಕಳಿಗೆ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಈ ವೇಳೆ ಗ್ರಾಮದ ಒಕ್ಕಲಿಗ ಸಮುದಾಯದ ಮುಖಂಡರು, ಶಾಲೆ ಶಿಕ್ಷಕರು ಮತ್ತು ಮಕ್ಕಳು, ಹೊಸಕೋಟೆ ಗ್ರಾಪಂ ಪಿಡಿಓ ಮತ್ತು ಕಾರ್ಯದರ್ಶಿ ಹಾಗೂ ಒಕ್ಕಲಿಗ ಸಂಘದ ಸದಸ್ಯರು ಸೇರಿದಂತೆ ಇನ್ನಿತರರು ಭಾಗಿಯಾಗಿದ್ದರು.

ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆಯಡಿ ಕೆರೆಗಳ ಪುನಶ್ಚೇತನ

ಯೋಜನೆಯ ಮೈಸೂರು ಪ್ರಾದೇಶಿಕ ನಿರ್ದೇಶಕ ಯೋಗೇಶ್



ಅಗಸನಕೆರೆಯನ್ನು ಡೋರ್ನಹಳ್ಳಿ ಗ್ರಾಪಂಗೆ ಹಸ್ತಾಂತರ ಮಾಡಲಾಯಿತು.

ಕೆ.ಆರ್.ನಗರ, ಜೂ.29– ಕೆರೆ ಕಟ್ಟೆಗಳು ನಾಡಿನ ಜೀವನಾಡಿ. ರೈತಾಪಿ ಜನರ ಉಸಿರು. ಹೀಗಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ಕೆರೆಗಳ ಪುನಶ್ಚೇತನಗೊಳಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಯೋಜನೆಯ ಮೈಸೂರು ಪ್ರಾದೇಶಿಕ ನಿರ್ದೇಶಕ ಯೋಗೇಶ್ ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಮ್ಮಿಕೊಂಡಿದ್ದ 934ನೇ ನಮ್ಮೂರ ನಮ್ಮ ಕೆರೆ ಕಾರ್ಯಕ್ರಮದಡಿ ಪಟ್ಟಣದ ಹೊರವಲಯದ ಅರಕೆರೆ ಗ್ರಾಮದ ಅಗಸನಕೆರೆ ಅಭಿವೃದ್ಧಿ ಪಡಿಸಿ ಕೆರೆಯನ್ನು ಡೋರ್ನಹಳ್ಳಿ (ದೊಡ್ಡಕೊಪ್ಪಲು) ಗ್ರಾಪಂಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ಡಾ.ವೀರೇಂದ್ರ ಹೆಗ್ಗಡೆ ಅವರು ಪ್ರಾರಂಭಿಸಿದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ರಾಜ್ಯಾದ್ಯಂತ ಸುಸೂತ್ರವಾಗಿ ನಡೆಯುತ್ತಿದ್ದು, ಲಕ್ಷಾಂತರ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ ಎಂದು ತಿಳಿಸಿದರು.

ಆರೇಳು ವರ್ಷಗಳ ಹಿಂದೆ ಬರಗಾಲ ಆವರಿಸಿತ್ತು. ಈ ಹಿನ್ನೆಲೆಯಲ್ಲಿ ಡಾ.ವೀರೇಂದ್ರ ಹೆಗ್ಗಡೆ ಅವರು ಕೆರೆಕಟ್ಟೆಗಳ ಪುನಶ್ಚೇತನ ಮಾಡಿದರೆ ಜನರಿಗೆ, ಪ್ರಾಣಿ, ಪಕ್ಷಿ ಸಂಕುಲಕ್ಕೆ ನೀರು ಸಿಗಲಿದೆ ಎಂಬುದನ್ನು ಮನಗಂಡು ಕೆರೆಕಟ್ಟೆಗಳ ಹೂಳೆತ್ತುವ ಕಾರ್ಯಕ್ಕೆ ಮುಂದಾದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಮೈಸೂರು ವಿಭಾಗದಲ್ಲಿ 180 ಕೆರೆಕಟ್ಟೆಗಳ ಅಭಿವೃದ್ಧಿ ಪಡಿಸಲು ಅಂದಾಜು 14.50 ಕೋಟಿ ಖರ್ಚಾಗಿದೆ ಎಂದು ತಿಳಿಸಿದರು.

ಈ ಸಂದರ್ಭ ಕೆರೆ ಸಮಿತಿ ಅಧ್ಯಕ್ಷ ಎ.ಎಸ್. ಯೋಗೇಶ್, ಜಿಲ್ಲಾ ನಿರ್ದೇಶಕಿ ಮಮತಾ ರಾವ್, ತಾಲೂಕು ಯೋಜನಾಧಿಕಾರಿ ಸದಾನಂದ್ ದೇವಾಡಿಗ, ಕೃಷಿ ಮೇಲ್ವಿಚಾರಕ ಮಹದೇವಸ್ವಾಮಿ, ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷೆ ನಾಗರತ್ನಮ್ಮ, ಸದಸ್ಯ ಸಂಪತ್, ಉಪ ವಲಯ ಅರಣ್ಯಾಧಿಕಾರಿ ಶೋಭಾ, ಪಿಡಿಓ ಮಂಜುನಾಥ್, ಕಾರ್ಯದರ್ಶಿ ಸೋಮಶೇಖರ್, ಗ್ರಾಪಂ ಮಾಜಿ ಸದಸ್ಯೆ ಸುನೀತಾ, ಸೂರ್ಯಪುತ್ರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಘವೇಂದ್ರ, ಗ್ರಾಮಸ್ಥರಾದ ಮಹದೇವಯ್ಯ, ಸ್ವಾಮಿಗೌಡ, ಪ್ರಭಾಕರ್, ಮಧು, ಭೋಜರಾಜ್, ಭಾಸ್ಕರ್, ಲೀಲಾವತಿ, ಒಕ್ಕೂಟದ ಅಧ್ಯಕ್ಷೆ ಹೇಮಲತಾ, ಜ್ಞಾನ ವಿಕಾಸ ಯೋಜನೆಯ ಮೇಲ್ವಿಚಾರಕಿ ಅನುಷಾ, ಗ್ರಾಮಸ್ಥರು ಸೇರಿದಂತೆ ಅನೇಕರಿದ್ದರು.

ಕೋಟೆ ಗೆಲ್ಲಲು ಎಲ್ಲರೂ ಈಗಿನಿಂದಲೇ ಶ್ರಮಿಸಿ

ಜೆಡಿಎಸ್ ಜಿಲ್ಲಾಧ್ಯಕ್ಷೆ ಎಂ.ಡಿ.ದಾಕ್ಷಾಯಿಣಿ



ಸಭೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷೆ ಎಂ.ಡಿ.ದಾಕ್ಷಾಯಿಣಿ ಮಾತನಾಡಿದರು.

ಹೆಚ್.ಡಿ.ಕೋಟೆ, ಜೂ.29– ಜೆಡಿಎಸ್ ಭದ್ರಕೋಟೆ ಹೆಚ್.ಡಿ.ಕೋಟೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದು ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕೈ ಬಲಪಡಿಸಲಾಗುವುದು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷೆ ಎಂ.ಡಿ.ದಾಕ್ಷಾಯಿಣಿ ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಕೋಟೆ ಮತ್ತು ಸರಗೂರು ತಾಲೂಕಿನ ಮಹಿಳಾ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಈ ಬಾರಿ ಜೆಡಿಎಸ್ ಪಕ್ಷದ ಅಭ್ಯರ್ಥಿ ಕೆ.ಎಂ. ಕೃಷ್ಣನಾಯಕ ಅವರನ್ನು ಶಾಸಕರಾಗಿ ಆಯ್ಕೆ ಮಾಡುವ ಜೊತೆಗೆ ಕುಮಾರ ಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಮಹಿಳಾ ಕಾರ್ಯಕರ್ತರು ಶ್ರಮಿಸಬೇಕು ಎಂದರು.

ಮಹಿಳಾ ಘಟಕ ಬಲವರ್ಧನೆಗೊಳಿಸಲು ಸರಗೂರು ಮತ್ತು ಕೋಟೆ ತಾಲೂಕಿನ ಅಧ್ಯಕ್ಷರಿಗೆ ಬೆಂಬಲ ನೀಡಬೇಕಿದೆ. ತಾಲೂಕಿನಲ್ಲಿ ಜೆಡಿಎಸ್ ಪಕ್ಷ ಬಲಪಡಿಸಲು ಮಹಿಳಾ ಸಂಘಟನಾ ಸಭೆಗಳನ್ನು ಹೆಚ್ಚು ನಡೆಸಬೇಕಿದ್ದು ಎಲ್ಲರೂ ಒಗ್ಗೂಡಿ, ಜೆಡಿಎಸ್ ಪಕ್ಷ ಬಲಪಡಿಸಲು ಮುಂದಾಗಬೇಕು ಎಂದರು.

ಈ ವೇಳೆ ಮಹಿಳಾ ಘಟಕದ ತಾಲೂಕು ಜೆಡಿಎಸ್ ಅಧ್ಯಕ್ಷರಾದ ಗಾಯತ್ರಿ, ಸವಿತಾ, ಕೋಟೆ ಸರಗೂರು ಜೆಡಿಎಸ್ ಪಕ್ಷದ ಅಧ್ಯಕ್ಷರಾದ ಎಂ.ರಾಜೇಂದ್ರ, ಗೋಪಾಲಸ್ವಾಮಿ, ತಾಲೂಕು ಕುಮಾರಸ್ವಾಮಿ ಬಳಗದ ಅಧ್ಯಕ್ಷ ಹೆಚ್.ಡಿ.ರಮೇಶ್, ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಮುಖಂಡರಾದ ಚಿಕ್ಕಮ್ಮ, ರತ್ನಮ್ಮ, ಮೀನಾ, ಸುಧಾ, ನಾಗಮಣಿ, ಬಿಂದು, ರಾಜೇಶ್ವರಿ, ಸಿಂಗಮ್ಮ, ಲಕ್ಷ್ಮಿ, ಪವಿತ್ರ, ರಾಜಮ್ಮ, ಪುಟ್ಟ ಚೆನ್ನಮ್ಮ, ಶಾಂತಮ್ಮ ಇತರರಿದ್ದರು.

ನಾಡಪ್ರಭು ಕೆಂಪೇಗೌಡರು ಸರ್ವ ಜನಾಂಗದ ನಾಯಕ



ಸಾಲಿಗ್ರಾಮ ತಾಲೂಕಿನ ಕುಪ್ಪೆ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ನಡೆಯಿತು.

ಚುಂಚನಕಟ್ಟೆ, ಜೂ.29– ಬೆಂಗಳೂರು ಸೇರಿದಂತೆ ಸುತ್ತಮುತ್ತ ಕೆರೆ ಕಟ್ಟೆಗಳನ್ನು ಕಟ್ಟಿ ರೈತರ ಕೃಷಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ ಕೀರ್ತಿ ನಾಡಪ್ರಭು ಕೆಂಪೇಗೌಡರಿಗೆ ಸಲ್ಲುತ್ತದೆ ಎಂದು ಉದ್ಯಮಿ ಕುಪ್ಪೆ ಹರೀಶ್‌ಗೌಡ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಕುಪ್ಪೆ ಗ್ರಾಮದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ಜನಪರ ಆಡಳಿತ ನಡೆಸುವ ಜೊತೆಗೆ ಸರ್ವರ ಅಭ್ಯುದಯಕ್ಕಾಗಿ ಶ್ರಮಿಸಿದ್ದಾರೆ. ಅಲ್ಲದೇ ಅವರು ಒಂದು ಸಮುದಾಯಕ್ಕೆ ಸೀಮಿತರಾಗದೇ ಸರ್ವ ಜನಾಂಗದ ನಾಯಕರಾಗಿದ್ದು, ಬೆಂಗಳೂರು ಇಂದು ವಿಶ್ವ ದರ್ಜೆ ರಾಜಧಾನಿಯಾಗಿ ವಿಶ್ವವಿಖ್ಯಾತಿ ಪಡೆದಿದ್ದು, ಇದಕ್ಕೆ ಕೆಂಪೇಗೌಡರ ದೂರ ದೃಷ್ಟಿಯೇ ಕಾರಣ ಎಂದರು.

ನಿವೃತ್ತ ಉಪನ್ಯಾಸಕ ಕೆ.ಎ.ಜವರೇಗೌಡ ಮಾತನಾಡಿ, ಇತಿಹಾಸ ಸೃಷ್ಟಿಸಿದವರನ್ನು ನಮ್ಮ ಜೀವನಕ್ಕೆ ದಾರಿ ತೋರಿದ ಮತ್ತು ನಾಡಿನ ಅಭಿವೃದ್ಧಿಗಾಗಿ ದುಡಿದ ಮಹನೀಯರನ್ನು ಮರೆಯಬಾರದು ಎಂಬ ನಿಟ್ಟಿನಲ್ಲಿ ಇಂತಹ ಜಯಂತಿ ಮುಖ್ಯವಾಗಿದೆ. ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಬೆಂಗಳೂರಿನಲ್ಲಿ ಕೆಂಪೇಗೌಡರನ್ನು ಇತರೆ ರಾಜರುಗಳಿಗೆ ಹೋಲಿಸಲು ಸಾಧ್ಯವಿಲ್ಲ. ಅವರಲ್ಲಿದ್ದ ಬದ್ಧತೆಯ ಫಲವಾಗಿ ಶ್ರೇಷ್ಠ ಮತ್ತು ಜನಪರ ಆಡಳಿತ ನೀಡಿದ್ದಾರೆ. ಅವರು ಹಾಕಿಕೊಟ್ಟ ದಾರಿಯಲ್ಲಿ ಎಲ್ಲರೂ ಸಾಗೋಣ ಎಂದರು.

ಕಾರ್ಯಕ್ರಮದಲ್ಲಿ ಕೆ.ಆರ್.ನಗರ ಮಾತೃಶ್ರೀ ಸಂಸ್ಥೆ ಅಧ್ಯಕ್ಷ ಕೆ.ಜಿ.ಮಂಜುನಾಥ್, ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ ಕೆ.ಯೋಗಾನಂದ, ಅಬಕಾರಿ ಇಲಾಖೆಯ ಕೆ.ಎಸ್.ಚರಣ್, ಗ್ರಾಮಸ್ಥರಾದ ಮಾಸ್ಟರ್ ಹಿರಣ್ಣಯ್ಯ, ಕೆ.ಸತೀಶ್, ಕೆ.ಆರ್. ಲಕ್ಷ್ಮಣ್, ಮಂಜುನಾಥ, ದೇವರಾಜ್, ಚಂದ್ರಪ್ಪ ಡಿ.ಸುರೇಂದ್ರ ಶ್ರೀನಿವಾಸ್, ಮೋಹನ್, ಕೆ.ಸಿ.ಮಾದೇವ್, ಅಭಿಷೇಕ್, ಕೆ.ಆರ್. ಕುಮಾರ್, ಪ್ರತಾಪ್, ಎಳನೀರು ಉದ್ಯಮಿ ಕುಮಾರ್, ಪರಶಿವಮೂರ್ತಿ ನಾಗರಾಜ್ ಚಾರ್, ಕುಪ್ಪೆ ಸಹಕಾರ ಸಂಘದ ಸಿಇಓ ಪುನೀತ್ ಹಾಗೂ ಯಜಮಾನರು, ಕುಪ್ಪೆ ಗ್ರಾಮಸ್ಥರು ಹಾಜರಿದ್ದರು.

ಬನ್ನೂರಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ



ಬನ್ನೂರು ರೋಟರಿ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ರೋಟರಿ ಅಧ್ಯಕ್ಷ ಡಾ.ರಾಜೀವ್ ಮಕ್ಕಳಿಗೆ ಲಸಿಕೆ ಹಾಕಿದರು. ವಲಯ 9ರ ಪ್ರತಿನಿಧಿ ಅತ್ತಳ್ಳಿ ಕೆಂಪೇಗೌಡ, ನಿಯೋಜಿತ ಅಧ್ಯಕ್ಷ ಜಿ.ಪಿ.ಪ್ರಸನ್ನ, ರೋಟರಿ ಸದಸ್ಯ ಆನಂದ್, ವಡ್ಗಲ್ಲೇಗೌಡ ಸೇರಿದಂತೆ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರು ತಾಲೂಕು ಜಯಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ಚಾಲನೆ ನೀಡಿದರು. ಈ ವೇಳೆ ಆಡಳಿತ ವೈದ್ಯಾಧಿಕಾರಿ ಡಾ.ಹೆಚ್.ಎನ್. ಮಹದೇವಪ್ರಸಾದ್, ವೈದ್ಯರಾದ ಡಾ.ಶ್ರೀಚಂದ್, ಡಾ.ಚೈತ್ರಶ್ರೀ, ಕಚೇರಿ ಅಧೀಕ್ಷಕ ರಾಜೇಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವನಾಥ್, ರಮ್ಯ, ಮುಖಂಡರಾದ ಬಿ.ಮಲ್ಲಪ್ಪ, ವಿನೋದ್ ಸೇರಿದಂತೆ ಇನ್ನಿತರರಿದ್ದರು.

ಋಷಿಕೇಶ, ಹರಿದ್ವಾರ ಮಾದರಿ ಮುತ್ತತ್ತಿ ಅಭಿವೃದ್ಧಿ

● ಮುತ್ತತ್ತಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಭೇಟಿ ● ಇತ್ತೀಚೆಗೆ ಐವರು ಜಲಸಮಾಧಿ ಹಿನ್ನೆಲೆ ಭಕ್ತರ ಸುರಕ್ಷತೆಗೆ ಆದ್ಯತೆ ನೀಡಲು ಸೂಚನೆ ● ಈ ಬಾರಿ ತಮಿಳುನಾಡಿಗೆ ನೀರು ಬಿಡುವ ಪ್ರಶ್ನೆಯೇ ಇಲ್ಲ

ಹಲಗೂರು, ಜೂ.29– ಮಂಡ್ಯ ಜಿಲ್ಲೆಯ ಹಲಗೂರು ಸಮೀಪದ ಪ್ರಸಿದ್ಧ ಪ್ರವಾಸಿ ತಾಣ ಮುತ್ತತ್ತಿಯಲ್ಲಿ ಭಕ್ತರ ಸುರಕ್ಷತೆಗಾಗಿ ಋಷಿಕೇಶ ಮತ್ತು ಹರಿದ್ವಾರ ಮಾದರಿ ಕಾಲುವೆ ನಿರ್ಮಾಣದ ಮೂಲಕ ಸ್ನಾನಘಟ್ಟಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಇತ್ತೀಚೆಗೆ ಪ್ರವಾಸಕ್ಕೆ ಬಂದಿದ್ದ ಚನ್ನಪಟ್ಟಣ ಮೂಲದ ಐವರು ಜಲಸಮಾಧಿಯಾಗಿದ್ದ ಹಿನ್ನೆಲೆಯಲ್ಲಿ ಭಕ್ತರ ಸುರಕ್ಷತಾ ದೃಷ್ಟಿಯಿಂದ ಸೋಮವಾರ ಸಂಜೆ ಮುತ್ತತ್ತಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಜನೆಗೆ ಅಗತ್ಯವಿರುವ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಸೂಚಿಸಲಾಗಿದೆ ಎಂದು ಹೇಳಿದರು.

ಕಾವೇರಿ ನದಿ ತೀರದಲ್ಲಿ ಹಾಗೂ ಅಗತ್ಯವಿರುವ ಸ್ಥಳಗಳಲ್ಲಿ 20 ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗುವುದು. ಅರಣ್ಯ ಇಲಾಖೆ ಸಿಬ್ಬಂದಿಗಳೊಂದಿಗೆ ಪ್ರತಿದಿನ 8 ಭದ್ರತಾ ಸಿಬ್ಬಂದಿ ನಿಯೋಜಿಸಲಾಗುವುದು. ಜೊತೆಗೆ ಮುತ್ತತ್ತಿಯಲ್ಲಿ ಪೊಲೀಸ್ ಚೌಕಿ ನಿರ್ಮಿಸಿ, ಹಬ್ಬ ಹಾಗೂ ರಜಾ ದಿನಗಳಲ್ಲಿ ಓರ್ವ ಸಬ್ ಇನ್ಸ್‌ಪೆಕ್ಟರ್ ನಿಯೋಜಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.



ಮುತ್ತತ್ತಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಭೇಟಿ ನೀಡಿ ಪರಿಶೀಲಿಸಿದರು.

ಮೇಕೆದಾಟು ಅಣೆಕಟ್ಟು ನಿರ್ಮಾಣವಾದಲ್ಲಿ ಮುತ್ತತ್ತಿ ಮುಳುಗಡೆಯಾಗುವ ಸಾಧ್ಯತೆ ಇದ್ದರೂ, ಅಲ್ಲಿವರೆಗೆ ಪ್ರವಾಸಿಗರಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಮುತ್ತತ್ತಿ ವನ್ಯಜೀವಿ ವಲಯ ಪ್ರದೇಶವಾಗಿರುವುದರಿಂದ ಕಾವೇರಿ ತೀರದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ತಮಿಳುನಾಡಿಗೆ ನೀರು ಬಿಡಲ್ಲ: ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಕುರಿತು ಮಾತನಾಡಿದ ಸಚಿವರು, ಪ್ರಸ್ತುತ ಅಣೆಕಟ್ಟೆಗಳಲ್ಲಿ ನೀರಿನ ಕೊರತೆ ಇರುವುದರಿಂದ ನೀರು ಬಿಡಲು ಸಾಧ್ಯವಿಲ್ಲ. ಕುಡಿಯುವ ನೀರಿಗೆ ಆದ್ಯತೆ ನೀಡಲಾಗಿದೆ. ಕಾವೇರಿ ಜಲ ಆಯೋಗಕ್ಕೂ ನೀರಿನ ಕೊರತೆ ಕುರಿತು ಮಾಹಿತಿ ನೀಡಲಾಗಿದೆ. ಮಳೆ ಬಂದ ಬಳಿಕ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆಯಿದೆ ಎಂದು ಸ್ಪಷ್ಟಪಡಿಸಿದರು.

ಕೃಷ್ಣರಾಜಸಾಗರ ಜಲಾಶಯ ತುಂಬಿದ ನಂತರ ಬಾಗೀನ ಅರ್ಪಿಸಲಾಗುವುದು. ರೈತರ ಬಿತ್ತನೆಗೆ ಅನುಕೂಲವಾಗುವಂತೆ ಮೋಡ ಬಿತ್ತನೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಬರ ಪರಿಹಾರ ಕುರಿತು ಸರ್ಕಾರದ ಮಾನದಂಡಗಳನ್ನು ಆಧರಿಸಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಡಾ.ವಿ.ಜೆ.ಶೋಭಾರಾಣಿ, ಜಿಪಂ ಸಿಇಓ ಕೆ.ಆರ್.ನಂದಿನಿ, ಕಾವೇರಿ ವನ್ಯಜೀವಿ ವಲಯದ ಡಿಸಿಎಫ್ ಜಗನ್ನಾಥ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ತಹಸೀಲ್ದಾರ್ ಎಸ್.ವಿ.ಲೋಕೇಶ್ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಅಂಗಿಕಾರನ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವೆಲ್‌ಕಮ್ ಟು ದಿ ಜಂಗಲ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬಲರಾಮ(ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾನ್ ಸಿಟಿ (ತ)	4 ಪ್ರದರ್ಶನಗಳು
ಸಂಗಂ	
ವೆಲ್‌ಕಮ್ ಟು ದಿ ಜಂಗಲ್ (ಹಿ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ) + ಒಕ್ಕಡು (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರೈತರ ಮಕ್ಕಳಿಗೆ ಹೆಣ್ಣು ಕೊಡಿ (ಕ) + ಕಾಲಘಟ್ಟ (ಕ)	2+2 ಪ್ರದರ್ಶನಗಳು

ಪತಿಗಿಂತ ಹೆಚ್ಚು ದುಡಿವ ಪತ್ನಿಗೆ ಜೀವನಾಂಶ ನೀಡಬೇಕಿಲ್ಲ

ರಾಜ್ಯ ಹೈಕೋರ್ಟ್ ಮಹತ್ವದ ಆದೇಶ

ಬೆಂಗಳೂರು, ಜೂನ್ 29 ವಿಚ್ಛೇದನ ಪ್ರಕರಣದ ಜೀವನಾಂಶ ಕುರಿತು ಕರ್ನಾಟಕ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ತನಗಿಂತ ಪತ್ನಿ ಹೆಚ್ಚಿನ ಸಂಬಳ ಇದ್ದರೂ ಸಹ ಕೆಳಹಂತದ ಕೋರ್ಟ್ ಜೀವನಾಂಶ ನೀಡಲು ಆದೇಶವನ್ನು ಪ್ರಶ್ನಿಸಿದ್ದ ವ್ಯಕ್ತಿಯೊಬ್ಬರ ಅರ್ಜಿಯನ್ನು ಹೈಕೋರ್ಟ್ ಪುರಸ್ಕರಿಸಿದೆ.

ಗಂಡನಿಗಿಂತ ಹೆಚ್ಚು ದುಡಿವ ಪತ್ನಿಗೆ ಪತಿ ಜೀವನಾಂಶ ನೀಡಬೇಕಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಪತಿ ಸಂಬಳವೇ ಪತ್ನಿಗಿಂತ ಕಡಿಮೆಯಿದ್ದಾಗ ಜೀವನಾಂಶಕ್ಕೆ ಬಾಧ್ಯಸ್ಥನಲ್ಲ ಎಂದು ನ್ಯಾಯಮೂರ್ತಿ ಡಾ.ಚಿಲ್ಲಕೂರ್ ಸುಮಲತಾರಿದ್ದ ಹೈಕೋರ್ಟ್ ಪೀಠ ಅಭಿಪ್ರಾಯ ಪಟ್ಟಿದ್ದು, ಜೀವನಾಂಶ ನೀಡಲು ಸೂಚಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿದೆ.

ಪತಿಗಿಂತ ಪತ್ನಿಯ ಸಂಬಳವೇ ಹೆಚ್ಚು: 2024ರಲ್ಲಿ ವಿವಾಹವಾಗಿದ್ದ ದಂಪತಿ ಕೆಲ ತಿಂಗಳಲ್ಲೇ ಪ್ರತ್ಯೇಕವಾಗಿದ್ದು, ಪತಿಗೆ 60,646 ಸಂಬಳವಿದ್ದರೆ ಪತ್ನಿಗೆ ಮಾಸಿಕ 1 ಲಕ್ಷ ಸಂಬಳವಿತ್ತು. ಹೀಗಾಗಿ ಪತ್ನಿಗೆ ಮಕ್ಕಳು, ಇತರೆ ಬಾಧ್ಯತೆಗಳಿಲ್ಲದಿರುವುದನ್ನ ಪರಿಗಣಿಸಿದ್ದು, ಪತಿ ಸಂಬಳವೇ ಪತ್ನಿಗಿಂತ ಕಡಿಮೆಯಿದ್ದಾಗ ಜೀವನಾಂಶಕ್ಕೆ ಬಾಧ್ಯಸ್ಥನಲ್ಲ ಎಂದು ನ್ಯಾಯಮೂರ್ತಿ ಡಾ.ಚಿಲ್ಲಕೂರ್ ಸುಮಲತಾರಿದ್ದ ಹೈಕೋರ್ಟ್ ಪೀಠ ಅಭಿಪ್ರಾಯ ಪಟ್ಟಿದೆ. ಅಲ್ಲದೇ ಪತ್ನಿಯನ್ನು ಪತಿಯೇ ಸಲಹಬೇಕು ಎಂಬ ಕಾರಣದ ಮೇರೆಗೆ ಜೀವನಾಂಶವನ್ನು ಮಂಜೂರು ಮಾಡುವ ಆದೇಶವನ್ನು ಹೊರಡಿಸಲು ನ್ಯಾಯಾಲಯಗಳು ಒಲವು ತೋರಬಾರದು ಎಂದು ಸಲಹೆ ನೀಡಿದೆ.

ವಿವಾಹವಾಗಿದ್ದ ಕೆಲವೇ ತಿಂಗಳಲ್ಲೇ ಪ್ರತ್ಯೇಕ: 2024ರಲ್ಲಿ ವಿವಾಹವಾಗಿದ್ದ ದಂಪತಿ ಕೆಲ ತಿಂಗಳಲ್ಲೇ ಪ್ರತ್ಯೇಕವಾಗಿದ್ದು, ಪತಿಗೆ 60,646 ಸಂಬಳವಿದ್ದರೆ ಪತ್ನಿಗೆ ಮಾಸಿಕ 1 ಲಕ್ಷ ಸಂಬಳವಿತ್ತು. ಆದರೂ ಸಹ ಪತ್ನಿ ಜೀವನಾಂಶ ಕೋರಿ ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ವಿಚಾರಣೆ ನಡೆಸಿದ್ದ ವಿಚಾರಣಾ ನ್ಯಾಯಾಲಯವು, ಪ್ರತಿ ತಿಂಗಳು ಪತ್ನಿಗೆ 20 ಸಾವಿರ ಜೀವನಾಂಶ ನೀಡಲು ಆದೇಶಿಸಿತ್ತು. ಆದರೆ, ಇದನ್ನು ಪ್ರಶ್ನಿಸಿ ಪತಿ, ಹೈಕೋರ್ಟ್ ಮೆಟ್ಟಿಲೇರಿದ್ದು, ಈ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಪತಿಗಿಂತ ಹೆಚ್ಚು ದುಡಿವ ಪತ್ನಿಗೆ ಪತಿ ಜೀವನಾಂಶ ನೀಡಬೇಕಿಲ್ಲ. 1 ಲಕ್ಷ ರೂಪಾಯಿ ಸಂಬಳದಲ್ಲಿ ಪತ್ನಿ ತನ್ನ ನಿರ್ವಹಣೆ ಮಾಡಿಕೊಳ್ಳಬಲ್ಲಳು.

ಯಾವಾಗ ಪತ್ನಿಯು ಆರ್ಥಿಕವಾಗಿ ಸಬಲಳಾಗಿದ್ದಾಳೋ, ಪತ್ನಿಯ ಆದಾಯವು ಪತಿಯ ಆದಾಯಕ್ಕಿಂತ ಹೆಚ್ಚಾಗಿದೆಯೋ ಮತ್ತು ಮಕ್ಕಳನ್ನು ಸಾಕುವುದು ಸೇರಿದಂತೆ ಪತ್ನಿಯ ಕಡೆಯಿಂದ ಬೇರೆ ಯಾವುದೇ ಹೊಣೆಗಾರಿಕೆಗಳು ಇಲ್ಲದಿರುವಂತಹ ಸಂದರ್ಭಗಳಲ್ಲಿ, ಮಹಿಳೆಯರನ್ನು ಪುರುಷರೇ ಸಾಕಬೇಕು ಅಥವಾ ಪತ್ನಿಯನ್ನು ಪತಿಯೇ ಸಲಹಬೇಕು ಎಂಬ ಕಾರಣದ ಮೇರೆಗೆ ಜೀವನಾಂಶವನ್ನು ಮಂಜೂರು ಮಾಡುವ ಆದೇಶವನ್ನು ಹೊರಡಿಸಲು ನ್ಯಾಯಾಲಯಗಳು ಒಲವು ತೋರಬಾರದು ಎಂದು ಕೋರ್ಟ್ ತಿಳಿಸಿದೆ.

ತನ್ನ ಪತಿಯ ಜೀವನಮಟ್ಟಕ್ಕೆ ಅನುಗುಣವಾಗಿ ತನ್ನನ್ನು ತಾನು ಸಲಹಿಕೊಳ್ಳಲು ಪತ್ನಿಯ ಬಳಿ ಯಾವುದೇ ಆರ್ಥಿಕ ಮೂಲಗಳಿಲ್ಲ ಎಂದು ಸಾಬೀತಾದಾಗ ಮಾತ್ರ ನ್ಯಾಯಾಲಯಗಳು ಮಧ್ಯಂತರ ಅಥವಾ ಅಂತಿಮ ಜೀವನಾಂಶವನ್ನು ನೀಡಬೇಕಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಉಚ್ಚ ನ್ಯಾಯಾಲಯವು ಸ್ಪಷ್ಟಪಡಿಸಿದೆ.

ನಿವೃತ್ತರಾಗಲಿರುವ ಕನ್ನಡ–ಸಂಸ್ಕೃತಿ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿಯವರಿಗೆ ಕಲಾವಿದರ ಸನ್ಮಾನ



ಸೇವೆಯಿಂದ ನಿವೃತ್ತರಾಗಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅವರಿಗೆ ಮೈಸೂರು ರಂಗಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗ, ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕಲಾವಿದರ ಬಳಗದ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.

ಮೈಸೂರು, ಜೂ.29(ಎಂಕೆ)– ಮೈಸೂರು ರಂಗಾಯಣ ಭೂಮಿಗೀತ ವೇದಿಕೆಯಲ್ಲಿ ಸೇವೆಯಿಂದ ನಿವೃತ್ತರಾಗಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅವರಿಗೆ ಮೈಸೂರು ರಂಗಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗ, ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕಲಾವಿದರ ಬಳಗದ ವತಿಯಿಂದ ಸೋಮವಾರ ಅಭಿನಂದನೆ ಸಲ್ಲಿಸಲಾಯಿತು.

ಅಭಿನಂದನಾ ಸಮಾರಂಭ ಉದ್ಘಾಟಿಸಿದ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ ಮಾತನಾಡಿ, ಕಲಾವಿದರಲ್ಲಿ ಪ್ರೀತಿ–ವಿಶ್ವಾಸವನ್ನು ಉಳಿಸಿಕೊಂಡಿದ್ದರಷ್ಟೇ ಇಂತಹ ಅಭಿನಂದನಾ ಸಮಾರಂಭ ಏರ್ಪಡಿಸಲು ಸಾಧ್ಯ. ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಅವರು ಇಲಾಖೆಯಲ್ಲಿ ಸಾರ್ಥಕ ಕೆಲಸ ಮಾಡಿದ್ದಾರೆ. ನಾನು ಇಲಾಖೆಯಲ್ಲಿದ್ದಾಗ ಹಲವು ಕಾರ್ಯಕ್ರಮ ರೂಪಿಸುವಾಗ ಅವರು ನೀಡಿದ್ದ ಬೆಂಬಲವನ್ನು ಮರೆಯಲಾಗುವುದಿಲ್ಲ. ಇವರ ಸಹಕಾರದಿಂದ ರಾಜ್ಯಾದ್ಯಂತ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಯಿತು. ಮಲ್ಲಿಕಾರ್ಜುನಸ್ವಾಮಿ ಅವರೊಳಗೊಬ್ಬ ಕವಿ ಇದ್ದಾನೆ. ಹೀಗಾಗಿ ಮುಂದಾದರೂ ಅವರು ಬರವಣಿಗೆಗೆ ತಮ್ಮನ್ನು ತೊಡಗಿಸಿಕೊಳ್ಳಲಿ ಎಂದು ಕಿವಿಮಾತು ಹೇಳಿದರು.

ಹಿರಿಯ ಸಾಹಿತಿ ಸುಬ್ಬು ಹೊಲೆಯಾರ್ ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರು, ಮರೆಯಲ್ಲಿದ್ದ ಕಲಾವಿದರನ್ನು ಬೆಳಕಿಗೆ ತಂದವರು. ಪ್ರತಿಭಾವಂತರಿಗೆ ಕಾರ್ಯಕ್ರಮ ಕೊಡಿಸಿ ವಿದೇಶಕ್ಕೂ ಕಳುಹಿಸಿಕೊಟ್ಟಿದ್ದಾರೆ. ಸಾಹಿತ್ಯದ ವಿದ್ಯಾರ್ಥಿಯಾಗಿ ವಿವಿಯಲ್ಲಿ ಚಿನ್ನದ ಪದಕ ಪಡೆದಿದ್ದರು. ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ 34 ವರ್ಷಗಳ ಕಾಲ ಸೇವೆ ಸಲ್ಲಿಸಿ, ಕಲಾವಿದರ ಅಪಾರ ಪ್ರೀತಿ ಗಳಿಸಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಮೈಸೂರು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳೇಗೌಡ ನಾಗವಾರ, ಜಾನಪದ ವಿದ್ವಾಂಸ ಪ್ರೊ.ಈ.ಶಿ.ರಾಮಚಂದ್ರೇಗೌಡ, ಹಿರಿಯ ಸಾಹಿತಿ ಸುಬ್ಬು ಹೊಲೆಯಾರ್, ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಲೇಖಕ ಪ್ರಶಾಂತ ನಾಯಕ್, ವಿದುಷಿ ಶಾಂಭವಿ, ಶ್ರೀಮತಿ ಪುಟ್ಟಗೌರಮ್ಮ ಮಲ್ಲಿಕಾರ್ಜುನ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಅಪಘಾತದಲ್ಲಿ ಗಾಯಗೊಂಡ ಬಿಇಓ ಸ್ಥಾನಕ್ಕೆ ಬೇರೆಯವರ ನಿಯೋಜನೆ

ಮೈಸೂರು,ಜೂ.29(ಎಸ್‌ಪಿಎನ್)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಸಮೀಪ ಜೂ.22ರಂದು ತವೇರಾ ಹಾಗೂ ಗೂಡ್ಸ್ ವಾಹನದ ನಡುವೆ ಅಪಘಾತವಾಗಿ ಗಂಭೀರವಾಗಿ ಗಾಯಗೊಂಡಿದ್ದ ಮೂವರು ಬಿಇಓಗಳ ಜಾಗಕ್ಕೆ ಆಡಳಿತಾತ್ಮಕ ದೃಷ್ಟಿಯಿಂದ ಬೇರೆಯವರನ್ನು ನಿಯೋಜಿಸಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ(ಆಡಳಿತ)ರು ಸೋಮವಾರ ಆದೇಶಿಸಿದ್ದಾರೆ.

ಮೈಸೂರು ಉತ್ತರ ವಲಯ ಬಿಇಓ ಎಸ್.ರೇವಣ್ಣನವರ ಜಾಗಕ್ಕೆ ಡಯಟ್‌ನ ಹಿರಿಯ ಉಪನ್ಯಾಸಕ ಕೆ.ವಿ.ಸುರೇಶ್, ದಕ್ಷಿಣ ವಲಯ ಬಿಇಓ ಕೃಷ್ಣ ಅವರ ಜಾಗಕ್ಕೆ ಉಪನಿರ್ದೇಶಕರ ಕಚೇರಿಯ ಶಿಕ್ಷಣಾಧಿಕಾರಿಗಳಾದ ಅನಂತರಾಜು ಹಾಗೂ ಗ್ರಾಮಾಂತರ ಬಿಇಓ ಎಂ.ಪ್ರಕಾಶ್ ಅವರ ಜಾಗಕ್ಕೆ ನಿರುಪ ವೆಸ್ಲಿ ಅವರನ್ನು ನೇಮಿಸಿ ಆದೇಶಿಸಿದ್ದಾರೆ.

ಪ್ರತಿಯೊಬ್ಬರು ಬಸವಣ್ಣನವರ ತತ್ವಾದರ್ಶ ಪಾಲಿಸಬೇಕು

ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಕಿವಿಮಾತು



ಬಸವ ಜಯಂತಿ ಹಾಗೂ ಸ್ಪಂದನ ವೀರಶೈವ ಬಳಗದ 21ನೇ ವಾರ್ಷಿಕೋತ್ಸವದಲ್ಲಿ ಅಂಕಣಕಾರರಾದ ಜಿ.ಎಲ್.ತ್ರಿಪುರಾಂತಕ, ಬೇಬಿ ಬೆಟ್ಟದ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮೀಜಿ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಹಾಗೂ ಇತರರಿದ್ದರು.

ಮೈಸೂರು, ಜೂ.29(ಎಸ್‌ಪಿಎನ್)– ಬಸವಣ್ಣನವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಬದುಕಿನಲ್ಲಿ ರೂಢಿಗತ ಮಾಡಿಕೊಳ್ಳಬೇಕು ಎಂದು ಅಂಕಣಕಾರರಾದ ಜಿ.ಎಲ್.ತ್ರಿಪುರಾಂತಕ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಸ್ಪಂದನ ವೀರಶೈವ ಬಳಗದ ವತಿಯಿಂದ ಏರ್ಪಡಿಸಿದ್ದ ಬಸವ ಜಯಂತಿ ಹಾಗೂ ಬಳಗದ 21ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಹನ್ನೆರಡನೇ ಶತಮಾನದ ವಚನಗಳು ಅಂದಿನ ಶರಣ ನಿಜ ಜೀವನದ್ದಾಗಿದೆ. ಅವರ ವಚನಗಳೇ ಬದುಕಿನ ಸಾರವಾಗಿತ್ತು ಎಂದರು.

ಬಸವಣ್ಣನವರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದರಿಂದ ಹಲವು ಧಾರ್ಮಿಕ ಮಿಥ್ಯಗಳು ನೇಪಥ್ಯಕ್ಕೆ ಸರಿಯುತ್ತವೆ. ಕಾಯಕಕ್ಕೆ ಮೊದಲ ಆದ್ಯತೆ ನೀಡಿ, ದುಡಿಮೆಯೇ ದೇವರು ಎನ್ನುವ ಮನೋಭಾವಕ್ಕೆ ಅಂದಿನ ಶರಣರು ಬಂದಿದ್ದರು. ಹಾಗಾಗಿ ಹನ್ನೆರಡನೇ ಶತಮಾನದ ಶರಣರ ಜೀವನ ಪದ್ಧತಿ ವಚನ ಸಾಹಿತ್ಯದಲ್ಲಿ ಅಡಗಿದ್ದು, ಇದನ್ನು ಅಧ್ಯಯನ ಮಾಡಬಹುದು ಎಂದು ಸಲಹೆ ನೀಡಿದರು.

ಬೇಬಿ ಬೆಟ್ಟದ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮೀಜಿ ಮಾತನಾಡಿ, ಇಷ್ಟಲಿಂಗವನ್ನು ಶರಣ ಎದೆಯ ಮೇಲೆ ಕಟ್ಟಿಕೊಳ್ಳಬೇಕು. ಪ್ರತಿದಿನ ಬೆಳಗ್ಗೆ–ಸಂಜೆ ನಿತ್ಯ ಪೂಜೆ ಮಾಡಬೇಕು. ಇದರಿಂದ ಭಗವಂತನ ಸಾನ್ನಿಧ್ಯ ದೊರೆಯಲಿದೆ. ಕಳೆದ 19 ವರ್ಷಗಳಿಂದ ಸ್ಪಂದನ ವೀರಶೈವ ಬಳಗ, ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವುದು ಸ್ವಾಗತಾರ್ಹ ಎಂದರು.

ವೇದಿಕೆಯಲ್ಲಿ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭಾ ಜಯಪ್ರಕಾಶ್, ಸ್ಪಂದನ ವೀರಶೈವ ಬಳಗದ ಸಂಸ್ಥಾಪಕ ಅಧ್ಯಕ್ಷರಾದ ಗೀತಾ ಈಶ್ವರ್ ಉಪಸ್ಥಿತರಿದ್ದರು.

ಬಿಇಎಂಎಲ್ ಸೇರಿದಂತೆ ಪ್ರಮುಖ ಕೈಗಾರಿಕಾ ಘಟಕಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಸಂಚಾರ ದುಸ್ಸಾಹಸ!

● ಬೇಸಿಗೆಯಲ್ಲಿ ಧೂಳುಮಯ; ಮಳೆಗಾಲದಲ್ಲಿ ಕೊಚ್ಚೆ ಗುಂಡಿ ● ಇಂತಹ ಪರಿಸ್ಥಿತಿಯಲ್ಲಿ ಯಾವ ಉದ್ಯಮಿ ಇಲ್ಲಿ ಹೂಡಿಕೆಗೆ ಮುಂದಾಗುತ್ತಾನೆ...!?





ಮೈಸೂರು, ಜೂ.29(ಬಿಸಿಟಿ,ಎಂಕೆ)– ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿ ಬೆಮೆಲ್(ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್)ಕಾರ್ಖಾನೆ ಸಂಪರ್ಕಿಸುವ ಅತೀ ಮುಖ್ಯ ರಸ್ತೆಯೊಂದು ಸಂಪೂರ್ಣ ಹದಗೆಟ್ಟಿದ್ದು, ಕಾರ್ಖಾನೆಗಳಿಗೆ ಸರಕು ಸಾಗಿಸುವ ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆಯುಂಟಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ(ಕೆಐಎಡಿಬಿ) ವ್ಯಾಪ್ತಿಯ ಹೆಬ್ಬಾಳ ಕೈಗಾರಿಕಾ ಪ್ರದೇಶ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ ಹಾಗೂ ಬನ್ನಿಮಂಟಪ ಕೈಗಾರಿಕಾ ಪ್ರದೇಶದಲ್ಲಿನ ಬಹುತೇಕ ರಸ್ತೆಗಳು ಗುಂಡಿ ಬಿದ್ದು ಹಾಳಾಗಿದ್ದು, ಕೈಗಾರಿಕೆಗಳ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯುಂಟಾಗುತ್ತಿದೆ.

ಅದರಲ್ಲೂ ಬೆಮಲ್ ಸೇರಿದಂತೆ ಅನೇಕ ಪ್ರಮುಖ ಕೈಗಾರಿಕೆಗಳನ್ನು ಸಂಪರ್ಕಿಸುವ ರಸ್ತೆ(ಎಲ್ ಅಂಡ್ ಟಿ ಕಾರ್ಖಾನೆಯಿಂದ ಬೆಮಲ್ ಕಾರ್ಖಾನೆ ವರೆಗಿನ ರಸ್ತೆ)ಯು ಸಂಪೂರ್ಣವಾಗಿ ಗುಂಡಿ ಬಿದ್ದಿದ್ದು, ಬೇಸಿಗೆಯಲ್ಲಿ ಧೂಳಿನಿಂದ ಮಳೆಗಾಲದಲ್ಲಿ ಕೆಸರಿನಿಂದ ಆವೃತ್ತವಾಗುತ್ತಾ ವಾಹನಗಳ ಸಂಚಾರವೇ ಸವಾಲಾಗಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಸ್ಥಳೀಯರು ಹಾಗೂ ಪ್ರತಿಕೆ ಓದುಗರಾದ ವಿಜಯ್ ಕುಮಾರ್, ಈ ರಸ್ತೆಯಲ್ಲಿ ಸರಕುಗಳನ್ನು ಸಾಗಿಸುವ ಟ್ರಕ್‌ಗಳ ಜೊತೆಗೆ ಬಸ್‌ಗಳು, ದ್ವಿಚಕ್ರ ವಾಹನಗಳ ಸಂಚಾರ ಹೆಚ್ಚಾಗಿದ್ದು, ಗುಂಡಿ ಬಿದ್ದ ರಸ್ತೆಯಿಂದಾಗಿ ವಾಹನ ಸವಾರರು ಭಯದಲ್ಲೇ ಸಂಚರಿಸಬೇಕಾದ ದುಸ್ಥಿತಿ ನಿರ್ಮಾಣವಾಗಿದೆ ಎಂದಿದ್ದಾರೆ.

ಬೇಸಿಗೆಯಲ್ಲಿ ಧೂಳು, ಮಳೆಗಾಲದಲ್ಲಿ ಕೆಸರಿನಿಂದ ಆವೃತ್ತವಾಗುವ ಈ ರಸ್ತೆಯಲ್ಲಿ ಪ್ರತಿನಿತ್ಯ ಒಂದಲ್ಲಾ ಒಂದು ಕಡೆ ಅಪಘಾತಗಳಾಗುತ್ತಿವೆ. ವಿಪರ್ಯಾಸವೆಂದರೆ ರಸ್ತೆ ಅಭಿವೃದ್ಧಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾದರೆ ಕೆಐಎಡಿಬಿ ಅಧಿಕಾರಿಗಳು, ಸಂಚಾರ ಸಂಕೇತಗಳನ್ನು ಅಳವಡಿಸಿದರೆ ಏನೂ ಪ್ರಯೋಜನ ಎಂದು ಕಿಡಿಕಾರಿದ್ದಾರೆ.

ಪೂರ್ಣಗೊಳ್ಳದ ತೇಪೆ ಕಾಮಗಾರಿ: ಈಗಾಗಲೇ ಹದಗೆಟ್ಟಿರುವ ರಸ್ತೆಗೆ ತೇಪೆ ಹಾಕುವ ಕಾಮಗಾರಿಯನ್ನು ಆಗಾಗ ನಡೆಸಲಾಗುತ್ತದೆ. ಆದರೆ, ತೇಪೆ ಕಾಮಗಾರಿಯು ಒಂದು ಕಡೆಯಿಂದ ಮುಗಿಯುತ್ತಿದ್ದಂತೆ ಮತ್ತೊಂದು ಕಡೆಯಿಂದ ಹಾಕಿದ್ದ ಡಾಂಬರ್ ಕಿತ್ತು ಬಂದು ಮತ್ತಷ್ಟು ಆಳವಾದ ಗುಂಡಿಗಳಾಗುತ್ತಿವೆ. ಅಲ್ಲದೆ ರಸ್ತೆ ಬದಿಯಲ್ಲಿ ರಾಶಿ ರಾಶಿ ಕಸ ಬೀಳುತ್ತಿದ್ದು, ದಿನೇ ದಿನೆ ಸಮಸ್ಯೆ ಹೆಚ್ಚಾಗುತ್ತಿದೆ ಎಂದಿದ್ದಾರೆ.

ತೀವ್ರ ನಿರ್ಲಕ್ಷ್ಯ: ನೂರಾರು ಕೈಗಾರಿಕೆಗಳು, ಸಾವಿರಾರು ಕಾರ್ಮಿಕರು ಸಂಚರಿಸುವ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾಗಿರಬೇಕಾದ ರಸ್ತೆಗಳು ಮಾರಕವಾಗಿ ಪರಿಣಮಿಸಿವೆ. ಕೆಐಎಡಿಬಿ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಇಡೀ ಕೈಗಾರಿಕಾ ಪ್ರದೇಶವೇ ಅಸ್ತಿ ಪಂಜರದಂತೆ ಕಾಣುತ್ತಿದೆ. ಇನ್ಫೋಸಿಸ್ ಕ್ಯಾಂಪಸ್ ದಾಟಿದ ನಂತರ ಮೈಸೂರು ಕೈಗಾರಿಕಾ ಪ್ರದೇಶದ ನಿಜ ಸ್ವರೂಪ ಗೋಚರಿಸಲಿದೆ ಎಂದು ಆಕ್ಷೇಪಿಸಿದ್ದಾರೆ.

ಆಗ್ರಹ: ಲಕ್ಷಾಂತರ ತೆರಿಗೆ ಕಟ್ಟುವ ಕೋಟ್ಯಾಂತರ ರೂ.ಬಂಡವಾಳ ಹೂಡಿಕೆ ನೂರಾರು ಜನರಿಗೆ ಉದ್ಯೋಗ ನೀಡುವ ಕೈಗಾರಿಕಾ ಪ್ರದೇಶದಲ್ಲಿ ಅಗತ್ಯ ಮೂಲ ಸೌಕರ್ಯ ನೀಡುವಲ್ಲಿ ಕೆಐಎಡಿಬಿ ಸಂಪೂರ್ಣ ವಿಫಲವಾಗಿದೆ. ಇದೇ ರೀತಿ ಮುಂದುವರೆದರೆ ಅನೇಕ ಕಾರ್ಖಾನೆಗಳು ಮೈಸೂರನ್ನು ಬಿಟ್ಟು ಬೇರೆ ಕಡೆ ಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಎಚ್ಚರಿಸಿದ್ದಾರೆ.

ಸಹಕಾರ ಸಪ್ತಾಹ ಪ್ರಯುಕ್ತ ಗಿಡ ನೆಡುವ ಕಾರ್ಯಕ್ರಮ



ಮೈಸೂರಲ್ಲಿ ಸಹಕಾರ ಸಪ್ತಾಹದ ಪ್ರಯುಕ್ತ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಜೂ.29– ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಮೈಸೂರು ಜಿಲ್ಲಾ ಹಾಲು ಒಕ್ಕೂಟ, ಸಹಕಾರ ಇಲಾಖೆ ಹಾಗೂ ವಿವಿಧ ಸಹಕಾರ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಸಹಕಾರ ಸಪ್ತಾಹದ ಪ್ರಯುಕ್ತ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯ ಪ್ರಾರಂಭಗೊಂಡು ಐದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ 'ಸಹಕಾರದಿಂದ ಸಮೃದ್ಧಿ' ಧ್ಯೇಯದೊಂದಿಗೆ ಆಚರಿಸಲಾದ ಈ ಬಾರಿಯ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಡಾ.ಹೆಚ್.ವಿ.ರಾಜೀವ್ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ ಮತ್ತಿತರ ಗಣ್ಯರು ಗಿಡ ನೆಟ್ಟು ನೀರೆರೆದರು.

ಈ ಸಂದರ್ಭದಲ್ಲಿ ಒಕ್ಕೂಟದ ನಿರ್ದೇಶಕರಾದ ಕೆ.ಉಮಾಶಂಕರ್, ಮಲ್ಲಣ್ಣ, ಸಹಕಾರ ಸಂಘಗಳ ಉಪ ನಿಬಂಧಕ ಬೀರೇಂದ್ರ, ಸಹಕಾರ ಸಂಘಗಳ ಸಹಾಯಕ ಉಪ–ನಿಬಂಧಕ ಎಸ್.ಹೆಚ್ ಮನೋಜ್ ಕುಮಾರ್, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯಕ್, ನಿರ್ದೇಶಕರಾದ ಅರವಿಂದ್, ಮೈಸೂರಿನ ಕೆಎಂಎಫ್ ತರಬೇತಿ ಕೇಂದ್ರದ ಕನ್ನಿಕಾಪರಮೇಶ್ವರಿ, ಬ್ಯಾಂಕ್‌ನ ನಿರ್ದೇಶಕರಾದ ಸುನಿಲ್ ಕುಮಾರ್, ಮೈಮುಲ್ ವ್ಯವಸ್ಥಾಪಕರಾದ ಬಬಿತಾ, ಸೌಮ್ಯ, ಉಪನ್ಯಾಸಕರಾದ ಪೃಥ್ವಿರಾಜ್, ಗೀತಾ ಹಾಗೂ ಜಿಲ್ಲಾ ಸಹಕಾರ ಒಕ್ಕೂಟದ ವ್ಯವಸ್ಥಾಪಕ ಪಿ.ಎಸ್.ಹರೀಶ್, ಜಿಲ್ಲಾ ಸಹಕಾರ ಶಿಕ್ಷಕರಾದ ಎಲ್.ಅರುಣ್ ಕುಮಾರ್, ದ್ವಿತೀಯ ದರ್ಜೆ ಸಹಾಯಕ ಉಮೇಶ್, ಮಾದೇಗೌಡ ಮತ್ತಿತರರು ಉಪಸ್ಥಿತರಿದ್ದರು.



ಬೆಕ್ಕು ಕಾಣೆಯಾಗಿದೆ

ದಿ:28.06.2026 ರಂದು ಪ್ಯಾರಡೈಸ್ ಎನ್‌ಕ್ಲೈವ್ ಬನ್ನೂರ್ ರೋಡ್ ಹತ್ತಿರ ವಾಸವಾಗಿರುವ ನಮ್ಮ ಮನೆಯಲ್ಲಿ ಸುಮಾರು 10 ವರ್ಷದಿಂದ ಸಾಕಿರುವ ಕಂದು ಬಿಳಿ ಬಣ್ಣದ ಬೆಕ್ಕು ಕಾಣೆಯಾಗಿರುತ್ತದೆ. ದಯವಿಟ್ಟು ಅಕ್ಕ ಪಕ್ಕದ ಲೇಔಟ್‌ನವರು ಎಲ್ಲಾದರು ಮೇಲೆ ಚಿತ್ರದಲ್ಲಿರುವ ಬೆಕ್ಕು ಕಂಡಲ್ಲಿ ಈ ನಂಬರ್‌ಗೆ ದಯವಿಟ್ಟು ತಿಳಿಸಿ ನನ್ನ ಹೆಸರು ಕುಮಾರ್

ಮೊ: 9060118257 / 9110263932

SPORT FIX ORTHO CARE

A DEDICATED CENTRE FOR ADVANCED ORTHOPAEDICS | ARTHROSCOPY | JOINT REPLACEMENT | PHYSIOTHERAPY CARE

Dr. Jayavardhan Y.B.

Consultant Orthopaedic Surgeon,
Robotic Joint Replacement & Arthoscopy Specialist,
Apollo BGS Hospital, Mysore.

For Appointments Call: 99868 68865 / 63606 81125

#475, 2nd Floor, Udayaravi Road,1st Stage, Kuvempunagar, Mysuru-570023

COMMERCIAL PROPERTIES FOR SALE IN PRIME LOCATION

1) 43x100 East Facing (for Go Down - Rent / Sale) Pampapathi Road, Kuvempunagar 2nd stage

2) Ramakrishna Nagar, 'H' Block, East Facing 40x60

3) Dattagalli 44x42 East Facing 40x60 South Facing

4) MMG Temple Bell , Srirampura 40x55 - East Facing Site

5) 40x60 New House For Sale in Police Layout

Call - 9008111454

ನಿಮ್ಮ ಹಳೆಯ ಹಾಸಿಗೆ ಹತ್ತಿಯನ್ನು

ವಿದ್ಯುತ್ ಚಾಲಿತ ಯಂತ್ರದಿಂದ ಶುದ್ಧೀಕರಿಸಿ ನೂತನ ಹಾಸಿಗೆಯನ್ನು ತಯಾರಿಸಿಕೊಡುತ್ತೇವೆ.
ಸೂ: ನಿಮ್ಮ ಮನೆಯಿಂದ ಪಡೆಯುವುದು ಮತ್ತು ತಲುಪಿಸುವುದು ಉಚಿತ.

ಬಾಹುಸಾರ್ ಟ್ರೇಡಿಂಗ್ ಕಂ.

ನಂ.50, ಡಿ. ದೇವರಾಜ ಅರಸು ರಸ್ತೆ, ಮೈಸೂರು

9448062224, 0821-2427224

REPUTED DISTRIBUTOR COMPANY IN HEBBAL

REQUIRED

DELIVERY BOY - 2 No

Salary will be 15k to 17k
EDUCATION: PUC/SSLC - WITH DL

MARKETING EXECUTIVES - 2 No

MALE CANDIDATES
Salary will be 17.5k to 20k
Education: ITI/Dip in Mech
1 Year Experience

Contact No: 9972029007

ಹಸಿರು ನಮ್ಮ ಉಸಿರು

ಪ್ರೀತಿಯ ಸ್ಮರಣೆ



ಶ್ರೀ ಡಿ. ನಾರಾಯಣ

(ದಿ. ಸೌಮ್ಯನಾಯಕಿಯವರ ಪತಿ)

30-06-2014

ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ

- ಪ್ರೊ. ಎನ್. ಉಷಾ ರಾಣಿ, Ph.D
- ಶ್ರೀಮತಿ ಎನ್. ನಾಗರತ್ನ, M.A.
- ಹೆಚ್.ಎನ್. ಲಕ್ಷ್ಮಿ, B.E.,

ಕುಟುಂಬವರ್ಗ ಮತ್ತು ಸ್ನೇಹಿತರು



ಹೋಮೇಜ್ : ನೆನಪು

ನೆಲ್ಲಮಕ್ಕಡ ಶೀಲಾ ಕಾವೇರಪ್ಪ

4-7-1953 : 30-6-2024

ನಮ್ಮ ಬದುಕಿಗೆ ಬೆನ್ನೆಲುಬಾಗಿ, ಮೈಸೂರಿನ ಹೆಸರಾಂತ **"ಭರಣಿ ಆರ್ಟ್ ಗ್ಯಾಲರಿ"**ಯ ಸಹ–ಸಂಸ್ಥಾಪಕಿಯಾಗಿ ಸದಾ ಸೇವಾನಿರತರಾಗಿ ಬದುಕಿದ ನಿಮ್ಮ ಒಡನಾಟದ ನೆನಪು ಸದಾ ನಮ್ಮಲ್ಲಿ ತುಂಬಿದೆ. ನಿಮ್ಮ ಆತ್ಮ ಚಿರಶಾಂತಿಯಲ್ಲಿ ಇರಲೆಂದೂ ನಮ್ಮನ್ನು ಸತ್ಸೇವೆಯಲ್ಲಿ ಮುನ್ನಡೆಸಲೆಂದೂ ಪ್ರಾರ್ಥಿಸಿಕೊಳ್ಳುತ್ತೇವೆ.

ಪತಿ: ನೆಲ್ಲಮಕ್ಕಡ ಬಿ. ಕಾವೇರಪ್ಪ, ಮಗ: ಎನ್. ಕೆ. ಪೂಣಚ್ಚ, ಸೊಸೆ: ನೀಮಾ, ಮಗಳು: ಡಾ॥ ಕೃತಿ, ಅಳಿಯ : ಕೊಂಡಿರ ರತನ್ ಮೊಣ್ಣಪ್ಪ, ಮೊಮ್ಮಗ: ಧ್ರುವ ಕುಶಾಲಪ್ಪ, ಕುಟುಂಬಸ್ಥರು ಮತ್ತು ಬಂಧುಗಳು.

ಮೊಬೈಲ್ ಸಂಖ್ಯೆ: 94485 54221



